ಜನತೆಯ ಪ್ರಜಾಪ್ರಭುತ್ವ ವಿಜಯವಾಗಿ ಪರಿವರ್ತಿಸಿ

ಚುನಾವಣಾ ಪ್ರಚಾರದ ಮೂಲಕ ಜನತೆಯ ನಡುವೆ ಗಳಿಸಿದ ಹೊಸ ಪ್ರಭಾವವನ್ನು ಕ್ರೋಢೀಕರಿಸಲು ಪಕ್ಷವನ್ನು ಸಾಮೂಹಿಕ ಸಂಘಟನೆಗಳನ್ನು ಕಟ್ಟಲು ಸಕ್ರಿಯವಾಗಿ ದುಡಿಯಬೇಕೆಂದು ಪಕ್ಷದ ಎಲ್ಲಾ ಘಟಕಗಳಿಗೆ ಸಿ.ಪಿ.ಐ. (ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಕಾಂಗ್ರೆಸ್ (ಐ) ಸೋಲಿಗಾಗಿ, ಎಡ, ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸಲು ಅರ್ಪಣಾ ಭಾವದಿಂದ ದುಡಿದ ಪಕ್ಷದ ಎಲ್ಲಾ ಕಾರ್ಯಕರ್ತರನ್ನು ಸಾವಿರಾರು ಬೆಂಬಲಿಗರನ್ನು ಅಭಿನಂದಿಸುತ್ತಾ ಕೇಂದ್ರಸಮಿತಿ ಮುಂಬರುವ ದಿನಗಳಲ್ಲಿ ಇಂತಹ ಕ್ರೋಢೀಕರಣ ಪ್ರಜಾಪ್ರಭುತ್ವವನ್ನು, ಜಾತ್ಯಾತೀತತೆಯನ್ನು ಬಲಪಡಿಸುವಲ್ಲಿ, ಜನತೆಯ ಹಿತ ರಕ್ಷಿಸುವಲ್ಲಿ ಸಿ.ಪಿ.ಐ. (ಎಂ) ಮತ್ತು ಎಡಪಕ್ಷಗಳು ಹೆಚ್ಚೆಚ್ಚಾಗಿ ಮಧ್ಯಪ್ರವೇಶಿಸುವ ಅವಕಾಶ ಕಲ್ಪಿಸುವಲ್ಲಿ ಮಹತ್ವದ ಪಾತ್ರ ವಹಿಸಲಿದೆ ಎಂದು ಕೇಂದ್ರಸಮಿತಿ ಹೇಳಿದೆ.

ಸಿ.ಪಿ.ಐ.(ಎಂ)ನ ಕೇಂದ್ರ ಸಮಿತಿ ಡಿಸೆಂಬರ್ 5 ರಿಂದ 7ರವರೆಗೆ ನವದೆಹಲಿಯಲ್ಲಿ ಸಭೆ ಸೇರಿ ಚುನಾವಣಾ ಫಲಿತಾಂಶಗಳು ಮತ್ತು ಚುನಾವಣಾ ನಂತರದ ಬೆಳವಣಿಗೆಗಳ ವಿಮರ್ಶೆ ನಡೆಸಿದ ನಂತರ ನೀಡಿರುವ ಪತ್ರಿಕಾ ಹೇಳಿಕೆಯಲ್ಲಿ ಈ ಕರೆ ನೀಡಲಾಗಿದೆ.

ರಾಷ್ಟ್ರೀಯ ರಂಗ ಸರ್ಕಾರಕ್ಕೆ ಸ್ವಾಗತ:

ಕಾಂಗ್ರೆಸ್ (ಐ)ಯನ್ನು ಸೋಲಿಸುವಲ್ಲಿ ಯಶಸ್ವಿಯಾದ ಭಾರತದ ಜನತೆಯನ್ನು ಕೇಂದ್ರ ಸಮಿತಿ ಅಭಿನಂದಿಸಿತು. ಶ್ರೀ ವಿ.ಪಿ.ಸಿಂಗ್ ನೇತೃತ್ವದ ರಾಷ್ಟ್ರೀಯ ರಂಗ ಸರ್ಕಾರದ ರಚನೆಯನ್ನು ಸ್ವಾಗತಿಸುತ್ತಾ ಮತದಾರರು ಹೊರಿಸಿರುವ ಗುರುತರ ಜವಾಬ್ದಾರಿಯನ್ನು ನಿರ್ವಹಿಸುವಲ್ಲಿ ಅದು ಯಶಸ್ವಿಯಾಗುತ್ತದೆ ಎಂಬ ಭರವಸೆಯನ್ನು ಸಮಿತಿ ವ್ಯಕ್ತಪಡಿಸಿತು. ಪೊಲಿಟ್ ಬ್ಯೂರೋ ಸಲ್ಲಿಸಿದ ವರದಿಯನ್ನು ಅಂಗೀಕರಿಸಿ ರಾಷ್ಟ್ರೀಯ ರಂಗ ಸರ್ಕಾರವನ್ನು ಬೆಂಬಲಿಸುವ ಪೊಲಿಟ್‌ಬ್ಯೂರೋ ನಿರ್ಣಯವನ್ನು ಅನುಮೋದಿಸಿತು.

ಹಿಂಸಾಚಾರ ಮೋಸವನ್ನು ಮೀರಿ ನಿಂತ ಜನತೆಯ ಗೆಲುವು:

ಆಳುವ ಪಕ್ಷ ಅಭೂತಪೂರ್ವ ಹಿಂಸಾಚಾರ ಮತ್ತು ವಂಚನೆ ನಡೆಸಲು ಅಗಾಧ ಪ್ರಯತ್ನ ನಡೆಸಿದ ಸನ್ನಿವೇಶದಲ್ಲಿ ಒಂಭತ್ತನೇ ಸಾರ್ವತ್ರಿಕ ಚುನಾವಣೆ ನಡೆಯಿತು ಎಂದು ಕೇಂದ್ರ ಸಮಿತಿ ಗಮನಿಸಿತು. ರಾಜೀವ್‌ಗಾಂಧಿ ಕಣದಲ್ಲಿದ್ದ ಅಮೇಥಿ ಕ್ಷೇತ್ರದ ಹಲವು ವಿಭಾಗಗಳಲ್ಲಿ ಚುನಾವಣಾ ಆಯೋಗ ಮರು ಮತದಾನ ನಡೆಸಬೇಕಾಗಿ ಬಂತು. ಹಲವು ರಾಜ್ಯಗಳ ನೂರಾರು ಮತಗಟ್ಟೆಗಳಲ್ಲಿ ಅದು ಮರು ಮತದಾನದ ಆಜ್ಞೆ ನೀಡಲೇಬೇಕಾಯಿತು. ತ್ರಿಪುರಾದಲ್ಲಂತೂ ಸಾರಾ ಸಗಟು ವಂಚನೆ ನಡೆಯಿತು. ಪಶ್ಚಿಮ ತ್ರಿಪುರಾದ ಸಂಸದೀಯ ಕ್ಷೇತ್ರದಲ್ಲಿ- ಅಪಾರ ಭಯೋತ್ಪಾದನೆ, ಪೋಲಿಂಗ್ 'ಏಜೆಂಟರ ಮೇಲೆ ಹಲ್ಲೆ, ಬಾಂಬು ಎಸೆತ ಇತ್ಯಾದಿಗಳು ಕಂಡು ಬಂದರೆ ಪೂರ್ವ ತ್ರಿಪುರಾ ಕ್ಷೇತ್ರದಲ್ಲೂ ಅದೇ ತಂತ್ರಗಳನ್ನು ಭಯೋತ್ಪಾದನೆಯನ್ನು ಬಳಸಲಾಯಿತು. ತ್ರಿಪುರಾ ಚುನಾವಣೆಯೆಂಬುದು ಕಪಟ ನಾಟಕವಾಗಿತ್ತು. ಚುನಾವಣೆಯ ಮೊದಲು ಮತ್ತು ಮತದಾನದ ದಿನ ನೂರಕ್ಕೂ ಹೆಚ್ಚು ಜನ ಪ್ರಾಣ ಕಳಕೊಂಡಿದ್ದರೆ ಆಶ್ಚರ್ಯವೇನಿಲ್ಲ. ಆದರೂ ಕಾಂಗ್ರೆಸ್ (ಐ)ಗೆ ಅನುಕೂಲ ತೀರ್ಪು ದಕ್ಕಲಿಲ್ಲ. ಕಾಂಗ್ರೆಸ್ (ಐ)ಯನ್ನು ಅಧಿಕಾರದಿಂದ ಇಳಿಸಿ, ಕುಖ್ಯಾತ ರಾಜೀವ್ ಆಳ್ವಿಕೆಯನ್ನು ಕಿತ್ತೆಸೆದ ಮತದಾರರನ್ನು ಕೇಂದ್ರ ಸಮಿತಿ ಅಭಿನಂದಿಸಿತು.

ಜಾತ್ಯಾತೀತ ದೃಷ್ಟಿಕೋನದ ಕೈಮೇಲು

ಕಾಂಗ್ರೆಸ್ (ಐ) ನ ಸೋಲು ಭಾರತದ ಜನತೆಯ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ದೃಷ್ಟಿಕೋನಕ್ಕೊಂದು ಕಾಣಿಕೆ ಎಂದು ಕೇಂದ್ರ ಸಮಿತಿ ಪರಿಗಣಿಸಿದೆ. ಏಕೆಂದರೆ ಈ ಒಂಭತ್ತನೇ ಸಾರ್ವತ್ರಿಕ ಚುನಾವಣೆಯಷ್ಟು ಬೇರೆ ಯಾವ ಚುನಾವಣೆಯಲ್ಲೂ ಕೋಮು ಪ್ರಶ್ನೆಗಳು ಇಷ್ಟೊಂದು ಪ್ರಬಲವಾಗಿರಲಿಲ್ಲ. ರಾಷ್ಟ್ರೀಯ ಐಕ್ಯತೆ, ಜನತೆಯ ಪ್ರಜಾಪ್ರಭುತ್ವ ಹಕ್ಕು ಹಾಗೂ ಆಳುವ ಪಕ್ಷದ ದೇಶ ವಿರೋಧಿ ಧೋರಣೆಗಳ ಪ್ರಶ್ನೆಯೇ ಮೇಲೆ ಒಂದು ನೇರ ತೀರ್ಪು ಬರದಂತೆ ಉದ್ರೇಕಕಾರಿ ಕೋಮು ಪ್ರಶ್ನೆಗಳತ್ತ ಜನತೆಯ ಗಮನ ತಳ್ಳುವ ಇಂತಹ ಸುಯೋಜಿತ ಪ್ರಯತ್ನ ಹಿಂದೆಂದೂ ನಡೆದಿರಲಿಲ್ಲ.

ಭಿನ್ನ ತಂತ್ರಗಳನ್ನು ಅನುಸರಿಸಿದರೂ ಕೋಮು ಶಕ್ತಿಗಳು ಮತ್ತು ಕಾಂಗ್ರೆಸ್ (ಐ) ಇಬ್ಬರೂ ರಾಮ ಜನ್ಮ ಭೂಮಿ ಪ್ರಶ್ನೆಯನ್ನು ಎತ್ತಿ ತೋರಿಸುವಲ್ಲಿ ಒಂದಾಗಿದ್ದರು. ವಾತಾವರಣವನ್ನು ಕಲುಷಿತಗೊಳಿಸಲು ಅವರು ಸರ್ವ ಪ್ರಯತ್ನ ನಡೆಸಿದರು. ಕಾಂಗ್ರೆಸ್ (ಐ) ಆಳ್ವಿಕೆಯ ರಾಜ್ಯಗಳಲ್ಲಿ ಹಲವು ದಂಗೆಗಳು, ಕೊಲೆ- ಸುಲಿಗೆಗಳು ನಡೆದವು. ಬಾಗಲ್ಪುರದ ಸಾಮೂಹಿಕ ಹತ್ಯೆ ಇದರ ಶಿಖರ. ಆದರೆ ಮತದಾರರ ಸುಮಾರಾಗಿ ಈ ದ್ವಿಮುಖ ಆಟವನ್ನು ವಿಫಲಗೊಳಿಸಿದರು. ಕಾಂಗ್ರೆಸ್ (ಐ)ಯನ್ನು ಸೋಲಿಸುವಾಗಲೇ ಅದರ ಜನ ವಿರೋಧಿ ಧೋರಣೆಗಳನ್ನು ಒಂದೆಡೆ ವಿರೋಧಿಸುತ್ತಾ ಮತ್ತೊಂದೆಡೆ ರಾಮ ಜನ್ಮ ಭೂಮಿ ಪ್ರಶ್ನೆಯ ಮೇಲೆ ಸರಿಯಾದ ನಿಲುವು ತಳೆದು ಬಹುಸಂಖ್ಯಾತರು ಮತ್ತು ಅಲ್ಪ ಸಂಖ್ಯಾತರ ವಿಶ್ವಾಸ ಗಳಿಸಿದ ಜನತಾದಳ ಹಾಗೂ ರಾಷ್ಟ್ರೀಯ ರಂಗವನ್ನು ಅಧಿಕಾರಕ್ಕೆ ತಂದಿದ್ದಾರೆ. ಎಡ ಪಕ್ಷಗಳು ಶ್ರಮಿಸಿದ ಜಾತ್ಯಾತೀತ ದೃಷ್ಟಿಕೋನದ ಈ ಗೆಲುವು ಮತದಾರರ ಒಂದು ಮಹತ್ವದ ಸಾಧನೆ. ಮತದಾರರ ದೃಢ ನಿಲುವು ಇಲ್ಲದಿದ್ದರೆ ಈ ಸೂಕ್ಷ್ಮ ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರಗಳಲ್ಲಿ ಜನತಾ ದಳದ ಗೆಲುವು ಸಾಧ್ಯವಿರುತ್ತಿರಲಿಲ್ಲ. ಈ ಎರಡೂ ರಾಜ್ಯಗಳಲ್ಲಿ, ಎಲ್ಲೆಲ್ಲಿ ಕೋಮುವಾದಿ ಶಕ್ತಿಗಳು ಜನತಾ ದಳದ ಎದುರು ತಿಕ್ಕಾಟಕ್ಕೆ ಇಳಿದಿದ್ದವೋ ಅಲ್ಲೆಲ್ಲಾ ಅವು ಕಾಂಗ್ರೆಸ್ (ಐ) ಜೊತೆಗೆ ಸೋಲು ಕಂಡವು. ಉತ್ತರ ಪ್ರದೇಶದ ಸಂಸದೀಯ ಚುನಾವಣೆಗಳಲ್ಲಿ ಜನತಾ ದಳ ಪಡೆದ ದೊಡ್ಡ ವಿಜಯ ವಿಧಾನ ಸಭಾ ಚುನಾವಣೆಗಳಲ್ಲಿ ಗಳಿಸಿದ ನಿಚ್ಚಳ ಬಹುಮತ ನಮ್ಮ ದೇಶದ ವ್ಯಾಪಕ ಜನ ಸಮೂಹಗಳ ಮೂಲಭೂತ ರಾಷ್ಟ್ರೀಯ ಮತ್ತು ಪ್ರಜಾಸತ್ತಾತ್ಮಕ ದೃಷ್ಟಿಕೋನಕ್ಕೆ ಸಾಕ್ಷಿ.

ಅದೇ ವೇಳೆಗೆ ಕಾಂಗ್ರೆಸ್(ಐ) ಧೋರಣೆಗಳು ಹೇರಿದ ದಾರಿದ್ರ್ಯ ಮತ್ತು ವಿಘಟನೆಯ ದೊಡ್ಡ ಅಪಾಯದ ಹಿನ್ನೆಲೆಯಲ್ಲಿ ಮತದಾರರ ತೀರ್ಪು ನಿರ್ಣಾಯಕವಾಗಿರಲೇಬೇಕಿತ್ತು ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ. ಕಾಂಗ್ರೆಸ್ (ಐ) ವಿರುದ್ಧ ಹೋರಾಟದ ನೇತೃತ್ವ ವಹಿಸಿದ್ದ ಜಾತ್ಯಾತೀತ ಪಕ್ಷಗಳಿಗೆ, ಶಕ್ತಿಗಳಿಗೆ ಬಹುಮತ ಇಲ್ಲದೆ ನೇತಾಡುವ ಸಂಸತ್ತು ಈಗ ನಮ್ಮ ಮುಂದಿದೆ. ದಕ್ಷಿಣದಲ್ಲಿನ ತನ್ನ ದೊಡ್ಡ ವಿಜಯದಿಂದಾಗಿ ಕಾಂಗ್ರೆಸ್ (ಐ) ಇನ್ನೂ ಅತೀ ದೊಡ್ಡ ಪಕ್ಷವಾಗಿದೆ. ಇದು ಸಂಸತ್ತಿನೊಳಗೂ, ಹೊರಗಡೆಯೂ ಒಂದು ಸೂಕ್ಷ್ಮ ಶಕ್ತಿ ಸಮತೋಲ ಸೃಷ್ಟಿಸಿದೆ. ಇದನ್ನು ಜಾಗರೂಕತೆಯಿಂದ ವೀಕ್ಷಿಸುತ್ತಿರಬೇಕು. ಪ್ರಜಾಸತ್ತಾತ್ಮಕ, ಜಾತ್ಯಾತೀತ ಶಕ್ತಿಗಳ ಪರವಾಗಿ ಅದನ್ನು ಬದಲಿಸಬೇಕು.

ಬಿ.ಜೆ.ಪಿ. ಅಂತ

ಚುನಾವಣೆಯ ಸಮಯದಲ್ಲಿ ರಾಮ ಜನ್ಮ ಭೂಮಿ ಪ್ರಶ್ನೆಯನ್ನು ಎತ್ತಿ ಹಿಡಿದು ನ್ಯಾಯಾಲಯದ ತೀರ್ಪು ಒಪ್ಪಲು ನಿರಾಕರಿಸಿದ, ಈಗಲೂ ಕೂಡಾ ವಿವಾದಗ್ರಸ್ತ ಜಾಗದಲ್ಲೇ ದೇವಸ್ಥಾನ ಕಟ್ಟುವ (ಪರಿಣಾಮವಾಗಿ ಮಸೀದಿಯನ್ನು ಕೆಡವಲೇಬೇಕಾಗುವ) ಒತ್ತಾಯ ಹಾಕುತ್ತಿರುವ ವಿ.ಹೆಚ್.ಪಿ.ಯನ್ನು ಬೆಂಬಲಿಸುತ್ತಿರುವ ಬಿ.ಜೆ.ಪಿಯ ಶಕ್ತಿ ಹೆಚ್ಚಿರುವುದನ್ನು ಕೇಂದ್ರ ಸಮಿತಿ ಆತಂಕದಿಂದ ಗಮನಿಸಿದೆ. ಈ ರೀತಿಯ ಯೋಚನಾ ದಿಕ್ಕು ಕುರುಡು ಕೋಮುವಾದ. ಈಗ ಇದಕ್ಕೆ ಸಿಕ್ಕಿರುವ ಅಲ್ಪ ಸ್ವಲ್ಪ ಬೆಂಬಲವನ್ನು ಕೂಡಾ ಎಷ್ಟು ಬೇಗನೇ ಅದು ಕಳಕೊಂಡರೆ ಭಾರತಕ್ಕೆ, ಭಾರತದ ಜನರಿಗೆ ಒಳಿತು ಎಂದಿರುವ

ಪುಟ 8 ಕ್ಕೆ

ಕೆಲವು ಸೋಲುಗಳಿದ್ದಾಗ್ಯೂ ರಾಷ್ಟ್ರೀಯ ರಂಗದ ಸರ್ಕಾರದ ಸ್ಥಾಪನೆ ಒಂದು ದೊಡ್ಡ ವಿಜಯ. ಹಿಂದಿನ ವಿರೋಧ ಪಕ್ಷಗಳಲ್ಲಿ ಮತದಾರರು ವ್ಯಕ್ತಪಡಿಸಿದ ಇರಿಸಿದ ಒಂದು ವಿಶ್ವಾಸ. ಈ ಸರ್ಕಾರದ ಕಾರ್ಯನಿರ್ವಹಣೆ ಮತ್ತು ಧೋರಣೆಗಳ ಆಧಾರದ ಮೇಲೆ ಹೆಚ್ಚೆಚ್ಚು ಜನ ವಿಭಾಗಗಳು ಸರ್ಕಾರದ ಸುತ್ತ ನೆರೆದು ಈಗಿನ ತೂಗಾಡುವ ಸಂಸತ್ತನ್ನು ಜನತೆಯ ಒಂದು ದೊಡ್ಡ ವಿಜಯವನ್ನಾಗಿ ಮಾರ್ಪಡಿಸುವುದು ಎಲ್ಲರ ಮುಂದಿರುವ ಕರ್ತವ್ಯ.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ವಾರಪತ್ರಿಕೆ

ಸಂಪುಟ ೧೧ ಸಂಚಿಕೆ ೫೦-೫೧ ಡಿಸೆಂಬರ್ ೧೭ 1989

ಚುನಾವಣಾ ಫಲಿತಾಂಶಗಳ ಕುರಿತು ರಾಜ್ಯಸಮಿತಿ ವಿಮರ್ಶೆ

ರಾಜ್ಯದ ರಾಜಕೀಯದಲ್ಲಿ ಸತತವಾಗಿ ಮಧ್ಯ ಪ್ರವೇಶಿಸಲು ಮುಂದಾಗಬೇಕು

ರಾಜೀವ್‌ಗಾಂಧಿ ಕಾಂಗ್ರೆಸ್(ಐ) ಸರಕಾರ ಸೋತು ರಾಷ್ಟ್ರೀಯ ರಂಗ ಸರಕಾರ ಬಿ.ಜೆ.ಪಿ. ಮತ್ತು ಎಡಪಕ್ಷಗಳ ಬೆಂಬಲದಿಂದ ಅಸ್ತಿತ್ವಕ್ಕೆ ಬಂದಿದೆ. ಇದು ಉತ್ತರ, ಪಶ್ಚಿಮ, ಪೂರ್ವ ಹಾಗೂ ಮಧ್ಯ ಭಾರತದ ರಾಜ್ಯಗಳಲ್ಲಿ ಜನತೆ ಕಾಂಗ್ರೆಸ್ ವಿರುದ್ಧ ಮತನೀಡಿದ್ದರ ಫಲ. ಅದೇ ಸಮಯದಲ್ಲಿ ದಕ್ಷಿಣದ ರಾಜ್ಯಗಳಲ್ಲಿ ಕಾಂಗ್ರೆಸ್(ಐ)ಗೆ ಹೆಚ್ಚಿನ ಸ್ಥಾನಗಳು ದೊರೆತಿವೆ. ರಾಷ್ಟ್ರೀಯರಂಗದ ಪ್ರಮುಖ ಪಕ್ಷಗಳಾದ ಜನತಾ ದಳ ಮತ್ತು ತೆಲುಗು ದೇಶಂ ಆರುವರ್ಷಗಳಿಂದ ಆಳುತ್ತಾ ಬರುತ್ತಿದ್ದ ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಗಳೆರಡರಲ್ಲೂ ಭಾರೀ ಸೋಲನ್ನು ಅನುಭವಿಸಿದವು.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ ಸಿಕ್ಕಿದ ಜಯ ನಮ್ಮ ರಾಜಕೀಯಕ್ಕೆ ಆದ ಸೋಲೆಂದು ನಾವು ಪರಿಗಣಿಸಬೇಕೆಂದು ಸಿ.ಪಿ.ಐ.(ಎಂ) ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ. ಜನತಾ ದಳದವರು ಇದಕ್ಕೆ ಬಹುಮಟ್ಟಿಗೆ ಕಾರಣೀಭೂತರು ಎಂದು ಹೇಳಿದರೂ ನಮ್ಮ ಪಕ್ಷದ ಬಲಹೀನತೆಯೂ ಸ್ವಲ್ಪಮಟ್ಟಿಗೆ ಕಾರಣವೆಂದು ರಾಜ್ಯಸಮಿತಿ ಹೇಳಿದೆ.

ಬೆಂಗಳೂರಿನಲ್ಲಿ ಡಿಸೆಂಬರ್ 13 ಹಾಗೂ 14ರಂದು ಸಭೆ ಸೇರಿದ ರಾಜ್ಯ ಸಮಿತಿ 9ನೇ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳ ಕೂಲಂಕುಷ ವಿಮರ್ಶೆ ನಡೆಸಿತು. ಕೇಂದ್ರ ಸೆಕ್ರೆಟಾರಿಯೇಟ್ ಸದಸ್ಯ ಕಾಂ. ಪಿ. ರಾಮಚಂದ್ರನ್ ಸಭೆಯಲ್ಲಿ ಹಾಜರಿದ್ದರು.

ಜನತಾ ದಳದ ಭಾರೀ ಸೋಲಿನ ಕಾರಣಗಳನ್ನು ವಿಮರ್ಶಿಸುತ್ತಾ ಕೆಲವು ಮುಖ್ಯ ಅಂಶಗಳನ್ನು ರಾಜ್ಯಸಮಿತಿ ಗುರುತಿಸಿತು.

• ಜನತಾ ಆಡಳಿತದ ಕೊನೆಯ ಎರಡು ವರ್ಷಗಳಲ್ಲಿ ಜನತೆಯಲ್ಲಿ ಅತೃಪ್ತಿ ಬೆಳೆದುಬಂದಿತ್ತು. ರಾಜ್ಯ ಸರಕಾರ ಕೇಂದ್ರದ ಕಾಂಗ್ರೆಸ್ ಸರಕಾರದ ಜನವಿರೋಧಿ, ದೇಶ-ವಿರೋಧಿ ಧೋರಣೆ ಗಳು ಸೃಷ್ಟಿಸಿದ ಸಂಕಷ್ಟದ ಪರಿಸ್ಥಿತಿಯಲ್ಲಿ ಕೆಲಸ ಮಾಡಬೇಕಾಗಿತ್ತು. ಪಶ್ಚಿಮ ಬಂಗಾಳದಂತೆ ಮತ್ತೆ ಮತ್ತೆ ಸಾಮೂಹಿಕ ಚಳುವಳಿಗಳನ್ನು ನಡೆಸಿ ಜನತೆಯ ವಿಶ್ವಾಸ ಪಡೆಯಲು ಜನತಾ ದಳ ಸರಕಾರ ಪ್ರಯತ್ನಿಸಲಿಲ್ಲವಾದ್ದರಿಂದ ಎಲ್ಲಾ ಸಮಸ್ಯೆಗಳಿಗೆ ರಾಜ್ಯಸರಕಾರವೇ ಕಾರಣವೆಂಬ ಭಾವನೆ ಸಾರ್ವತ್ರಿಕವಾಯಿತು. ಕೇಂದ್ರಸರಕಾರದ ಧೋರಣೆಗಳ ವಿರುದ್ಧ ಹೋರಾಡುವುದಿರಲಿ, ಜನತಾಪಕ್ಷ ಇಬ್ಭಾಗವಾಗುವ ವೇದನೆಯ ದಿನಗಳಲ್ಲಿ ದೇವೇಗೌಡ ಮತ್ತು ರಾಮಕೃಷ್ಣ ಹೆಗಡೆ ಪರಸ್ಪರರ ಮೇಲೆ

ಪುಟ 3 ಕ್ಕೆ

ಹೊಸ ಸರ್ಕಾರಕ್ಕೆ ಬೆಂಬಲ

ದೆಹಲಿಯಲ್ಲಿ ಬೃಹತ್ ಸಿ.ಪಿ.ಐ.(ಎಂ) ರ್‍ಯಾಲಿ

"ಸ್ವಚ್ಛ ಆಡಳಿತ ಬಯಸುವವರೆಲ್ಲಾ ವಿ.ಪಿ.ಸಿಂಗ್ ಸರಕಾರಕ್ಕೆ ಬೇಷರತ್ ಬೆಂಬಲ ನೀಡಿ ಅದು ತನ್ನ ಐದು ವರ್ಷಗಳನ್ನು ಪೂರ್ಣಗೊಳಿಸುವಂತೆ ಮಾಡುತ್ತಾರೆ ಎಂಬ ನಿರೀಕ್ಷೆ ನಮಗಿದೆ" ಎಂದು ಸಿ.ಪಿ.ಐ.(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಇ.ಎಂ.ಎಸ್. ನಂಬೂದರಿಪ್ಪಾಡ್ ಹೇಳಿದ್ದಾರೆ.

ಅವರು ದೆಹಲಿಯ ಜುಮ್ಮಾ ಮಸೀದಿ ಚೌಕದಲ್ಲಿ ಬೃಹತ್ ರ್‍ಯಾಲಿಯನ್ನುದ್ದೇಶಿಸಿ ಮಾತನಾಡುತ್ತಿದ್ದರು. ಸಿ.ಪಿ.ಐ(ಎಂ)ನ ದೆಹಲಿ ರಾಜ್ಯ ಸಮಿತಿ ಡಿಸೆಂಬರ್ 6 ರಂದು ಸಂಘಟಿಸಿದ ಈ ರ್‍ಯಾಲಿ ಚುನಾವಣೆಯ ನಂತರ ರಾಜಧಾನಿಯಲ್ಲಿ ನಡೆದ ಮೊಟ್ಟ ಮೊದಲ ರ್‍ಯಾಲಿ. ಹೊಸ ಸರಕಾರದ ಬಗ್ಗೆ ಸಿ.ಪಿ.ಐ(ಎಂ) ನಿಲುವು ಹಾಗೂ ದೇಶದ ಮುಂದಿರುವ ಜ್ವಲಂತ ಪ್ರಶ್ನೆಗಳ ಬಗ್ಗೆ ಸಿ.ಪಿ.ಐ.(ಎಂ) ಅಭಿಪ್ರಾಯಗಳನ್ನು ವಿವರವಾಗಿ ತಿಳಿಯಲು ಜನರಲ್ಲಿ ಕಾತುರತೆ ಕಂಡು ಬಂದಿತು. ಆದ್ದರಿಂದ ದೆಹಲಿಯ ಎಲ್ಲಾ ಮೂಲೆಗಳಿಂದ ಸಾವಿರ ಗಟ್ಟಲೆ ಜನ ಇದರಲ್ಲಿ ಭಾಗವಹಿಸಿದ್ದರು.

ರಾಷ್ಟ್ರೀಯ ರಂಗ ಸರ್ಕಾರ ತುರ್ತಾಗಿ ಸಿ.ಪಿ.ಐ(ಎಂ) ಹಾಗೂ ಇತರ ಎಡಪಕ್ಷಗಳ ಎತ್ತಿಕೊಳ್ಳಬೇಕಾದ ಪ್ರಶ್ನೆಗಳ ಬಗ್ಗೆ ಬೆಂಬಲ ಅದಕ್ಕಿದೆಯೆಂದು ಮತ್ತೆ ಸ್ಪಷ್ಟ ಹೇಳುತ್ತಾ ಕಾಂ. ಇ.ಎಂ.ಎಸ್. ಇದರಲ್ಲಿ ಪಟ್ಟಿಮಾಡಿದರು. ಎಡಪಕ್ಷಗಳಿಗೆ ತಮ್ಮದೇ ಆದ ಕಾರ್ಯಕ್ರಮಗಳಿದ್ದರೂ ಅವು ಸರಕಾರದ ಮೇಲೆ ತಮ್ಮ ಅಭಿಪ್ರಾಯಗಳನ್ನು ಹೇರುವುದಿಲ್ಲ. ಬದಲಿಗೆ ಹೊಸ ಸರ್ಕಾರ ತನ್ನದೇ ಪ್ರಣಾಳಿಕೆಯನ್ನು ಅನುಷ್ಠಾನಕ್ಕೆ ತರುತ್ತದೆಂದು ನಿರೀಕ್ಷಿಸುತ್ತದೆ. ಬೇರೆ ಯಾವುದೇ ಪಕ್ಷ ತನ್ನ ಅಭಿಪ್ರಾಯವನ್ನು ಸರಕಾರದ ಮೇಲೆ ಹೇರಲು ಕೂಡಾ ಎಡಪಕ್ಷಗಳು ಬಿಡುವುದಿಲ್ಲ ಎಂದರು ಇ.ಎಂ.ಎಸ್.

ದೇಶದ ಮುಂದಿರುವ ಸಮಸ್ಯೆಗಳನ್ನು ಕೆಲವು ವಾರಗಳಲ್ಲಿ, ತಿಂಗಳಲ್ಲಿ ಪರಿಹರಿಸಲು ಸಾಧ್ಯವಿಲ್ಲ ಎಂದು ನಮಗೆ ಗೊತ್ತಿದೆ. ಅವುಗಳನ್ನು ಪರಿಹರಿಸಲು ರಾಷ್ಟ್ರೀಯ ಸರ್ವಸಮ್ಮತಿ ಬೇಕು. [illegible] ಸರ್ವಸಮ್ಮತಿ ರೂಪಿಸುವುದರಲ್ಲಿ [illegible] ಯಲ್ಲಿ ರಾಟೆ ಮಾಡಿಕೊಳ್ಳುವುದು

ಪುಟ ೭ ಕ್ಕೆ

ರಾಮಬಾಬುರವರ ಮೇಲೆ ಪೋಲೀಸ್ ದೌರ್ಜನ್ಯ

ತಕ್ಷಣ ತೀವ್ರ ಕ್ರಮಕ್ಕೆ ಒತ್ತಾಯ

ರಾಜ್ಯಪಾಲರ ಆಡಳಿತದಲ್ಲಿ ಶಿವಮೊಗ್ಗ ತಾಲ್ಲೂಕಿನ ರೈತ ಮುಖಂಡ ರಾಮಬಾಬು ರವರ ಮೇಲೆ ಪೋಲೀಸರ ತೀವ್ರ ದೌರ್ಜನ್ಯವನ್ನು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಬಲವಾಗಿ ಖಂಡಿಸಿದೆ. ತಪ್ಪಿತಸ್ಥರ ಮೇಲೆ ನೂತನ ರಾಜ್ಯ ಸರಕಾರ ತೀವ್ರ ಕ್ರಮ ಕೈಗೊಳ್ಳ ಬೇಕು ಹಾಗೂ ಎರಗನಾಳ ಗ್ರಾಮದ ಕುಮಾರಿ ಮಂಜುಳಾರನ್ನು ಮಾನಭಂಗ ಮಾಡಿ ಕೊಲೆಗೈದ ಅಪರಾಧಿಗಳನ್ನು ಕೂಡಲೇ ಬಂಧಿಸಬೇಕೆಂದುಒತ್ತಾಯಿಸಿದೆ.

ಡಿಸೆಂಬರ್ 9 ರಂದು ಪ್ರಾಂತ ರೈತ ಸಂಘದ ವತಿಯಿಂದ ಒಂದು ಪತ್ರಿಕಾ ಸಮ್ಮೇಳನ ನಡೆಸಿ ರಾಮ ಬಾಬುರವರ ಮೇಲೆ ದೌರ್ಜನ್ಯ ಹಾಗೂ ಅದರ ಹಿನ್ನೆಲೆ ಯನ್ನು ವಿವರಿಸಲಾಯಿತು. ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಚಂದ್ರಶೇಖರ ಬಾಳೆ. ಖಜಾಂಚಿ ಕಾಂ. ಉಗ್ರಪ್ಪ. ಪ್ರಾಂತ ಕೃಷಿ ಕೂಲಿಗಾರ ಸಂಘದ ಉಪಾಧ್ಯಕ್ಷ ಕಾಂ. ನಾಗರಾಜ್ ಮತ್ತು ದೌರ್ಜನ್ಯಕ್ಕೊಳಗಾದ ಕಾಂ. ರಾಮಬಾಬುರವರೂ ಹಾಜರಿದ್ದರು.

ರಾಜ ಭವನ ಪಿಕೆಟಿಂಗ್

2-10-1989 ರಂದು ಶಿವಮೊಗ್ಗ ಜಿಲ್ಲೆಯವರನ್ನು ಸೇರಿ ಬೆಂಗಳೂರು. ಮಂಗಳೂರು ಜಿಲ್ಲೆಯ ರೈತರಿಂದ ರಾಜ ಭವನ ಪಿಕೆಟಿಂಗ್ ಚಳುವಳಿಯಿದ್ದು ಸಾವಿರಕ್ಕೂ ಹೆಚ್ಚು ರೈತರು ಶಿವಮೊಗ್ಗ ಜಿಲ್ಲೆಯಿಂದ ಬಂದಿದ್ದು, ಅತಿ ಹೆಚ್ಚಿನ ಸಂಖ್ಯೆಯಲ್ಲಿ ಎರಗನಾಳ ಗ್ರಾಮದಿಂದಲೇ ಬಂದಿದ್ದರು. 01-10-1989 ರಂದು ಮಧ್ಯಾಹ್ನ ಮಂಜುಳಾ ಎಂಬ ಯುವತಿ ಯನ್ನು ಮಾನಭಂಗ ಮಾಡಿ ಕೊಲೆ ಮಾಡಲಾಯಿತು. ಅಂದು ರಾಮಬಾಬು ಹಾಗೂ ಇತರ ರೈತ ಸಂಘದ ಕಾರ್ಯ ಕರ್ತರು ಸಂತಾಪ ವ್ಯಕ್ತ ಮಾಡಿ ಪಿಕೆಟಿಂಗ್ ಗಾಗಿ ಬೆಂಗಳೂರಿಗೆ ಬಂದರು. ಸುತ್ತ ಮುತ್ತಲ ಗ್ರಾಮದ ಭೂ ಮಾಲೀಕ ಶಕ್ತಿಗಳು ಇದನ್ನು ರಾಮಬಾಬುರವರ ಮೇಲೆ ಹಾಕಲು ಪ್ರಯತ್ನ ನಡೆಸಿದವು. ಪೋಲೀಸ್ ಅಧಿಕಾರಿಗಳ . ಮೇಲೆ ಒತ್ತಾಯ ತಂದರು. ಪೋಲೀಸರಿಗೆ ಚೆನ್ನಾಗಿ ಪರಿಚಯವಿರುವ ರಾಮಬಾಬು ರವರನ್ನು ಪೋಲೀಸ್ ಠಾಣೆಗೆ ಬರಲು ತಿಳಿಸಲಾಯಿತು. 03-10-1989 ರಂದು ಬೆಂಗಳೂರಿನಿಂದ ಶಿವಮೊಗ್ಗಕ್ಕೆ ಹೋದ ರಾಮಬಾಬುರವನ್ನು ಶಿವಶಂಕರ್. ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿ ಯವರೇ ಪೋಲೀಸ್ ಠಾಣೆಗೆ ಕರೆದು ಕೊಂಡು ಹೋದರು. ಆಗ ಚರ್ಚೆ ಮಾಡಬೇಕಾಗಿದೆ ಎಂದು ತಿಳಿಸಿ. ಸಂಜೆ ಪೋಲೀಸ್ ಠಾಣೆಯಲ್ಲೇ ಉಳಿಸಿಕೊಂಡು ರಾತ್ರಿ ರಾಮಬಾಬುರವನ್ನು ಥಳಿಸ ಲಾಯಿತು. 04-10-1989 ರಂದು ರೈತ ಸಂಘದ ಮುಖಂಡರು ಹೋಗಿ ಪ್ರತಿಭಟನೆ ಮಾಡಲಾಗಿ ಬಿಡುಗಡೆ ಮಾಡಲಾಯಿತು. ಹಾಗೂ ಅವರ ಮೇಲೆ ಮಾಡಿದ ಹಲ್ಲೆಗೆ ಕ್ಷಮೆಯನ್ನು ಕೇಳಲಾಯಿತು.

ಮರಳಿ 15-10-1989 ರಂದು ಮತ್ತೆ ಬಂಧಿಸಿ. 19-10-1989 ರಂದು ಯಾವುದೇ ಶಿಕ್ಷೆಯಿಲ್ಲದೆ ಬಿಡುಗಡೆ ಮಾಡಲಾಯಿತು. 27-10-1989 ರಂದು ಮತ್ತೆ ಬಂಧನ ಮಾಡಲಾಯಿತು. ಅಂದು ಮಧ್ಯಾಹ್ನ ತೀವ್ರ ರೀತಿಯ ಹಿಂಸೆಯನ್ನು ಕೊಡಲಾಯಿತು. ಎರಡು ಕೈಗಳನ್ನು ಹಿಂದೆ ಕಟ್ಟಿ ಮೂರುವರೆ ಗಂಟೆ ತೂಗು ಹಾಕಲಾಯಿತು. ಇದರ ಪರಿಣಾಮವಾಗಿ ಎರಡು ಕೈಗಳು ಶಕ್ತಿ ಯನ್ನು ಕಳೆದುಕೊಂಡಿವೆ. ಅದೇ ಪರಿ ಸ್ಥಿತಿಯಲ್ಲಿ ಬಟ್ಟೆಗಳನ್ನು ಕಳಚೀರಾಖಪ್ ನಲ್ಲಿ ಹಾಕಲಾಯಿತು. ಇದನ್ನು ಪ್ರತಿಭಟಿಸಿ 1-11-1989 ರಂದು ಐದು ನೂರು ಜನ ರೈತರು ಪ್ರತಿಭಟನಾ ಮೆರವಣಿಗೆ ನಡೆಸಿ. ಜಿಲ್ಲಾ ಪೋಲೀಸ್ ಅಧಿಕಾರಿಗೆ ಮನವಿಯನ್ನು ಸಲ್ಲಿಸ ಲಾಯಿತು. ಆದರೂ ಸಹ ಏನೂ ಪ್ರಯೋಜನವಾಗಲಿಲ್ಲ. ಆದರೆ ಪರಿಸ್ಥಿತಿ ಯನ್ನು ಅರಿತು 5-11-1989 ರಂದು ಪೋಲೀಸರೇ ರಾಮಬಾಬುರವರನ್ನು ಮೆಡಿ ಕಲ್ ತಪಾಸಣೆಗೆ ಒಳಪಡಿಸಿದರು. ಅದರ ರೀಪೋರ್ಟು ಕೂಡ ಪಡೆಯಲಾಗಿದೆ.

07-11-1989 ರಂದು ಶ್ರೀಎಸ್.ಬಿ. ಶಿವಶಂಕರ ಅವರಿಂದ ಹೈಕೋರ್ಟಿಗೆ ಟೆಲಿಗ್ರಾಮ್ ಕೊಡಲಾಯಿತು. ಆಗ ಗ್ರಾಮೀಣ ಪೋಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಬಿ.ಆರ್. ಚಂದ್ರಶೇಖರ್ ಅವರು ಹೈಕೋರ್ಟಿಗೆ ಸುಳ್ಳು ಪ್ರಮಾಣ ಪತ್ರ ಹಾಕಿ ರಾಮಬಾಬು ಅವರನ್ನು ತಾವೇ ಹುಡುಕುತ್ತಿರುವುದಾಗಿ ತಿಳಿಸಿ ದ್ದಾರೆ. ಅನಂತರ 12-11-1989 ರಂದು ಬಿಡುಗಡೆ ಮಾಡಿದರು. ಅವರನ್ನು ಹೈ ಕೋರ್ಟಿನ ಮುಂದೆ ಹಾಜರು ಪಡಿಸಿ. ಪರಿಸ್ಥಿತಿಯನ್ನು ವಿವರಿಸಲಾಯಿತು. ಮೆಡಿಕಲ್ ರೀಪೋರ್ಟನ್ನು ಕೂಡ ಕೋರ್ಟಿಗೆ ಕೊಡಲಾಗಿದೆ. ಹೈ ಕೋರ್ಟಿನ ಆದೇಶದಂತೆ ನಿಮಾನ್ಸ್‌ನಲ್ಲಿ ಮೆಡಿಕಲ್ ತಪಾಸಣೆ ಮತ್ತೊಮ್ಮೆ ಮಾಡಿಸಲಾಗಿದೆ. ನಿಮಾನ್ಸ್‌ನಲ್ಲಿ ಚಿಕಿತ್ಸೆ ಕೊಡುತ್ತಿದ್ದ ವೈದ್ಯರು ಮೆಡಿಕಲ್ ಲೀಗಲ್ ಕೇಸ್ ಹಾಕಲು ಆಸ್ಪತ್ರೆಯಿಂದ ವಿಲ್ಸನ್ ಗಾರ್ಡನ್ ಪೋಲೀಸ್ ಠಾಣೆಗೆ ತಿಳಿಸ ಲಾಯಿತು. ಸಬ್ ಇನ್ಸ್‌ಪೆಕ್ಟರ್ ರವರು ನಿಮಾನ್ಸ್‌ಗೆ ಬಂದು ಕೇಸು ದಾಖಲು ಮಾಡಿಕೊಳ್ಳುವ ಬದಲು ರಾಮಬಾಬು ರವನ್ನು ಬೆದರಿಸಲು ಪ್ರಯತ್ನ ಮಾಡಿದ್ದಾರೆ.

ಜನತಾದಳದ ಮುಖಂಡರು ಗಮನಿಸಬೇಕು!!

ಇಲ್ಲಿ ಕೊಟ್ಟಿರುವುದು ಕೆ.ಜಿ.ಎಫ್. ನಿಂದ ಎಂ.ಎಲ್.ಎ ಯಾಗಿ ಈಗ ಚುನಾಯಿತರಾಗಿರುವ ಎಂ. ಭಕ್ತವತ್ಸಲಂ ಕೆ.ಜಿ.ಎಫ್. ನಗರ ಜನತಾದಳದ ಅಧ್ಯಕ್ಷ ಆರ್. ದೇವರಾಜ್ ಎಂಬುವರಿಗೆ ಬರೆದ ಕೃತಜ್ಞತಾ ಪತ್ರ ಹಾಗೂ ಚುನಾವಣೆಯ ಸಮಯದಲ್ಲಿ ಆರ್. ದೇವರಾಜ್ ಎಂ. ಭಕ್ತವತ್ಸಲಂ ಅವರಿಗೆ ಬರೆದ ಪತ್ರದ ಚಿತ್ರ. ಕೆಲವು ಕಡೆ ಜನತಾ ದಳದ ಸ್ಥಳೀಯ ಕಾರ್ಯಕರ್ತರು, ಮುಖಂಡರು ಈ ಚುನಾವಣೆಗಳ ರಾಷ್ಟ್ರೀಯ ಮಹತ್ವ ಅರಿಯದೆ ತಮ್ಮ ಪಕ್ಷದ ನಿಲುವಿಗೆ ವಿರುದ್ಧವಾಗಿ ಕೆಲಸ ಮಾಡಿದ್ದು ರಾಜ್ಯದಲ್ಲಿ ಜನತಾದಳ ತೀವ್ರ ಸೋಲಿಗೆ ಒಂದು ಕಾರಣ. ಈ ಪಾತ್ರಗಳು ಅದಕ್ಕೊಂದು ಉದಾಹರಣೆಯಷ್ಟೆ. ಇತರ ಹಲವು ಕಡೆ ಹೀಗೆ ನೇರವಾಗಿ ಪರೋಕ್ಷವಾಗಿ ಕೆಲಸ ಮಾಡಿರುವುದು ಗಮನಕ್ಕೆ ಬಂದಿದೆ. ಇಂತಹವರ ಬಗ್ಗೆ ಜನತಾದಳದ ಮುಖಂಡರು ಸೂಕ್ತ ಕ್ರಮ ಕೈಗೊಳ್ಳಬೇಕು.

ಇಲ್ಲಿ ಚೀಟಿಯೆಂಬ ಪದದ ಅರ್ಥವೇನಿರಬಹುದೆಂಬುದನ್ನು ಓದುಗರೇ ಊಹಿಸಿಕೊಳ್ಳಬಹುದು.

ಶ್ರೀ ದೇವರಾಜ್
ಅಧ್ಯಕ್ಷರು,
ಕೆ.ಜಿ.ಎಫ್. ಸಿಟಿ ಜನತಾದಳ
ಗಣೇಶ್ ಪುರಂ, ಕೆ. ಜಿ.ಎಫ್.
ಮಾನ್ಯರೇ,

ಕರ್ನಾಟಕ ವಿಧಾನಸಭೆಯ ಕೆ.ಜಿ.ಎಫ್ ವಿಧಾನಸಭಾ ಚುನಾವಣೆಗಳಲ್ಲಿ ನನ್ನ ಪಕ್ಷಕ್ಕೆ, ವಿಶೇಷವಾಗಿ ನನಗೆ ನೀವು ದಯವಿಟ್ಟು ನೀಡಿದ ಬೆಂಬಲಕ್ಕೆ ನನ್ನ ಕೃತಜ್ಞತೆ ಸೂಚಿಸಲು ನನಗೆ ಪದಗಳೇ ಸಿಗುತ್ತಿಲ್ಲ. ನನ್ನ ವಿರೋಧಿ ಟಿ.ಎಸ್. ಮಣಿ ವಿರುದ್ಧ ಸಮರದಲ್ಲಿ ನಾನು ಗೆದ್ದಿರುವುದು ಬಹುಪಾಲು ನಿಮ್ಮ ನೆರವಿನಿಂದಲೇ. ನಿಮ್ಮ ಈ ಎಲ್ಲಾ ಸಹಾಯಕ್ಕೆ, ವಿಶೇಷವಾಗಿ ರಾತ್ರಿಯಲ್ಲಿ ನೀವು ಕೆಲಸ ಮಾಡಿದ್ದಕ್ಕೆ ನಾನು ಕೃತಜ್ಞ. ನೀವು ಒಬ್ಬ ಮಹಾನ್ ರಾಜಕಾರಣಿ. ನೀವು ಸ್ವಇಚ್ಛೆಯಿಂದ ಪಾತ್ರವಹಿಸಿದ್ದು ಶ್ರೀ ಮುತ್ತು ಮಾಣಿಕ್ಕಂ (ಸಿ.ಪಿ.ಎಂ. ಬೆಂಬಲಿಗ) ನ ಯುವಜನರ ಗುಂಪನ್ನು ಬೇರೆಡೆ ಸೆಳೆಯುವಲ್ಲಿ ನಿಮ್ಮ ಮುಖ್ಯ ಪಾತ್ರ ನಿಮಗೊಂದು ಸವಾಲಾತ್ಮಕ ವಿಜಯ. ಮುತ್ತು ಮ್ಯಾಕಂನ ಕೆಲವೇ ಬೆಂಬಲಿಗರು ಮಾತ್ರ ಸಿ.ಪಿ.ಎಂ. ಗೆ ಕೆಲಸ ಮಾಡಿದರು. ಇಲ್ಲವಾದರೆ ಆಮೇಲೆ ಸ್ಪಷ್ಟವಾದಂತೆ ಗೆಲ್ಲುವುದು ಸುಲಭ ಕೆಲಸವಾಗಿರಲಿಲ್ಲ.

ಕರ್ನಾಟಕದಲ್ಲಿ ನನ್ನ ಕಾಂಗ್ರೆಸ್ ಆಳ್ವಿಕೆಯಲ್ಲಿ ನಿಮಗೆ ಬೇಕಾದ ಬೆಂಬಲವನ್ನು ನೀಡಲು ನನಗೆ ಸಂತೋಷವಾಗುತ್ತದೆ. ಯಾವುದೇ ನೆರವಿಗೆ ಹಿಂಜರಿಕೆಯಿಲ್ಲದೆ ನನ್ನನ್ನು ಸಂಪರ್ಕಿಸಿ.

ಧನ್ಯವಾದಗಳೊಂದಿಗೆ

ನಿಮ್ಮವ
ಸಹಿ
(ಎಂ.ಭಕ್ತವತ್ಸಲಂ. ಎಂ.ಎಲ್.ಎ)


ದಿನಾಂಕ12-11-89

ಪ್ರೀತಿಯ ಶ್ರೀ ಎಂ.ಜಿ.ಆರ್.ಎಮಂ. ಭಕ್ತವತ್ಸಲಂ, ಮಾಜಿ ಎಂ.ಎಲ್.ಎ.,

ನಿಮ್ಮ ಉಮೇದುವಾರಿಕೆಯ ಯಶಸ್ವಿಗಾಗಿ ಚುನಾವಣೆಯ ಕೆಲಸ ಮಾಡುವ ಜವಾಬ್ದಾರಿ ನನಗೆ ಒಪ್ಪಿಸಿ ದ್ದೀರಿ. ಇದು ನನ್ನ ಕರ್ತವ್ಯ ಎಂದು ಭಾವಿಸಿ ಅದನ್ನು ಒಪ್ಪಿದ್ದೇನೆ. ನೀವು ಖಂಡಿತಾ ಗೆಲ್ಲುತ್ತೀರೆಂದು ಭರವಸೆ ನಮಗಿದೆ. ಕೆ.ಜಿ.ಎಫ್.ನಲ್ಲಿ ನೀವು ನಮ್ಮ ಎಂ.ಎಲ್.ಎ. ಎಂಬುದಕ್ಕೆ ಯಾವ ಸಂಶಯವೂ ಇಲ್ಲ.

ನಾನು ಗುಣರವರಿಂದ 25ಚೀಟಿಗಳನ್ನು ಪಡೆದಿದ್ದೇನೆ. ಸದ್ಯಕ್ಕೆ ಇಷ್ಟು ಸಾಕು. ನೀವು ಭರವಸೆ ನೀಡಿರುವಂತೆ ಇನ್ನೂ 25ಚೀಟಿಗಳನ್ನು ಗುಣರವರ ಮೂಲಕ ವ್ಯವಸ್ಥೆ ಮಾಡಿ. ಇದುವರೆಗೆ ಚುನಾವಣಾ ಕೆಲಸ ಭರದಿಂದ ನಡೆಸಲು ಸಾಧ್ಯವಾಗಿದೆ. ನಾನು ಯುವಕರನ್ನು ಸಕ್ರಿಯವಾಗಿ ತೊಡಗಿಸಬಲ್ಲೆ. ಆದ್ದರಿಂದ ದಯವಿಟ್ಟು ಮೇಲೆ ಹೇಳಿದಂತೆ ತಕ್ಷಣ ಚೀಟಿಗಳನ್ನು ಕಳಿಸುವ ವ್ಯವಸ್ಥೆ ಮಾಡಿ. ದಯವಿಟ್ಟು ಮರೆಯಬೇಡಿ.

ನಿಮ್ಮವ
ಆರ್.ದೇವರಾಜ್


12.11.89
R. Devaraj

ಕರ್ನಾಟಕ ಸ್ಟೇಟ್ ಆಲ್ ಇಂಡಿಯಾ ಅಣ್ಣಾ ದ್ರಾವಿಡ ಮುನ್ನೇಟ್ರ ಕಳಗಂ

Karnataka State
All India Anna Dravida Munnetra Kazhagam

M. Backthavachalam ~~ex.~~ M.L.A. M.C.
State Chairman

Office : PHONE : 6323
O' Daniel Road,
Andersonpet,
Kolar Gold Fields-563 113

Resi : PHONE : 6493
1872, 5th Cross Road,
Robertsonpet,
Kolar Gold Fields-563 122

Dt. 27.11.89

Shri Devaraj,
President,
KGF City Janata Dal,
Ganesh Puram, KGF.

Dear Sir,

I am short of words to express my thanks to you for the kind support you had extended to me in particular and to my party in general in the K.G.F. Assembly Elections to the Karnataka Assembly. It is largely due to your help that I have succeeded in the battle with my opponent T.S. Mani and will be immensely grateful to you for all this help, expecialy you are worked for me during night time. You are a grate politician and your willing participation and keen role played in diverting the youths group of Shri. Muthu Manickam (Supporter of CPM) is a challangeble victory for you and only a few followers of Muthu Manickam were worked for CPM, otherwise it would not been an easy job for me to win as it later turned out to be.

I will be happy to extend any kind of support that you need during our congress rule in Karnataka. Please feel free to contact me for any help.

Thanking you

Yours sincerely,

(M. BACKTHAVACHALAM, MLA)

ಕೇಂದ್ರ ಸಮಿತಿ ಕರೆ

ಪುಟ 8 ರಿಂದ

ಸುತ್ತೇವೆ. ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯ ವಿರುದ್ಧ ಹಾಗೂ ಧೀರ ಪ್ಯಾಲೆಸ್ಟೈನೀ ಜನತೆಗೆ ಅವರ ಅಖಂಡ ಹಕ್ಕು ದೊರೆಯುವಂತೆ ಮಾಡುವ ಹೋರಾಟಕ್ಕೆ ನಾವು ಬದ್ಧರು. ನಮ್ಮ ನೆರೆ ದೇಶಗಳೊಂದಿಗೆ ಸಂಬಂಧಗಳನ್ನು ಸುಧಾರಿಸಲು ಪರಿಣಾಮಕಾರಿ ಕ್ರಮ ಗಳನ್ನು ಕೈಗೊಳ್ಳಲಾಗುವುದು" ವಿದೇಶಗಳ ವೈಷಮ್ಯಪೂರ್ಣ ಶಕ್ತಿಗಳು ಸೃಷ್ಟಿಸಿದ ಅತ್ಯಂತ ಕಷ್ಟದ ದಿನಗಳಲ್ಲಿ ದೇಶದ ನೆರವಿಗೆ ಬಂದ ಅಲಿಪ್ತ ಧೋರಣೆಗೆ ಬದ್ಧತೆಯ ಈ ಭರವಸೆಯನ್ನು ಎಲ್ಲಾ ಜನತೆ, ಶಕ್ತಿಗಳು ಸಂತೋಷದಿಂದ ಸ್ವಾಗತಿಸುತ್ತವೆ.

ಆರ್ಥಿಕದ ಮೇಲೆ ಸಾಮ್ರಾಜ್ಯಶಾಹಿ ಒತ್ತಡಗಳ ವಿರುದ್ಧ ಪ್ರತಿರೋಧಗಳು:

ದೇಶದ ಆರ್ಥಿಕ ಗಂಭೀರ ಬಿಕ್ಕಟ್ಟು ಎದುರಿಸುತ್ತಿದೆ ಎಂದು ಕೇಂದ್ರ ಸಮಿತಿ ಗಮನಿಸಿತು. ಕಾಂಗ್ರೆಸ್ (ಐ) ಸರ್ಕಾರ ದೊಡ್ಡ ಸಾಲ ಹೊರೆಯನ್ನು ವಿಶ್ವ ಬ್ಯಾಂಕು ಹಾಗೂ ಐ.ಎಂ.ಎಫ್. ನಿಂದ ತಮ್ಮ ಆಜ್ಞೆಗಳನ್ನು ಪರಿಪಾಲಿಸುವಂತೆ ಒತ್ತಡ ಹೇರುತ್ತಿರುವ ಒಂದು ಆರ್ಥಿಕವನ್ನು ಬಿಟ್ಟು ಹೋಗಿದೆ. ಇತ್ತೀಚಿನ ವಾರಗಳಲ್ಲಿ ತಿಂಗಳುಗಳಲ್ಲಿ ನಮ್ಮ ಆರ್ಥಿಕವನ್ನು ಅತಿಕ್ರಮಿಸಲು ಅಮೆರಿಕಾದ ಒತ್ತಡ ಹೆಚ್ಚಿದೆ. ಸೂಪರ್ 30ಮತ್ತಿತರ ಒತ್ತಡಗಳ ಮೂಲಕ ನಮ್ಮ ಆರ್ಥಿಕದ ಸ್ವಾವಲಂಬನೆಯನ್ನು ಬುಡಮೇಲು ಮಾಡಲು ಪ್ರಯತ್ನ ನಡೆದಿದೆ. ರಾಷ್ಟ್ರೀಯ ರಂಗದ ಸರ್ಕಾರ ಈ ಸನ್ನಿವೇಶವನ್ನು ಎದುರಿಸಿ ನಮ್ಮ ಸ್ವಾವಲಂಬನೆಯನ್ನು ಸಿ.ಪಿ.ಐ. (ಎಂ) ಬೆಂಬಲಿಸುವುದು ಎಂದು ಕೇಂದ್ರ ಸಮಿತಿ ಹೇಳಿದೆ.

ಪಂಜಿನ ಮೆರವಣಿಗೆ

ವಿಶ್ವ ಹಿಂದೂ ಪರಿಷತ್ ಸಂಘಟನೆ ರಾಮಜನ್ಮಭೂಮಿ ವಿವಾದ ಸೃಷ್ಟಿಸಿ ಅಲ್ಪ ಸಂಖ್ಯಾತ ಜನ ಸಮುದಾಯದ ಮಧ್ಯೆ ಭೀತಿಯ ವಾತಾವರಣವನ್ನುಂಟು ಮಾಡಿ ರುವುದನ್ನು ವಿರೋಧಿಸಿ ಡಿ.ವೈ.ಎಫ್.ಐ. ದ. ಕ. ಜಿಲ್ಲೆಯ ಕುಪ್ಪೆ ಪದವು ಪ್ರದೇಶ ಘಟಕ ಪಂಜಿನ ಮೆರವಣಿಗೆ ಯೊಂದನ್ನು ಸಂಘಟಿಸಿತು.

ಸಿ.ಪಿ.ಐ.(ಎಂ) ಗುರುಪುರ ಪ್ರದೇಶ ಸಮಿತಿ ಸದಸ್ಯ ಕಾ॥ ವಾಸುದೇವ ಆಚಾರಿ ಯವರು ಈ ಮೆರವಣಿಗೆ ಉದ್ಘಾಟಿಸಿ ದರು. ಎಸ್.ಎಫ್.ಐ. ಜಿಲ್ಲಾ ಸಮಿತಿ ಜತೆ ಕಾರ್ಯದರ್ಶಿ ಕಾ॥ ವಸಂತ ಆಚಾರಿ ಯವರು ಕೋಮು ಸೌಹಾರ್ದತೆಯ ಅನಿವಾರ್ಯತೆ ಬಗ್ಗೆ ಮಾತನಾಡಿದರು.

ರಾಷ್ಟ್ರೀಯ ಐಕ್ಯತೆ, ಸೌಹಾರ್ದತೆ, ಅಲ್ಪಸಂಖ್ಯಾತರ ಹಕ್ಕು ರಕ್ಷಣೆ, ಕುರಿತು ಘೋಷಣೆ ಕೂಗುತ್ತಿದ್ದ ಮೆರವಣಿಗೆಯ ನೇತೃತ್ವವನ್ನು ಅಮ್ಮದ್, ಬಾಸ್ಕರ ಆಚಾರಿ, ಸುಧಾಕರ ಹಸನಬ್ಬವಹಿಸಿದ್ದರು. 100 ಮಂದಿ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

ಪುಟ 1 ರಿಂದ

ಕೆಸರೆರಚಿಕೊಳ್ಳುವಿ ಆ ವರ್ಷಗಳಲ್ಲಿ ರಾಜ್ಯದಲ್ಲಿ ನೀರಾವರಿ ಯೋಜನೆ ಕುಂಠಿತವಾಗಿದ್ದಕ್ಕೆ, ವಿದ್ಯುತ್ ಕೊರತೆಯುಂಟಾದುದಕ್ಕೆ, ಸರಕಾರೀ ಪಾಲಿ ಟೆಕ್ನಿಕ್‌ಗಳಿಗೆ ತಾವೇ ಕಾರಣವೆಂದು ನಮ್ಮ ಕಡೆಗೆ ಬೆರಳು ಮಾಡಿ ತೋರಿಸಿಕೊಂಡರು. ಇದನ್ನು ಕಾಂಗ್ರೆಸ್(ಐ) ಚೆನ್ನಾಗಿ ಬಳಸಿ ಕೊಂಡಿತು.

ಹೆಗಡೆಯವರಾಗಲೀ, ಅವರ ಪಕ್ಷ ವಾಗಲಿ ರಾಷ್ಟ್ರೀಯ ಪ್ರಶ್ನೆಗಳನ್ನು ಎತ್ತಿ ಪ್ರಚಾರ ಮಾಡಲಿಲ್ಲ. ಅವರದೇ ಪಕ್ಷ ಉತ್ತರ ಭಾರತದಲ್ಲಿ ಮಾಡಿದಂತೆ ಉನ್ನತ ಸ್ಥಾನಗಳಲ್ಲಿ ಭ್ರಷ್ಟಾಚಾರ, ರಾಮಜನ್ಮ ಭೂಮಿ–ಬಾಬ್ರಿಮಸೀದಿ ಪ್ರಶ್ನೆಯೂ ಕಾಂಗ್ರೆಸ್‌ನ ಆಟ, ಕಾಂಗ್ರೆಸ್ ರಾಜ್ಯಗಳಲ್ಲಿ ಮತೀಯ ಗಲಭೆಗಳು, ಕಾಶ್ಮೀರ, ಪಂಜಾಬ್ ಸ್ಥಿತಿಗೆ ಕಾಂಗ್ರೆಸ್ ನೀತಿಗಳ ಹೊಣೆ, ರಾಜ್ಯಗಳ ವಿರುದ್ಧ ಪಕ್ಷಪಾತದ ನೀತಿ ಇವುಗಳು ಕುರಿತ ಪ್ರಚಾರ ನಡೆಸಲಿಲ್ಲ, ಬದಲು ಅವರು ನಡೆಸಿದ ಪ್ರಚಾರ ವೈಖರಿ– "ನೀವು ನಮ್ಮ ಜನತಾದಳದ ಆರು ವರ್ಷಗಳ ಆಡಳಿತದ ಸಾಧನೆಗಳನ್ನು ಹಿಂದಿನ ಕಾಂಗ್ರೆಸ್(ಐ) ಸರಕಾರದ ಜತೆಗೆ ತುಲನೆ ಮಾಡಿ". ಜನತಾದಳದ ಕಳೆದೆರಡು ವರ್ಷಗಳ ಆಡಳಿತವೇ ನೆನಪಿನಲ್ಲಿ ಹಸಿರಾಗಿದ್ದ ಜನತೆ ಸ್ವಾಭಾವಿಕವಾಗಿಯೇ ಅದರ ವಿರುದ್ಧ ಮತನೀಡಿದರು. ರಾಷ್ಟ್ರೀಯ ಪ್ರಶ್ನೆಗಳ ಬಗ್ಗೆ ಚಿಂತನೆಯ ವಾತಾವರಣವನ್ನೇ ಜನತಾದಳದ ಚುನಾವಣಾ ಪ್ರಚಾರ ಮೂಡಿಸಲಿಲ್ಲ.

• ಜನತಾದೊಳಗೆ ಕಳೆದ ಎರಡು ವರ್ಷಗಳಿಂದ ನಡೆಯುತ್ತಾ ಬಂದ ಒಳ ಜಗಳ, ವಿಭಜನೆ, ಹೆಗ್ಡೆ ವಿರುದ್ಧ ಜನತಾ ಪಕ್ಷದ ಸತತ ಪ್ರಚಾರ, ಲಂಚಗುಳಿತನದ ಆರೋಪಗಳು ರಾಜ್ಯಪಾಲರ ಆಡಳಿತದಲ್ಲಿ ತನಿಖೆಗಳು, ಅದಕ್ಕೆ ಪತ್ರಿಕೆಗಳಲ್ಲಿ ಸಿಕ್ಕ ವ್ಯಾಪಕ ಪ್ರಚಾರ, 18 ಸದಸ್ಯರ ಬಂಡಾಯದಿಂದ ಬೊಮ್ಮಾಯಿ ಸರಕಾರದ ಪತನದಿಂದ ಜನರಲ್ಲಿ ಜಿಗುಪ್ಸೆ– ಇದನ್ನೆಲ್ಲಾ ಕಾಂಗ್ರೆಸ್(ಐ) ತನ್ನ ಪ್ರಚಾರದಲ್ಲಿ ಬಳಸಿಕೊಂಡಿತು. ರಾಜ್ಯಪಾಲರ 7 ತಿಂಗಳ ದುರಾಡಳಿತ ಈ ಅತೃಪ್ತಿ, ಜಿಗುಪ್ಸೆಯನ್ನು ಮುಚ್ಚಿಹಾಕಲಿಲ್ಲ. ಈ ಬಗ್ಗೆ ನಮ್ಮ ಪಕ್ಷ ಬೊಮ್ಮಾಯಿ ಸರಕಾರ ಬಂದಾಗ ಸರಿಯಾಗಿ ವಿಮರ್ಶೆ ಮಾಡಿದ್ದರೂ, ಚುನಾವಣಾ ಪೂರ್ವದಲ್ಲಿ ಸರಿಯಾಗಿ ವಿಶ್ಲೇಷಿಸಲಿಲ್ಲ. ಜನತಾಪಕ್ಷದಿಂದಾಗಿ 60 ಸ್ಥಾನಗಳನ್ನು, ಜನತಾ ಪಕ್ಷ ಮತ್ತು ರಾಜ್ಯರೈತಸಂಘದಿಂದಾಗಿ ಒಟ್ಟು ಸುಮಾರು 100 ಸ್ಥಾನಗಳನ್ನು ಕಳೆದು ಕೊಂಡಿತು. 7 ಲೋಕಸಭಾ ಸ್ಥಾನಗಳಲ್ಲಿ ಇಂತಹ ಕಾರಣಗಳಿಂದಲೇ ಸೋಲುಂಟಾ ಯಿತು.

• ಎಡಪಕ್ಷಗಳು ಮತ್ತು ದಲಿತ ಸಂಘರ್ಷಸಮಿತಿಯ ಜತೆ ಹೊಂದಾಣಿಕೆಯಲ್ಲಿ ಸಿ.ಪಿ.ಐ., ಡಿ.ಎಂ.ಕೆ. ಯೊಂದಿಗೆ ಅದು ಸಾಧ್ಯವಾಗದ್ದರಿಂದ ಈ ಪಕ್ಷಗಳೂ, ಬಿ.ಜೆ.ಪಿ., ಜನತಾಪಕ್ಷ, ರಾಜ್ಯರೈತ ಸಂಘಗಳಂತೆ ಜನತಾದಳದ ಆಡಳಿತವನ್ನೇ ಗುರಿ ಮಾಡಿ ಚಳುವಳಿ ಪ್ರಚಾರ ನಡೆಸಿದವು. ಕೇವಲ ಸಿ.ಪಿ.ಐ(ಎಂ) ಮಾತ್ರವೇ ಜನತಾದಳದ ಪರವಾಗಿ ಪ್ರಚಾರ ಮಾಡುವಂತಾಯಿತು. ಜನತಾದಳ ಹೊಂದಾಣಿಕೆಯ ಮಾತುಕತೆಗಳಲ್ಲಿ ತಳೆದ ಧೋರಣೆಯೂ ಈ ಪರಿಸ್ಥಿತಿಗೆ ತನ್ನ ಕಾಣಿಕೆ ನೀಡಿತು.

ಲೋಕಸಭಾ ಚುನಾವಣೆಯಲ್ಲಿ ಜನತಾದಳದ ಉಮೇದುವಾರರು ಹೆಚ್ಚಿನ ಉತ್ಸಾಹದಿಂದ ಕೆಲಸ ಮಾಡಲಿಲ್ಲ. ಆದ್ದರಿಂದ ಕೋಟಿಗಟ್ಟಲೆ ರೂಪಾಯಿ ಸುರಿದ ಕಾಂಗ್ರೆಸ್ ಲೋಕಸಭಾ, ವಿಧಾನಸಭಾ ಸ್ಥಾನಗಳನ್ನು ಪಡೆದುಕೊಳ್ಳುವಂತಾಯಿತು. ಜನತಾದಳದ ಇಂತಹ ಲೋಕಸಭಾ ಉಮೇದುವಾರರಿಂದಾಗಿ

"ರಾಜ್ಯದ ರಾಜಕೀಯದಲ್ಲಿ ಸತತ ಮಧ್ಯ ಪ್ರವೇಶ ಅಗತ್ಯ"

ನಮ್ಮ ಪಕ್ಷವು ಸ್ಪರ್ಧಿಸಿದ ಸ್ಥಾನಗಳಲ್ಲೂ ಹೊಡೆತ ಬೀಳುವಂತಾಯಿತು. ಕಾಂಗ್ರೆಸ್– ಎ.ಡಿ.ಎಂ.ಕೆ ಮೈತ್ರಿ, ಡಿ.ಎಂ.ಕೆ ಜತೆ ಜನತಾದಳ ರಾಜ್ಯದಲ್ಲಿ ಹೊಂದಾಣಿಕೆ ಸಾಧ್ಯವಾಗದ್ದು– ಇದರ ಪರಿಣಾಮ ರಾಜ್ಯದ ತಮಿಳು ಭಾಷಾ ಅಲ್ಪಸಂಖ್ಯಾತರ ಮೇಲೆ ಬಿದ್ದು ಹೆಚ್ಚಿನ ಮತ ಕಾಂಗ್ರೆಗೆ ಹೋಯಿತು. ಕ್ರಿಶ್ಚಿಯನ್ ಹಾಗೂ ಮುಸ್ಲಿಂ ಅಲ್ಪಸಂಖ್ಯಾತರು ತಮ್ಮ ಭದ್ರತೆಯ ಬಗ್ಗೆ ಇನ್ನು ಕಾಂಗ್ರೆ ಪಕ್ಷವನ್ನೆ ನೆಚ್ಚುವಂತೆ ಕಾಣುತ್ತದೆ. ಮುಸ್ಲಿಂಮರು ಮೊದಲು ಸಿ.ಪಿ.ಐ.(ಎಂ) ಉಮೇದುವಾರರ ಪರವಾಗಿ ಒಲವು ತೋರಿಸಿದರೂ ಕೊನೆಯ 2–3 ದಿನಗಳಲ್ಲಿ ಕಾಂಗ್ರೆ ಕಡೆಗೆ ತಿರುಗಿದರು. ಹರಿಜನ–ಗಿರಿಜನರೂ ಉತ್ತರ ಭಾರತದಂತೆ ಕಾಂಗ್ರೆಗೆ ವಿರೋಧವಾಗಿ ಮತ ನೀಡದೆ ಕಾಂಗ್ರೆ ತನ್ನ ಈ ಮತ ಗಳನ್ನು ಪೂರ್ಣವಾಗಿ ಪಡೆಯುವಂತಾಯಿತು.

ದಿಢೀರನೆ ಚುನಾವಣಾ ಘೋಷಣೆ ಹಾಗೂ ಇದರಿಂದ ಪ್ರಚಾರಕ್ಕೆ ದುರ್ದಿನ, ಸಮಯದ ಅಭಾವ ವಿರೋಧ ಪಕ್ಷಗಳಿಗೆ ತುಂಬಾ ಅಡಚಣೆಯುಂಟುಮಾಡಿತು ಎಂದು ರಾಜ್ಯಸಮಿತಿ ಅಭಿಪ್ರಾಯ ಪಟ್ಟಿದೆ.

ರಾಜ್ಯದಲ್ಲಿ ಸಿ.ಪಿ.ಐ.(ಎಂ) ಸ್ಪರ್ಧಿಸಿದ ಆರು ಸ್ಥಾನಗಳಲ್ಲಿ ಸೋಲಲು ಕಾರಣಗಳನ್ನೂ ರಾಜ್ಯಸಮಿತಿ ಕ್ಷೇತ್ರವಾರಾಗಿ ವಿಮರ್ಶಿಸಿತು.

ಬಾಗೇಪಲ್ಲಿಯಲ್ಲಿ ನಾವು ಜನತಾದಳದ ಚಕ್ರಕ್ಕೂ ನಮ್ಮ ಪಕ್ಷದ ಚಿಹ್ನೆಗೂ ಮತಕೇಳುತ್ತ ಬಂದಿದ್ದೆವು. ಜನತಾಪಕ್ಷದ ಚಿಹ್ನೆಯಲ್ಲೂ ಚಕ್ರವಿದ್ದು ಮತದಾರರಿಗೆ ಸಮಯದ ಅಭಾವದಿಂದ ಈ ಕುರಿತು ಮಾಹಿತಿ ಕೊಡದ್ದರಿಂದ ಒಂದೇ 5877 ಮತಗಳು ಕುಲಗೆಟ್ಟು ಹೋದವು. ಜನತಾದಳದ ಪ್ರಭಾವಿ ವ್ಯಕ್ತಿಯೊಬ್ಬ ಕೊನೆಯಗಳಿಗೆಯಲ್ಲಿ ಕಾಂಗ್ರೆಸ್‌ಗೆ ಸೇರಿದ್ದು, ಕಾಂಗ್ರೆ ಪಕ್ಷ ಹರಿಸಿದ ಹಣದ ಹೊಳೆ ಹಾಗೂ ನಮ್ಮ ಪಕ್ಷದಲ್ಲೂ ಗೆದ್ದೆ ಗೆಲ್ಲುವೆಂದು ಉದಾಸೀನ ಮನೋಭಾವ ಕೂಡಾ ಇಲ್ಲಿ ಸೋಲಿಗೆ ಕಾರಣವಾಯಿತು ಎಂದು ರಾಜ್ಯಸಮಿತಿ ವಿಮರ್ಶಿಸಿದೆ.

ಇನ್ನೊಂದು ಗೆಲ್ಲುವ ಸ್ಥಾನ ಉಳ್ಳಾಲದಲ್ಲೂ ಮೇಲೆ ಹೇಳಿದಂತೆ ಕುಲಗೆಟ್ಟ ಮತಗಳು, ಕಾಂಗ್ರೆ ಭಾರೀ ಹಣ ಖರ್ಚು ಮಾಡಿದ್ದರಿಂದ ಜೊತೆಗೆ ರಾಮ ಶಿಲಾ ಪೂಜೆಯ ಮೂಲಕ ಬಿ.ಜೆ.ಪಿ. ಮತಗಳಲ್ಲಿ ಹೆಚ್ಚಳ ಹಾಗೂ ಮಂಗಳೂರು ಕಾರ್ಪೋರೇಶನ್ ವಿಭಾಗದಲ್ಲಿ ಪಕ್ಷದ ಸಂಘಟನೆಯ ಅಭಾವದಿಂದ ಸೋಲುಂಟಾಯಿತು.

ಬೆಂಗಳೂರಿನ ಭಾರತೀನಗರದಲ್ಲಿ ಜನತಾದಳದ ಕಾರ್ಯಕರ್ತರ ಬೆಂಬಲ ಸಿಗಲಿಲ್ಲ. ಡಿ.ಎಂ.ಕೆ. ಬೆಂಬಲಿಗರಲ್ಲೂ ಹಲವರು ಕಾಂಗ್ರೆ ಒಡ್ಡಿದ ಪ್ರಲೋಭನೆಗಳಿಗೆ ಮಾರುಹೋಗಿ ಕಾಂಗ್ರೆ ಮತ ಪಡೆದದ್ದು, ಕ್ರಿಶ್ಚಿಯನ್ ಮತದಾರರು ಶೇಕಡಾ 50 ರಷ್ಟಿದ್ದು ತಮಿಳು ಮತದಾರರು ಎ.ಐ.ಎ.ಡಿ.ಎಂ.ಕೆ ಪ್ರಭಾವದಿಂದ ಕಾಂಗ್ರೆಗೆ ಮತನೀಡಿದರು. ಈ ಕ್ಷೇತ್ರದಲ್ಲೂ ನಮ್ಮ ಸಂಘಟನೆಗಳು ಸಾಕಷ್ಟು ಇಲ್ಲದ್ದರಿಂದ ಬೇರೆ ಕಡೆಯಿಂದ ಬಂದ ಸಂಗಾತಿಗಳ ಪ್ರಚಾರ ಕಾರ್ಯದಲ್ಲಿ ಸಾಕಷ್ಟು ಹೊಂದಾಣಿಕೆಯ ಅಭಾವವೂ ಇತ್ತು.

ಕೆ.ಜಿ.ಎಫ್.ನಲ್ಲಿ ಜನತಾದಳದವರು ನಮಗೆ ಬೆಂಬಲ ನೀಡದೇ ಹೋಗಿದ್ದು ಹಣದ ಪ್ರಭಾವ, ತಮಿಳುನಾಡಿನಲ್ಲಿ ಎ.ಐ.ಎ.ಡಿ.ಎಂ.ಕೆ ಒಗ್ಗೂಡಿದ ಪ್ರಭಾವದಿಂದ ನಮ್ಮ ಸೋಲಿಗೆ ಕಾರಣ. ನಮ್ಮ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳಲ್ಲಿ ಕೆಲವು ವರ್ಷಗಳಿಂದ ಕಂಡುಬಂದ ನ್ಯೂನ್ಯತೆ ಇನ್ನೂ ಉಳಿದಿರುವುದೂ ಸೋಲಿಗೆ ಒಂದು ಕಾರಣ ಒದಗಿಸಿದೆ ಎಂದು ರಾಜ್ಯ ಸಮಿತಿ ವಿಮರ್ಶಿಸಿದೆ.

ಮುಳಬಾಗಿಲಿನಲ್ಲಿ ಜನತಾದಳದ ಬಲವೇ ಇರಲಿಲ್ಲ. ವಿಭಜನೆಯನಂತರ ಎಲ್ಲರೂ ಜನತಾಪಕ್ಷದವರಾದರು. ಬಂಡುಕೋರ ಕಾಂಗ್ರೆ ಅಭ್ಯರ್ಥಿಯೂ ಹತ್ತು ಸಾವಿರ ಮತಪಡೆದರು. ಉಮೇದವಾರಿಕೆ ಬಗ್ಗೆ ಗೊಂದಲ, ನಮ್ಮ ಪ್ರಚಾರದಲ್ಲಿ ಹೊಂದಾಣಿಕೆಯ ಅಭಾವ ಕೂಡಾ ನಮ್ಮ ಸೋಲಿಗೆ ಒಂದು ಕಾರಣ ಎಂದು ರಾಜ್ಯ ಸಮಿತಿ ಅಭಿಪ್ರಾಯ ಪಟ್ಟಿದೆ.

ಬೀದರಿನಲ್ಲಿ ಜನತಾದಳದವರೆಲ್ಲಾ ಬಿ.ಜೆ.ಪಿ.ಗೆ ಮತಹಾಕಿದರು. ನಮ್ಮ ಪಕ್ಷದ ಸಾಮೂಹಿಕ ಸಂಘಟನೆಗಳು ಇಲ್ಲಿ ಬಲಹೀನವಾಗಿವೆ. ಅನಿರೀಕ್ಷಿತವಾಗಿ ದೊರೆತ ಈ ಸ್ಥಾನದಲ್ಲಿ ಕೊನೆಯವರೆಗೂ ಮುಸ್ಲಿಮರು ನಮ್ಮ ಬಗ್ಗೆ ಒಲವು ತೋರಿದರೂ ಬಿ.ಜೆ.ಪಿ. ಅಭ್ಯರ್ಥಿ ಗೆಲ್ಲಬಾರದೆಂದು ಕೊನೆಗೆ ಕಾಂಗ್ರೆಗೆ ಮತನೀಡಿದರು.

ಸಿ.ಪಿ.ಐ.ಯ ಸ್ಥಿತಿ

ಸಿ.ಪಿ.ಐ. ಹಾಗೂ ಜನತಾ ದಳದ ನಡುವೆ ಹೊಂದಾಣಿಕೆಯಾಗದ್ದು ರಾಜಕೀಯವಾಗಿ ಕಾಂಗ್ರೆ ವಿರೋಧಿ ಜನತೆಯ ಒಗ್ಗಟ್ಟಿಗೆ ಬಿದ್ದ ಪೆಟ್ಟಾಯಿತು. ಜನತಾ ದಳದ ಧೋರಣೆ ಒಂದೆಡೆ ಇದಕ್ಕೆ ಕಾರಣ ವಾದರೆ ಮೂರನೇ ಶಕ್ತಿಯನ್ನು ಕಟ್ಟುವ ಬಗ್ಗೆ ಸಿ.ಪಿ.ಐ. ನಲ್ಲಿ ಬಹುಕಾಲದಿಂದ ಮೂಡಿದ ಅಭಿಪ್ರಾಯವೂ ಇದಕ್ಕೊಂದು ಪ್ರಮುಖ ಕಾರಣ ಎಂದು ಸಿ.ಪಿ.ಐ.(ಎಂ) ರಾಜ್ಯಸಮಿತಿ ಅಭಿಪ್ರಾಯವಾಗಿದೆ. ಒಟ್ಟಿನಲ್ಲಿ ಜನತಾದಳದ ವಿರುದ್ಧ ಪ್ರಚಾರ ರಾಜ್ಯದಲ್ಲಿ ದೃಢವಾಗಲು ಸಿ.ಪಿ.ಐ. ಕೂಡಾ ತನ್ನ ಕಾಣಿಕೆ ನೀಡಿದೆ ಎಂಬುದರಲ್ಲಿ ಸಂಶಯವಿಲ್ಲ.

ಬಿ.ಜೆ.ಪಿ.ಯ ಸ್ಥಿತಿ.

6 ಲೋಕಸಭಾ ಸ್ಥಾನಗಳಲ್ಲಿ, 120 ವಿಧಾನಸಭಾ ಸ್ಥಾನಗಳಲ್ಲಿ ನಿಂತು ವ್ಯಾಪಕವಾಗಿ ಕಾಂಗ್ರೆ ವಿರೋಧಿ ಮತಗಳನ್ನು ಕೋಮುವಾದಿ ದಿಕ್ಕಿಗೆ ತಿರುಗಿಸಲು ಪ್ರಯತ್ನಿಸಿದ ಬಿ.ಜೆ.ಪಿ. ಕಾಂಗ್ರೆ ಹಲವು ಸ್ಥಾನಗಳಲ್ಲಿ ಗೆಲ್ಲಲು ಕಾರಣವಾಯಿತು. ಒಬ್ಬರ ವಿರುದ್ಧ ಒಬ್ಬರೇ ಎಂಬ ನೀತಿಯನ್ನು ಬಿ.ಜೆ.ಪಿ. ಅನುಸರಿಸಿದ ಪರಿ ಇದು. ಈ ಸ್ಥಾನಗಳಲ್ಲೆಲ್ಲಾ ಎಲ್ಲೆಲ್ಲಿ ಇತ್ತೀಚೆಗೆ ಕೋಮು ಗಲಭೆಗಳನ್ನು ಹಬ್ಬಿಸಿ ಹಲವಾರು ಜನರ ಸಾವಿಗೆ ಕಾರಣವಾಗಿತ್ತೊ ಅಲ್ಲಿಯೇ ಹೆಚ್ಚು ಗದ್ದಿರುವುದು ಮತಗಳಿಸಿರುವುದೆಂಬುದು ಅದರ ಜನವಿರೋಧಿ ರಾಜಕೀಯಕ್ಕೆ ಸಾಕ್ಷಿಯಾಗಿದೆ. ಅಲ್ಲದೆ ಜನತಾದಳದ ವಿರುದ್ಧ ಪ್ರಚಾರದಲ್ಲಿ ಬಿ.ಜೆ.ಪಿ. ಧ್ವನಿಯೂ ಸೇರಿ ಕಾಂಗ್ರೆಸ್‌ಗೆ ಅನುಕೂಲವಾಯಿತು ಅಲ್ಲದೆ ನಾವು ಸ್ಪರ್ಧಿಸದ ಕಡೆಗಳಲ್ಲಿ ಕಾಂಗ್ರೆಗೆ ಮತ ಚಲಾಯಿಸಿದ್ದಾರೆ ಕೂಡ.

ನಾವು ಸ್ಪರ್ಧಿಸದ ಸ್ಥಾನಗಳಲ್ಲೂ ನಮ್ಮ ಪಕ್ಷದ ಘಟಕಗಳು ಕರ್ನಾಟಕ ಪ್ರಾಂತ ರೈತಸಂಘ, ಎಸ್.ಎಫ್.ಐ. , ಡಿವೈ.ಎಫ್.ಐ. ಹಾಗೂ ಮಹಿಳಾ ಸಂಘಟನೆಯ ಕಾರ್ಯಕರ್ತರು ಜನತಾದಳದ ಬೆಂಬಲಾರ್ಥ ಪ್ರಾಮಾಣಿಕವಾಗಿ ಕೆಲಸ ಮಾಡಿದ್ದಾರೆ.

ಈ ಚುನಾವಣೆಯಲ್ಲಿ ಕಾಂಗ್ರೆಗೆ ರಾಜ್ಯದಲ್ಲಿ ಸಿಕ್ಕಿದ ಜಯ ನಮ್ಮ ರಾಜಕೀಯದ ಸೋಲು ಎಂದು ಪರಿಗಣಿಸಿದ ರಾಜ್ಯಸಮಿತಿ ಸ್ವತಂತ್ರವಾಗಿ ನಮ್ಮ ಪಕ್ಷದ ಘಟಕ ಗಳನ್ನು, ದೇಶ ಮತ್ತು ರಾಜ್ಯದ ರಾಜಕೀಯದಲ್ಲಿ ಸತತವಾಗಿ ಮಧ್ಯ ಪ್ರವೇಶಿ ಸಲು ಕೂಡಲೇ ನಾವು ಮುಂದಾಗಬೇಕೆಂದು ಕರೆ ನೀಡಿದೆ. ರಾಷ್ಟ್ರೀಯ ರಾಜಕೀಯ ರಾಜ್ಯದಲ್ಲಿ ವಿಪುಲವಾಗಿ ಪ್ರಚಾರವಾಗುವಂತೆ ಮಾಡುವ ಮಹಾ ಜವಾಬ್ದಾರಿ ನಮ್ಮ ಮೇಲಿದೆ ಎಂದು ರಾಜ್ಯ ಸಮಿತಿ ಹೇಳಿದೆ.

ಕೋಮುವಾದಿಗಳನ್ನು ತಿರಸ್ಕರಿಸಿ

ರಾಮಜನ್ಮಭೂಮಿ, ರಾಮಶಿಲಾಪೂಜೆ ಹೆಸರಿನಲ್ಲಿ ದೇಶದ ಜನತೆಯ ಐಕ್ಯತೆ ಸಮಗ್ರತೆಗೆ ಸವಾಲೊಡ್ಡುತ್ತಿರುವ ಕೋಮುವಾದಿ ಪಕ್ಷಗಳನ್ನು ಚುನಾವಣೆಯಲ್ಲಿ ತಿರಸ್ಕರಿಸಲು ಜನತೆಯಲ್ಲಿ ಮನವಿ ಮಾಡಿ ಬೆಳಗಾಂ ಜಿಲ್ಲೆ ಸವದತ್ತಿಯಲ್ಲಿ ಎಸ್.ಎಫ್.ಐ. ಸಂಘಟನೆ ಬೀದಿ ಬದಿಯ ಸಭೆಗಳನ್ನು ಸಂಘಟಿಸಿತು. ಈ ಸಭೆಗಳಲ್ಲಿ ಸಿ.ಪಿ.ಐ.(ಎಂ) ಮುಖಂಡ ಕಾ॥ ಶಂಭೂಲಿಂಗ ಪತ್ತಾರ, ಕಪ್ಪಣ್ಣನವರ, ಡಿ.ವೈ.ಎಫ್.ಐ. ನಾಯಕ ಈರಣ್ಣಾ ಪತ್ತಾರ ಮತ್ತು ಎಸ್.ಎಫ್.ಐ.ನ ಕಬ್ಬಿಣ, ಬಾಲಕೃಷ್ಣ ಇಜಂತಕರ ಮತ್ತು ನದಾಫ್‌ರವರು ಮಾತನಾಡಿದರು. ಬಾಗಲ್ಪುರ ಮತ್ತಿತರ ಕಡೆ ನಡೆದ ಕೋಮು ಗಲಭೆಗಳ ಬಗ್ಗೆ ಸಭೆಯಲ್ಲಿ ವಿವರಿಸಿ ಸವದತ್ತಿಯ ಜನತೆ ಕೋಮು ಸೌಹಾರ್ದತೆ ಕಾಪಾಡಿಕೊಂಡು ಬರಬೇಕೆಂದು ಮನವಿ ಮಾಡಲಾಯಿತು.

ದೇವರು ಪೂಜಿಸುವುದಕ್ಕೆ,ಗಲಭೆಗಲ್ಲ!
ಮಂದಿರ ಮಸೀದ್ ಹಜಾರ ಹೈಂ.
ಭಾರತ ದೇಶ ಏಕ ಹೈ!
ದೇವರ ಹೆಸರಿನಲ್ಲಿ ಕೋಮುವಾದಿ ಗಲಭೆ ಬೇಡ!

ಎಂಬ ಘೋಷಣೆಗಳನ್ನು ಜನರಲ್ಲಿ ಜನಪ್ರಿಯ ಗೊಳಿಸಲಾಯಿತು.

ಸೈಕಲ್ ಜಾಥ ಪಾದಯಾತ್ರೆ

ಧಾರವಾಡ ಜಿಲ್ಲೆಯಾದ್ಯಂತ ಎಸ್.ಎಫ್.ಐ. ಡಿ.ವೈ.ಎಫ್.ಐ. ಸಂಘಟನೆಗಳು ಚುನಾವಣೆಯಲ್ಲಿ ಜನತಾದಳ ಹಾಗೂ ಪ್ರಗತಿಪರ ಶಕ್ತಿಗಳನ್ನು ಬೆಂಬಲಿಸುವಂತೆ ಜನತೆಯಲ್ಲಿ ಮನವಿ ಮಾಡಿ ಮನೆ ಮನೆಗೆ ತೆರಳಿ ಹಾಗೂ ಸೈಕಲ್ ಜಾಥ, ಪಾದಯಾತ್ರೆ ಕೈಗೊಂಡು ವ್ಯಾಪಕ ಪ್ರಚಾರ ನಡೆಸಿದವು.

ಎರಡು ಸಂಘಟನೆಗಳ ಸುಮಾರು 8 ಸಾವಿರ ವಿದ್ಯಾರ್ಥಿ ಯುವಜನರಿಗೆ ಪತ್ರ ಬರೆಯುವ ಮೂಲಕ ಕರೆ ನೀಡಲಾಯಿತು. ವಿದ್ಯಾರ್ಥಿ ಮುಖಂಡ ಕಾ॥ ಬಸವ ರಾಜ ಭಜಂತ್ರಿ ಅಧ್ಯಕ್ಷತೆಯಲ್ಲಿ ಚುನಾವಣಾ ಪ್ರಚಾರ ಸಮಿತಿಯನ್ನು ರಚಿಸಲಾಯಿತು. ಎಸ್.ಎಫ್.ಐ. ರಾಜ್ಯ ಅಧ್ಯಕ್ಷ ಜೆ.ಸಿ. ಬಿಯ್ಯಾರೆಡ್ಡಿಯವರು ಪ್ರಚಾರ ಸಭೆಗಳಲ್ಲಿ ಭಾಗವಹಿಸಿ ಮಾತನಾಡಿದರು.

ಇತ್ತೀಚಿಗೆ ನಡೆದ ಲೋಕ ಸಭೆ ಚುನಾವಣೆಗಳಲ್ಲಿ ವಿವಿಧ ಪಕ್ಷಗಳು ಪಡೆದ ಶೇಕಡವಾರು ಮತಗಳು

ಜಿಲ್ಲೆಗಳು	ಕಾಂಗ್ರೆ	ಜನತಾ ದಳ	ಜನತಾ	ಬಿ.ಜೆ.ಪಿ.	ರೈತ ಸಂಘ	ಸಿ.ಪಿ.ಐ.(ಎಂ) ಸಿ.ಪಿ.ಐ.	ಮುಸ್ಲಿಂ ಲೀಗ್
ದಕ್ಷಿಣಕರ್ನಾಟಕ							
ಮೈಸೂರು	45.4	23.4	15.1	1	1		
ಮಂಡ್ಯ	37.5	11.6	28.6	0.3	12.8		
ಹಾಸನ	46	24.5	14.2	3.4	0.4		
ಚಿಕ್ಕಮಗಳೂರು	44.4	19.5	17.5	0.5	0.2	0.50	
ಚಿತ್ರದುರ್ಗ	45.0	28.0	7.4	0.5	-	2.4	
ಬೆಂ.ಗ್ರಾಮೀಣ	50.2	30.7	12.6	1.2	0.04		
ಬೆಂ.ನಗರ	40.4	22.2	17.7	0.9		1.6	
ಕೋಲಾರ	48.9	24.8	16.1	-		6.6	
ತುಮಕೂರು	39.6	24.2	19.8	1.5			
ಉತ್ತರ ಕರ್ನಾಟಕ							
ಗುಲ್ಬರ್ಗಾ	37		21	0.63	0.5	0.2	0.71
ರಾಯಚೂರು	37	34	5	0.40	2.0		
ಬಿದರ್.	23.7	27	6.7	7.0			
ಬಳ್ಳಾರಿ	43.6	38	6.4			1	
ಬಿಜಾಪುರ	44.1	35.4	6.1	3.0	2.7		
ಬೆಳಗಾಂ	31.1	24.7	4.4		13.9		
ಧಾರವಾಡ	42.3	34.6	1.3	2.6	5.8		
ಕರಾವಳಿ ಪ್ರದೇಶ							
ದಕ್ಷಿಣ ಕನ್ನಡ	42.9	27.3	1.8	18.2		0.3	
ಕೊಡಗು	45.7	16.5	10.9	22.1			
ಉತ್ತರ ಕನ್ನಡ	40.3	31.8	5.2	8.2	4.0		0.3
ಶಿವಮೊಗ್ಗ	38.0	20.2	4.7	7.9	2.6		


ಅಭಿನಂದನೆಗಳು

ಉಳ್ಳಾಲ ವಿಧಾನ ಸಭಾ ಕ್ಷೇತ್ರದಲ್ಲಿ ಸಿ.ಪಿ.ಐ.(ಎಂ) ಪಕ್ಷಕ್ಕೆ ಮತವಿತ್ತ ಮತದಾರರಿಗೂ ಹಾಗೂ ಅವಿಶ್ರಾಂತವಾಗಿ ದುಡಿದ ಸಾವಿರಾರು ಕಾರ್ಯಕರ್ತರಿಗೂ ಸಿ.ಪಿ.ಐ.(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದ ಕಾ॥ ಕೆ.ಆರ್. ಶ್ರೀಯಾನ್‌ರವರು ಅಭಿನಂದನೆ ಸಲ್ಲಿಸಿದ್ದಾರೆ.

ಜಿಲ್ಲೆಯ ಇತರ ಕ್ಷೇತ್ರಗಳಲ್ಲಿ ಜನತಾದಳದ ಉಮೇದ್ವಾರರಿಗೆ ದುಡಿದ ಕಾರ್ಯಕರ್ತರನ್ನು ಸಹ ಜಿಲ್ಲಾ ಕಾರ್ಯದರ್ಶಿಯಾಗಿ ಅಭಿನಂದಿಸಿದ್ದಾರೆ.

ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಗಮನಸೆಳೆದ

ಎಡರಂಗದ ಚುನಾವಣಾ ವಿಜಯ



ಅಧಿಕಾರಾರೂಢ ಪಕ್ಷಗಳೆನ್ನೆಲ್ಲಾ ಜನತೆ ಸಾರಾಸಗಟು ಕಿತ್ತೆಸೆದಿದ್ದಾರೆ ಎಂಬ ಚುನಾವಣಾ ಪಂಡಿತರುಗಳ ಸರಳೀಕೃತ ವಿಶ್ಲೇಷಣೆಗೆ ಸವಾಲೊಡ್ಡಿದ್ದು ಪಶ್ಚಿಮ ಬಂಗಾಳದ ಚುನಾವಣಾ ವಿಜಯ. 41ರಲ್ಲಿ 36ಸ್ಥಾನಗಳನ್ನು ಎಡರಂಗ ಗೆದ್ದಿತು. ಎಂಟನೇ ಲೋಕಸಭೆಯಲ್ಲಿ 16 ಎಂ.ಪಿ.ಗಳನ್ನು ಹೊಂದಿದ್ದ ಕಾಂಗ್ರೆಸ ಬಲ 5ಕ್ಕಿಳಿಯಿತು. ಈ ಸಾಧನೆಯ ಗುಟ್ಟೇ? ಪೀಪಲ್ಸ್ ಡೆಮಾಕ್ರಸಿ ಪತ್ರಿಕೆ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಹಾಗೂ ಸಿ.ಪಿ.ಐ.(ಎಂ) ಪಾಲಿಟ್ ಬ್ಯೂರೋ ಸದಸ್ಯರಾದ ಕಾಂ ಜ್ಯೋತಿ ಬಸುರವರೊಡನೆ ನಡೆಸಿದ ಈ ಸಂದರ್ಶನದಲ್ಲಿ ತಿಳಿಯೋಣ.

ಇಷ್ಟೊಂದು ಭಾರೀ ವಿಜಯವನ್ನು ನೀವು ನಿರೀಕ್ಷಿಸಿದ್ದಿರಾ?

ಹೌದು! ವಾಸ್ತವವಾಗಿ ಇನ್ನೂ ಒಂದೆರಡು ಸೋತಿರುವ ಸ್ಥಾನಗಳಲ್ಲಿ ಕೂಡಾ ನಾವು ಗೆಲ್ಲಬಹುದೆಂದು ಭಾವಿಸಿದ್ದೆವು. ಉದಾಹರಣೆಗೆ ಡಾರ್ಜಿಲಿಂಗ್. ಹಿಂದೆ ಮತಗಳ ವಿಭಜನೆಯಿಂದಾಗಿ ನಾವು ಗೆದ್ದಿದ್ದೆವು. 1984ರಲ್ಲಿ ಸಿದ್ಧಾರ್ಥ ಶಂಕರ್ ರಾಯ್ ಚುನಾವಣೆಗೆ ನಿಂತಿದ್ದರು. 80ಸಾವಿರ ಮತ ಪಡೆದಿದ್ದರು. ಈ ಭಾರಿ ನಮ್ಮ ಅಭ್ಯರ್ಥಿ ಎ.ಪಾರಕ್ ಮತ್ತು ಜಿ.ಎನ್.ಎಲ್.ಎಫ್.–ಮತ್ತು ಕಾಂಗ್ರೆಸ್ ಬೆಂಬಲಿತ ಅಭ್ಯರ್ಥಿ ಪತ್ರಕರ್ತ ಇಂದ್ರಜೀತ್(ಕಳೆದ ವರ್ಷ ಗೂರ್ಖಾಲ್ಯಾಂಡ್ ಚಳುವಳಿಯ ಸಮಯದಲ್ಲಿ ಕೇಂದ್ರಸರ್ಕಾರ ಮತ್ತು ಜಿ.ಎನ್.ಎಲ್.ಎಫ್. ನಡುವೆ ರಾಯಭಾರ ನಡೆಸಿದ ವ್ಯಕ್ತಿಯೇ ಇವರು) ನಡುವೆ ನೇರ ಸ್ಪರ್ಧೆಯಿತ್ತು. ಬಯಲು ಪ್ರದೇಶದ ನಾಲ್ಕು ಅಸೆಂಬ್ಲಿ ವಿಭಾಗಗಳಲ್ಲಿ ನಮ್ಮ ಶಕ್ತಿಯಿದ್ದರೂ ಗುಡ್ಡ ಪ್ರದೇಶದ ಮೂರು ವಿಭಾಗಗಳಲ್ಲಿ ಕಳೆದ ಏಕೊಂಡಿದ್ದನ್ನು ತುಂಬಿಸಿಕೊಳ್ಳಲಾಗಲಿಲ್ಲ.

ಹಿಂದೆ ಕೂಡಾ ಕಲ್ಕತ್ತೆಯಲ್ಲಿನ ಮೂರು ಕ್ಷೇತ್ರಗಳು ನಮಗೆ ಕಷ್ಟದ ಸ್ಥಾನಗಳಾಗಿದ್ದವು. ಆದ್ದರಿಂದ ಕಲ್ಕತ್ತಾ (ದಕ್ಷಿಣ)ದಲ್ಲಿ ಬಿಪ್ಲವದಾಸ್ ಗುಪ್ತಾ ಕಾಂಗ್ರೆಸ್(ಐ) ಅಭ್ಯರ್ಥಿಗಿಂತ 25156 ಹೆಚ್ಚು ಮತ ಪಡೆದು ಗೆದ್ದಿರುವುದು ನಿಜವಾಗಿಯೂ ಒಂದು ಸಾಧನೆ.

ಇತರರೆಗಿಂತ ಹೆಚ್ಚು ಸಂಪ್ರದಾಯ ಶರಣರಾದ ಕಲ್ಕತ್ತಾ ಮತದಾರರ ನಡುವೆ ಕೂಡಾ ಸಿ.ಪಿ.ಐ.(ಎಂ) ಮೆಲ್ಲಮೆಲ್ಲನೆ ಯಾದರೂ ಸತತವಾಗಿ ಪಡೆಯುತ್ತಿರುವ ಬೆಂಬಲದ ಸೂಚನೆ ಕಲ್ಕತ್ತಾ (ಈಶಾನ್ಯ) ಕ್ಷೇತ್ರದಲ್ಲೂ ಕಂಡು ಬಂದಿದೆ. ಇಲ್ಲಿ ಕೇಂದ್ರಮಂತ್ರಿ ಅಜಿತ್ ಪಾಂಜಾ ತನ್ನ ಸ್ಥಾನ ಉಳಿಸಿಕೊಂಡರು. ಆದರೆ 1984ರಲ್ಲಿ ಸಿ.ಪಿ.ಐ.(ಎಂ) ಅಭ್ಯರ್ಥಿ ಸುನೀಲ್ ಮೈತ್ರ 98ಸಾವಿರ ಮತಗಳಿಂದ ಸೋತಿದ್ದರೆ, ಈ ಬಾರಿ ಈ ಅಂತರ 37629ಕ್ಕಿಳಿಯಿತು.

ಈ ವಿಜಯದ ಹಿಂದಿನ ಗುಟ್ಟೇನು? ಯಾವ ಪ್ರಶ್ನೆಗಳ ಮೇಲೆ ವಿಚಾರ ಮಾಡಿ ಮತನೀಡಿ ಎಂದು ಎಡರಂಗ, ಸಿ.ಪಿ.ಐ.(ಎಂ) ಮತದಾರರಲ್ಲಿ ಕೇಳಿಕೊಂಡಿತ್ತು?

ಪ್ರಶ್ನೆಗಳು ಮುಖ್ಯವಾಗಿ ಎರಡು. ಮೊದಲನೆಯದಾಗಿ, ನಮ್ಮ ಹನ್ನೆರೆಡು ವರ್ಷಗಳ ಅನುಭವದ ಆಧಾರದ ಮೇಲೆ ನಮ್ಮ ಬಗ್ಗೆ ತೀರ್ಪುಗೆ ಬನ್ನಿ. ಎರಡನೆಯದು ಈ ಬಾರಿ ಎಷ್ಟು ಸ್ಥಾನಗೆಲ್ಲಬಹುದೆಂಬ ಪ್ರಶ್ನೆ ಮಾತ್ರವಲ್ಲ, ರಾಜೀವ್ ಗಾಂಧಿಯವರ ಕೇಂದ್ರದ ಕಾಂಗ್ರೆಸ್ ಸರಕಾರವನ್ನು ಅಧಿಕಾರದಿಂದಿಳಿಸುವ ಪ್ರಶ್ನೆ ಕೂಡಾ ದೇಶಾದ್ಯಂತ ಜನರ ಮೇಲೆ ಸಂಕಷ್ಟಗಳ ಹೊರೆ ಹೇರಿದ್ದಷ್ಟೇ ಅಲ್ಲ, ಕಾಂಗ್ರೆಸ್‌ಯೇತರ ರಾಜ್ಯಗಳಿಗೆ ಇಷ್ಟೊಂದು ಅನ್ಯಾಯ ಮಾಡಿರುವ ಸರ್ಕಾರವನ್ನು ಇಳಿಸುವ ಪ್ರಶ್ನೆ ಪಶ್ಚಿಮ ಬಂಗಾಳದ ದೃಷ್ಟಿಯಿಂದ ಮಾತ್ರವಲ್ಲ ಇಡೀ ಭಾರತದ ದೃಷ್ಟಿಯಿಂದಲೂ ಕೇಂದ್ರದಲ್ಲಿ ಒಂದು ಸ್ನೇಹಶೀಲ ಸರ್ಕಾರ ಅತ್ಯಗತ್ಯ. ಅಲ್ಲದೆ ರಾಜೀವ್ ಸರಕಾರ ಕೋಮುಶಕ್ತಿಗಳಿಗೆ ಶರಣಾದ, ಕೊನೆಗೆ ಕೋಮುವಾದವನ್ನೇ ದಾಳವಾಗಿ ಬಳಸಿ ಆಟವಾಡಲು ಪ್ರಯತ್ನಿಸಿದ ಸರಕಾರ ಎಂದೂ ನಾವು ಜನರ ಮುಂದಿಟ್ಟೆವು.

ಕೇಂದ್ರದಲ್ಲಿ ಕಾಂಗ್ರೆಸ್ ಮಾತ್ರವೇ ಒಂದು ಸ್ಥಿರ ಸರ್ಕಾರ ರಚಿಸಬಲ್ಲುದು ಎಂದು ಜನರ ನಡುವೆ ಇರುವ ಭಾವನೆಯನ್ನೂ ನಾವು ಹೋಗಲಾಡಿಸಬೇಕಿತ್ತು. ಇದಕ್ಕೆ ನಾವು ಸ್ವತಃ

ಪಶ್ಚಿಮ ಬಂಗಾಳ

ಪಶ್ಚಿಮಬಂಗಾಳದ ಅನುಭವದತ್ತಲೇ ಬೊಟ್ಟು ಮಾಡಿದೆವು. ಕಳೆದ ಹತ್ತು ವರ್ಷಗಳಿಂದಲೂ ಹೆಚ್ಚು ಸಮಯದಿಂದ ಒಂಬತ್ತು ಪಕ್ಷಗಳ ಸಮ್ಮಿಶ್ರ ಸರಕಾರ ಇಲ್ಲಿ ಸುಲಲಿತವಾಗಿ, ಅಸ್ಥಿರತೆಯಿಲ್ಲದೇ ಕೆಲಸ ಮಾಡುತ್ತಿದೆ.

ಹಿಂದಿ ಭಾಷಿಕ ಪ್ರದೇಶಗಳಲ್ಲಿ ಯಾವ ಕಡೆ ಎಂಬ ಸಂಶಯವೂ ಜನರಲ್ಲಿತ್ತು. ಇಲ್ಲಿಯೂ ನಾವು ಜನರಲ್ಲಿ ಭರವಸೆ ಮೂಡಿಸಿದೆವು. ಉತ್ತರ ಭಾರತದ ಎಲ್ಲಾ ರಾಜ್ಯಗಳಲ್ಲಿ ಬಲವಾದ ಕಾಂಗ್ರೆಸ್ ವಿರೋಧಿ ಭಾವನೆಗಳಿವೆ ಎಂದೆವು. ನಾವು ಹೇಳಿದ್ದು ನಿಜವಾಗಿತ್ತು ಎಂದು ಫಲಿತಾಂಶ ಸಾಧಿಸಿ ತೋರಿಸಿವೆ. ನಿಜ ದಕ್ಷಿಣದ ಫಲಿತಾಂಶ ಅನಿರೀಕ್ಷಿತ.

ಈ ಬಾರಿ ಬಿ.ಜೆ.ಪಿ. ಮುಂತಾದ ಕೋಮುಶಕ್ತಿಗಳು ಪಶ್ಚಿಮ ಬಂಗಾಳದ ಚುನಾವಣಾ ಕಣ ಪ್ರವೇಶಿಸಲು ಪ್ರಯತ್ನಿಸಿದ್ದು ಈ ಬಾರಿಯ ಸಂಸದೀಯ ಚುನಾವಣೆಗಳ ವಿಶಿಷ್ಟ ಅಂಶ. ಇವುಗಳ ಪ್ರಭಾವ ಎಷ್ಟಾಯಿತು? ಕೋಮುಶಕ್ತಿಗಳು ಎಂತಹ ಪಾತ್ರ ವಹಿಸಿದ್ದವು? ಅವುಗಳ ಮುಂದಿನ ಪಾತ್ರವೇನಿರಬಹುದು?

ಪುಟ 6ಕ್ಕೆ

ಸನ್ನಿವೇಶಕ್ಕೆ ನಾಟಕೀಯ ತಿರುವು

ಪಂಜಾಬ್

ಪ್ರತ್ಯೇಕವಾದಿಗಳಿಗೆ ದೊರೆತ ಬೆಂಬಲವಲ್ಲದಿದ್ದರೂ ಆತಂಕಕಾರಿ ಸ್ಥಿತಿ

ಕಾಂ.ಹರ್ಕಿಶನ್‌ಸಿಂಗ್‌ಸುರ್ಜಿತ್



ಲೋಕ ಸಭಾ ಚುನಾವಣೆಗಳೊಂದಿಗೆ ಪಂಜಾಬಿನ ಸನ್ನಿವೇಶ ನಾಟಕೀಯ ತಿರುವು ಪಡೆದಿದೆ. ಕಾಂಗ್ರೆಸ್ (ಐ) ಎರಡು ಜನತಾದಳ ಒಂದು ಸ್ಥಾನಗಳನ್ನು ಪಡೆದರೆ ಉಳಿದ ಸ್ಥಾನಗಳನ್ನು ಉಗ್ರಗಾಮಿಗಳು ಅಥವಾ ಅವರ ಬೆಂಬಲದ ಅಭ್ಯರ್ಥಿಗಳು , ಪಡೆದರು. ಇದರಿಂದ ಉಗ್ರಗಾಮಿಗಳು ಎಷ್ಟೊಂದು ಉಬ್ಬಿದ್ದಾರೆಂದರೆ ಎಸ್.ಜಿ.ಪಿ.ಸಿ. ಅಧಿಕಾರಿಗಳನ್ನು ನಿರ್ಲಕ್ಷಿಸಿ ಸ್ವರ್ಣಮಂದಿರದೊಳಗೆ ಶಸ್ತ್ರಾಸ್ತ್ರ ಒಯ್ಯಲು ಬಿಟ್ಟರು. ಭಿಂದ್ರನ್‌ವಾಲೆ ಪಂಥವನ್ನು ಮುಂದು ವರೆಸುವ ಬಹಿರಂಗ ಘೋಷಣೆಯೂ ಕೇಳಬಂತು.

ಚುನಾವಣಾ ಫಲಿತಾಂಶ ಉಗ್ರಗಾಮಿಗಳು ಹೇಳುವಂತೆ ಅವರ ಪ್ರತ್ಯೇಕತಾವಾದಿ ಮನವಿಗೆ ದೊರೆತ ಜನತೆಯ ಒಪ್ಪಿಗೆಯಿಲ್ಲ. ಆದರೂ ಪ್ರಜಾಪ್ರಭುತ್ವ ಜಾತ್ಯತೀತತೆ ಹಾಗೂ ರಾಷ್ಟ್ರೀಯ ಐಕ್ಯತೆಯ ಬಗ್ಗೆ ಆಸಕ್ತಿಯಿರುವವರಿಗೆ ಆತಂಕವುಂಟು ಮಾಡಿರುವ ಸಂಗತಿ ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ (ಐ) ಸೋತಿದೆ, ಹೊಸ ಸರ್ಕಾರ ರಚನೆಯಾಗಿದೆಯೆಂದರೆ ನಾವು ಸಂತೃಪ್ತರಾಗಬೇಕೆಂದು ಅರ್ಥವಲ್ಲ.

ರಾಜ್ಯಪಾಲರ ದುಷ್ಟ ಪಾತ್ರ

ಜನ ಉಗ್ರಗಾಮಿಗಳ ಚಟುವಟಿಕೆ, ಘೋಷಣೆಗಳಿಂದ ಬೇಸರಗೊಂಡಿದ್ದರೂ ರಾಜ್ಯಪಾಲರ ಆಳ್ವಿಕೆಯಲ್ಲಿ ಸರಕಾರದ ನೀತಿಗಳು ಉಗ್ರಗಾಮಿತ್ವದ ವಿರುದ್ಧ ಹೋರಾಟಕ್ಕಿಳಿಯುವಲ್ಲಿ ಅವರಲ್ಲಿ ವಿಶ್ವಾಸ ಮೂಡಿಸಲಿಲ್ಲ ಮಾತ್ರವಲ್ಲ ಪೋಲೀಸರು ಮತ್ತು ರಾಜ್ಯಪಾಲರ ಆಡಳಿತದ ಅತ್ಯಾಚಾರಗಳು ಅವರ ಅತೃಪ್ತಿಯನ್ನು ಇನ್ನಷ್ಟು ಹೆಚ್ಚಿಸಿದವು.

ಭಯೋತ್ಪಾದಕರ ಬಗ್ಗೆ, ವಿಶೇಷವಾಗಿ ಅವರ ಮುಖಂಡರ ಬಗ್ಗೆ ಜನತೆಯ ಕೆಲವು ವಿಭಾಗಗಳಲ್ಲಿ ಸ್ವಲ್ಪ ಮಟ್ಟಿನ ಸಹಾನುಭೂತಿಯೂ ಇದೆ ಎಂಬುದು ನಿಜ. ಅವರನ್ನೇಕೆ ವರ್ಷಾನುಗಟ್ಟಲೆ ಜೈಲಿನಲ್ಲಿಡಲಾಯಿತು, ಇಂದಿರಾಗಾಂಧಿಯ ಕೊಲೆಗಾರರಿಗೆ ನೇಣು ಹಾಕಿದ ನಂತರ, ಘಟನೆ ನಡೆದ , ನಾಲ್ಕುವರೆ ವರ್ಷಗಳ ನಂತರ ಮಾನ್ ಮತ್ತಿತರ ವಿರುದ್ಧ ಒಂದು ಹೊಸ ಪಿತೂರಿ ಮೊಕದ್ದಮೆ ಏಕೆ ಹೇರಲಾಯಿತು ಎಂಬುದು ಜನರಿಗೆ ಅರ್ಥವಾಗದ ಸಂಗತಿಯಾಗಿತ್ತು. ಕಾನೂನು ಬಾಹಿರವಾಗಿ ಬಂಧಿಸಿ, ಉಗ್ರಗಾಮಿಯೆಂದು ಘೋಷಿಸಲಾಗುವುದು ಎಂಬ ಬೆದರಿಕೆಯೊಡ್ಡಿ ಹಣ ಕಿತ್ತು ಕೊಳ್ಳುವುದು, ಪೋಲೀಸ್ ಲಾಕಪ್‌ಗಳಲ್ಲಿ ಅತ್ಯಾಚಾರ ಇತ್ಯಾದಿ ಮುಗ್ಧ ಜನರ, ಮುಖ್ಯವಾಗಿ ಯುವಕರ ಮೇಲೆ ಅನಾಚಾರಗಳ ವರ್ತನೆ ಯುವಜನರ ಮನದಲ್ಲಿ ವಿಷ ತುಂಬಿತು. ಅವರನ್ನು ಉಗ್ರಗಾಮಿಗಳಿಗೆ ಅರ್ಪಿಸುವುದರಲ್ಲಿ ಈ ರೀತಿ ರಾಜ್ಯಪಾಲರ ಆಡಳಿತ ದೊಡ್ಡ ಪಾತ್ರವಹಿಸಿತು.

ಸಿದ್ಧಾರ್ಥ ಶಂಕರ್ ರಾಯರ ಪಾತ್ರ ಇಷ್ಟೇ ಅಲ್ಲ. ಸಂವಿಧಾನದ ರಕ್ಷಕರಾಗುವ ಬದಲು ಕಾಂಗ್ರೆಸ್ (ಐ) ಏಜೆಂಟರಂತೆ ವರ್ತಿಸಿದ ಈತ ಸೌಮ್ಯವಾದಿ ಅಕಾಲಿ ಮುಖಂಡತ್ವವನ್ನು ನಾಶ ಮಾಡುವ ಹಳೆಯ ಕಾಂಗ್ರೆ ತಂತ್ರವನ್ನೇ ಮುಂದುವರಿಸಿ ಈಗಿನ ಅಸ್ಥಿರತೆಗೆ ಕಾರಣವಾದರು. ಮಾತ್ರವಲ್ಲ, ಕಾಂಗ್ರೆಸ್ಸಿಗರನ್ನೂ ಈ ತಂತ್ರದಲ್ಲಿ ಹಿಂದೆ ಹಾಕಲು ಪ್ರಯತ್ನಿಸಿದರು. ಸ್ವರ್ಣಮಂದಿರದ ಆವರಣದಲ್ಲಿ ಖಲಿಸ್ತಾನದ ಘೋಷಣೆ ಹಾಕಿದ್ದ ಅಕಾಲಿ ತಖ್ತ್‌ನ ಪುರೋಹಿತರಾದ ಜಸ್ ಬೀರ್ ಸಿಂಗ್ ರೋಡೆ ಹಾಗೂ ಇತರ ಮೂವರನ್ನೂ ಬಿಡುಗಡೆ ಮಾಡಿ ಕಾಂಗ್ರೆಸ್ (ಐ) ಗೆ ಚುನಾವಣಾ ಲಾಭಗಳಿಸಲು ಯತ್ನಿಸಿದರು. ಇವರನ್ನು ಬಿಡುಗಡೆ ಮಾಡಿದ ರಾಜ್ಯಪಾಲರಿಗೆ ಬಾದಲ್ ಹಾಗೂ ಬರ್ನಾಲಾರವರನ್ನು ಬಿಡುಗಡೆ ಮಾಡಲಿಲ್ಲವೆಂಬುದೇ ಅವರ ಉದ್ದೇಶವೇನೆಂಬುದನ್ನು ತಿಳಿಸುತ್ತದೆ.

ಈ ಕ್ರಮದಿಂದ ಖಾಲಿಸ್ತಾನದ ಭಕ್ತರನ್ನು ಒಲಿಸಿಕೊಳ್ಳಲು ಸಾಧ್ಯವಾಗಬಹುದಾದಾಗ ಶ್ರೀಯುತ ರಾಯ್ ಎ.ಐ.ಎಸ್.ಎಸ್.ಎಫ್. ಮುಖಂಡ ಮನ್‌ಜಿತ್ ಸಿಂಗ್‌ರನ್ನು ಬಿಡುಗಡೆಮಾಡಿ, ಒಂದು ಸಮಾವೇಶ ನಡೆಸಲು ಆತನಿಗೆ ನೆರವಾದರು. ಕೆಲವು ಉಗ್ರಗಾಮಿ ಮುಖಂಡರನ್ನು ಅಭ್ಯರ್ಥಿಯಾಗಿ ನಿಲ್ಲಿಸುವ ನಿರ್ಧಾರದಲ್ಲೂ ಪಾತ್ರ ವಹಿಸಿದರು. ಈ ರೀತಿ ಕನಿಷ್ಠ ಒಂಭತ್ತು ಸ್ಥಾನಗಳು ಕಾಂಗ್ರೆಗೆ ದೊರೆಯುವಂತೆ ಅವರು ಯೋಜಿಸಿದರು. ಆದರೆ ಅವರ ಈ ಯೋಜನೆಯ ಲಾಭ ಕಾಂಗ್ರೆಗೆ ದಕ್ಕದೆ ಉಗ್ರಗಾಮಿಗಳಿಗೆ ಸಿಕ್ಕಿತು.

ಅಕಾಲಿ ಮುಖಂಡರು ಕಾಂಗ್ರೆ ಪಾಠ ಕಲಿತಿಲ್ಲ

ಅಕಾಲಿ ಮುಖಂಡತ್ವ ಹಿಂದಿನ ತಪ್ಪುಗಳಿಂದ ಪಾಠ ಕಲಿತು ಮತ್ತೆ ಐಕ್ಯತೆ ಬೆಸೆಯಲು ನಿರಾಕರಿಸಿದ್ದು ಕೂಡಾ ಈಗಿನ ಸನ್ನಿವೇಶ ಸೃಷ್ಟಿಯಾಗುವುದರಲ್ಲಿ ತನ್ನ ಪಾತ್ರ ವಹಿಸಿತು.

ಭಯೋತ್ಪಾದನೆ ಕೂಡಾ ಉಗ್ರಗಾಮಿಗಳ ವಿಜಯದಲ್ಲಿ ,ದೊಡ್ಡ ಪಾತ್ರ ವಹಿಸಿತು. ಉಗ್ರಗಾಮಿಗಳಿಗೆ ಮತನೀಡದಿದ್ದರೆ ನೆಟ್ಟಗಾಗಲಿಕ್ಕಿಲ್ಲ ಎಂದು ಮತದಾರರಿಗೆ ಸುಮಾರಾಗಿ ಎಲ್ಲ ಕಡೆಯೂ ಬೆದರಿಕೆಯೊಡ್ಡಲಾಯಿತು.

ಈ ಎಲ್ಲ ಅಂಶಗಳು ಜತೆಗೆ ಸಿ.ಪಿ.ಐ.(ಎಂ), ಸಿ.ಪಿ.ಐ. ಬಿಟ್ಟು ಬೇರೆ ಯಾವುದೇ ಪಕ್ಷವೂ ಉಗ್ರಗಾಮಿತ್ವದ ವಿರುದ್ಧ ಪ್ರಚಾರ ನಡೆಸದಂತಹ ಸ್ಥಿತಿಯಲ್ಲಿ, ಸುಪರಿಚಿತ ಭಯೋತ್ಪಾದಕ ಮುಖಂಡರು ಇಂದಿರಾಗಾಂಧಿಯವರ ಕೊಲೆ ಮಾಡಿದ ಬಿಯಂತ್ ಸಿಂಗ್‌ನ ತಂದೆ ಮತ್ತು ಹೆಂಡತಿ ಹೊಸ ಲೋಕಸಭೆಯಲ್ಲಿ ಕುಳಿತುಕೊಳ್ಳುವಂತಹ ಸನ್ನಿವೇಶ ಸೃಷ್ಟಿಯಾಗಿದೆ.

ಇತ್ತೀಚಿನ ಹೇಳಿಕೆಗಳಲ್ಲಿ ಮಾನ್ ಭಾರತೀಯ ಸಂವಿಧಾನಕ್ಕೆ, ಹಿಂದೂ-ಸಿಖ್ ಐಕ್ಯತೆಗೆ ತಾನು ಬದ್ಧ ಎಂದು ಹೇಳಿರುವುದು ಸ್ವಾಗತಾರ್ಹ. ಆದರೆ ಅವರು ಭಯೋತ್ಪಾದನೆಯನ್ನು ಪಾಕಿಸ್ತಾನದಲ್ಲಿ ತರಬೇತಿ ಪಡೆದು ಮುಗ್ಧರ ಬಲಿ ತೆಗೆದುಕೊಳ್ಳುವವರನ್ನು ಮಕ್ಕಳನ್ನು ಅಪಹರಿಸುವವರನ್ನು ಖಂಡಿಸಿಲ್ಲ.

ಕಾಂಗ್ರೆಸ್ (ಐ) ತನ್ನ ದಿವಾಳಿಕೋರ ನೀತಿಯಿಂದ ಇನ್ನೂ ಪಾಠ ಕಲಿತಂತೆ ಕಾಣಿಸುತ್ತಿಲ್ಲ. ಚುನಾವಣೆಯ ನಂತರ ಸರಕಾರಕ್ಕೆ ತಾನು ಬರೆದ ಪತ್ರವನ್ನು ಸೊಕ್ಕಿನಿಂದ ಪತ್ರಿಕೆಗಳಿಗೆ ಬಿಡುಗಡೆ ಮಾಡಿದ ಈ ಕುಖ್ಯಾತ ರಾಜ್ಯಪಾಲರು

ಪುಟ 6ಕ್ಕೆ

ಚುನಾವಣೆ-೮೯

ಭಾರತದ ಬೇರೆಲ್ಲಾ ಕಡೆಯಂತೆ ಅಲ್ಲಿಯೂ ಅವರು ಹಿಂದೂ ಕೋಮುವಾದಿ ದಾಳದೊಂದಿಗೆ ಆಟವಾಡಿದರು. ಬೇರೆಕಡೆಗಳಷ್ಟು ಪರಿಣಾಮಕಾರಿಯಾಗಿ ಆಟವಾಡಲು ಆಗದಿದ್ದರೂ ಕೆಲವು ವಿಭಾಗಗಳ ನಡುವೆ ಮುಸುಕಲು ಅವಕ್ಕೆ ಸಾಧ್ಯವಾಯಿತು. ತಾವು ಸ್ಪರ್ಧಿಸಿದ 14 ಸ್ಥಾನಗಳಲ್ಲಿ ಒಂದನ್ನು ಗೆಲ್ಲುವುದಿಲ್ಲ ಎಂದು ಅವರಿಗೂ ಗೊತ್ತಿತ್ತು. ಆದರೆ ಕೆಲವೆಡೆ ಕಾಂಗ್ರೆಸ್‌ಗೆ ಸ್ವಲ್ಪ ಬೆಂಬಲ ಕೊಡಿಸಲು ಅವರು ಶಕ್ತರಾದರು. ಕೆಲವೆಡೆ ಅವರ ಜತೆಗೇ ಮತದಾನ ಮಾಡಿದರು.

ಭವಿಷ್ಯದಲ್ಲಿ ಅವರನ್ನು ಸರ್ಕಾರ, ಪಕ್ಷ ಮತ್ತು ಜನತೆ ಬಹಳ ಜಾಗರೂಕತೆಯಿಂದ ನೋಡುತ್ತಿರಬೇಕಾಗಿದೆ. ಅತ್ಯಂತ ವಿಷಪೂರಿತ ಪ್ರಚಾರ, ಪ್ರದೇಶಗಳಲ್ಲಿ ಅವರು ತೊಡಗಿದ್ದಾರೆ. ಆದ್ದರಿಂದ ನಾವೆಲ್ಲಾ ಜಾಗೃತರಾಗಿರಬೇಕು. ನಾವು ಎಲ್ಲಾ ಅಕಲ್ಪಸಂಖ್ಯಾತರಿಗೆಯ ಮುಸ್ಲಿಮರಿಗೂ ಯಾವ ಭಯವೂ ಬೇಡ ಎಂದು ಭರವಸೆ ನೀಡಿದ್ದೇವೆ. ಹಿಂದಿನಂತೆ, 1984ರಲ್ಲಿ ರಕ್ಷಿಸಿದಂತೆ ಮುಂದೆಯೂ ಸರಕಾರ ಮತ್ತು ಜನತೆ ಅವರನ್ನು ರಕ್ಷಿಸುತ್ತಾರೆ, ಕೋಮುವಾದಿ ಶಕ್ತಿಗಳು ರಾಜ್ಯದಲ್ಲಿ ಗಲಭೆ ಉಂಟುಮಾಡಲುಬಿಡುವುದಿಲ್ಲ.

ರಾಮಶಿಲಾಪೂಜೆ ಮೆರವಣಿಗೆಗಳ ಸಂದರ್ಭದಲ್ಲಿ ಎಡರಂಗ, ಸಿ.ಪಿ.ಐ.(ಎಂ) ಹಾಗೂ ಎಡಶಕ್ತಿಗಳು ತಳೆದ ದೃಢ ನಿಲುವಿನ ಪರಿಣಾಮವೇನು?

ಮೊದಲನೆಯದಾಗಿ, ಈಗಿನ ಸಂದರ್ಭದಲ್ಲಿ ಈ ಪ್ರಶ್ನೆ ಇದ್ದಕ್ಕಿದ್ದಂತೆ ಏಳುಗಿಲದ್ದಿದೆ, ವಾಸ್ತವವಾಗಿ ಹೇಗೆ ಪ್ರಶ್ನೆ ನ್ಯಾಯಾಲಯದಲ್ಲಿದೆ ಎಂದು ವಿವರಿಸಿ ಅವರ ಅಪಪ್ರಚಾರವನ್ನು ಎದುರಿಸಿದ್ದೆವು. ಇನ್ನು ಶಿಲಾಪೂಜೆಯ ವಿಚಾರ ನಾವು ಯಾರ ಧರ್ಮದಲ್ಲೂ ಹಸ್ತಕ್ಷೇಪ ನಡೆಸಲು ಸಾಧ್ಯವಿಲ್ಲ. ಇಟ್ಟಿಗೆಗಳನ್ನು ಯಾರಾದರೂ ನಂಬಿಕೆಯಿಂದ ಪೂಜಿಸಬೇಕೆಂದು ಬಯಸಿದರೆ ಅದು ಅವರ ಹಕ್ಕು ಎಂದು ಮಾನ್ಯ ಮಾಡಿದೆವು. ಆದರೆ ಅದನ್ನು ಖಾಸಗಿಯಾಗಿ ನಡೆಸಬೇಕೆಂದು ಒತ್ತಾಯಿಸಿದೆವು. ಸಾರ್ವಜನಿಕವಾಗಿ, ರಸ್ತೆಗಳಲ್ಲಿ ಧ್ವನಿವರ್ಧಕ ಇತ್ಯಾದಿಗಳನ್ನು ಬಳಸಿ ಅಲ್ಲ –ಸ್ವಂತ ಮನೆಗಳಲ್ಲಿ ಪೂಜಿಸಿ ಎಂದೆವು. ಇದರಲ್ಲಿ ಅವರು ಆಡಳಿತದೊಂದಿಗೆ ಸಹಕರಿಸಬೇಕು ಎಂದೆವು.

ನಮ್ಮ ಈ ನಿಲುವು ನ್ಯಾಯಪೂರ್ಣವಾದದ್ದು, ಸರಿಯಾದದ್ದು ಎಂದು ಜನ ಸ್ವೀಕರಿಸಿದರು. ದುರ್ಗಾಪೂಜೆಯ ಪೆಂಡಾಲುಗಳಲ್ಲಿ ಶಿಲಾಪೂಜೆ ನಡೆಯದಂತೆ ಸ್ವತಃ ಜನರೇ ಮಧ್ಯಪ್ರವೇಶಿಸಿ ತಡೆದರು ಎಂಬ ಸಂಗತಿ ಇದನ್ನು ತೋರಿಸಿಕೊಟ್ಟಿದೆ.

ನಂತರ ಎರಡು–ಮೂರು ಲಾರಿಗಳಲ್ಲಿ ಇಟ್ಟಿಗೆ ಸಾಗಿಸಲು ನಾವು ಅನುಮತಿ ನೀಡಿದೆವು. ಅದನ್ನು ತಡೆಯುವುದು ಸಾಧ್ಯವಿರಲಿಲ್ಲ. ಯಾಕೆಂದರೆ ಅದು ಅವರ ಹಕ್ಕು. ಆದರೆ ಸಾಗಿಸುವ ದಾರಿಯನ್ನು ನಾವು ನಿರ್ಧರಿಸಿದೆವು. ಬಿಹಾರ ಗಡಿಯವರೆಗೂ ರಾಜ್ಯ ಪೋಲಿಸರ ಕಾವಲಿನಲ್ಲಿ ಸಾಗಿಸಬೇಕೆಂದು ಹೇಳಿದೆವು.

ಲೋಕ ಸಭಾ ಚುನಾವಣೆಗಳಲ್ಲಿ ಅಭ್ಯರ್ಥಿಗಳ ಆಯ್ಕೆಗೆ ಪಕ್ಷ ಹಾಕಿಕೊಂಡ ಅಳತೆ ಗೋಲು ಯಾವುದು ವಿವರಿಸುತ್ತೀರಾ? ಪಶ್ಚಿಮ ಬಂಗಾಳದಂತಹ ಏಕಮಾತ್ರ ಮಹಿಳಾ ಅಭ್ಯರ್ಥಿಯಿರಲು ಏನು ಕಾರಣ?

ಈ ಪ್ರಶ್ನೆಯನ್ನು ರಾಜ್ಯದಲ್ಲೂ ಈ ಹಿಂದೆ ಎತ್ತಲಾಗಿತ್ತು. ವಾಸ್ತವ ಸಂಗತಿಯೆಂದರೆ ರಾಜ್ಯ ಸಮಿತಿಮೊದಲು ಜಿಲ್ಲೆಗಳಿಂದ ಅವರ ಸೂಚನೆಗಳನ್ನು ಪಡೆದುಕೊಂಡಿತು. ಸಹಜವಾಗಿಯೇ ಅವರು ತಾವು ಅತ್ಯುತ್ತಮ ಎಂದು ಭಾವಿಸಿದ ಅಭ್ಯರ್ಥಿಗಳ ಹೆಸರುಗಳನ್ನು ಶಿಫಾರಸುಮಾಡಿದರು. ಸದ್ಯದ ಎಂ.ಪಿ.ಗಳಲ್ಲಿ ಕೆಲವು ಬದಲಾವಣೆ ಮಾಡಬೇಕೆಂದು ರಾಜ್ಯ ಸಮಿತಿ ಬಯಸಿತು. ಹಳೆಯ ಎಂ.ಪಿ.ಗಳಲ್ಲಿ ನಮಗೆ ಭರವಸೆಯಿರಲಿಲ್ಲ ಎಂದಲ್ಲ. ವಿವಿಧ ಬೇರೆ ಕಾರಣಗಳಿಗಾಗಿ ಕೆಲವು ಬದಲಾವಣೆ ಅಗತ್ಯ ಎಂದು ನಮಗನಿಸಿತು. ಅಂತಿಮವಾಗಿ ಆರೆಂಟು ಬದಲಾವಣೆ ಮಾಡಲಾಯಿತು. ಉಳಿದಂತೆ ಸದ್ಯದ ಎಂ.ಪಿ.ಗಳನ್ನೇ ಮತ್ತೆ ಆಯ್ಕೆ ಮಾಡಲಾಯಿತು. ಮೂಲ ಪಟ್ಟಿಯಲ್ಲಿ ಇಬ್ಬರು ಮಹಿಳಾ ಅಭ್ಯರ್ಥಿಗಳಿದ್ದರು. ದುರದೃಷ್ಟವಶಾತ್ ಅವರಲ್ಲೊಬ್ಬರು ಕಾಯಿಲೆ ಬಿದ್ದದ್ದರಿಂದ ಒಬ್ಬ ಪುರುಷ ಸಂಗಾತಿಯನ್ನು ನಿಲ್ಲಿಸಬೇಕಾಯಿತು. ನಾಡಿಯಾದಿಂದ ಒಬ್ಬ ಮಹಿಳಾ ಎಂ.ಪಿ. ಮೂರು ಅವಧಿಗಳಲ್ಲಿ ಯಶಸ್ವಿಯಾಗಿ ಸ್ಪರ್ಧಿಸಿದ್ದರು. ಆದರೆ ಸ್ಥಳೀಯ ಅಗತ್ಯಗಳಿಗಾಗಿ ಈ ಬಾರಿ ಬದಲಿಸಬೇಕಾಯಿತು.

ಆದರೆ ಈ ಪ್ರಶ್ನೆಯ ಬಗ್ಗೆ ಮುಂದೆ ನಾವು ಗಮನ ಹರಿಸುತ್ತೇವೆ. ಈಗ ನಾನು ನಿಮ್ಮ ಗಮನಕ್ಕೆ ತರುವುದಿಷ್ಟೆ–ಒಬ್ಬ ಹುಡುಗ ಅಥವಾ ಹುಡುಗಿಯನ್ನು ಅಭ್ಯರ್ಥಿಯಾಗಿ ನಿಲ್ಲಿಸಬೇಕಾದರೆ ಅವರನ್ನು ಈ ಕೆಲಸಕ್ಕೆ ಸಿದ್ಧಗೊಳಿಸಬೇಕು. ಇದನ್ನೇ ನಾವು ಮುಂದೆ ಗಮನದಲ್ಲಿ ಇಟ್ಟುಕೊಳ್ಳುತ್ತೇವೆ.

ಇತ್ತೀಚೆಗೆ ಮತದಾನದ ಹಕ್ಕು ಪಡೆದ ಯುವ ಮತದಾರರ ಮೇಲೆ ಎಡರಂಗ ಪ್ರಚಾರದ ಪ್ರಭಾವವೇನು?

ಅಪಾರ ಪ್ರಭಾವ ಬೀರಿತು. ಯುವ ಜನರು ಮುಸ್ಲಿಮರು, ಹಿಂದೂಗಳು, ಸಿಖ್ಖರು, ಎಲ್ಲಾ ಕೋಮುಗಳ ಯುವಜನರು ಪ್ರಚಾರ ಕಾರ್ಯದಲ್ಲಿ ಭಾಗವಹಿಸಲು ಮತ್ತು ಸಹಜವಾಗಿಯೇ ಮತನೀಡಲು ತಂಡ–ತಂಡವಾಗಿ ಬಂದರು. ಅಷ್ಟೊಂದು ಯುವಜನ

ಪುಟ 6ಕ್ಕೆ

ಪಶ್ಚಿಮ ಬಂಗಾಳದಲ್ಲಿ ಚುನಾವಣೆ

ಕಳೆದ ಮೂರು ಲೋಕಸಭಾ ಚುನಾವಣೆಗಳ ಹೋಲಿಕೆ

(ಶೇಕಡಾ ಮತಗಳು)

		ಎಡರಂಗ			ಕಾಂಗ್ರೆಸ್ (ಐ)		
		1980	1984	1989	1980	1984	1989
1.	ಕುಚ್ ಬಿಹಾರ್ (ಮೀಸಲು)	59.42	53.04	51.35	36.34	46.05	44.85
2.	ಅಲಿಪುರ್‌ದುವಾರ್ (ಮೀಸಲು)	60.00	51.91	54.93	31.55	46.29	42.68
3.	ಜಲಪೈಗುರಿ	53.98	50.49	53.21	33.01	44.63	37.82
4.	ಡಾರ್ಜಿಲಿಂಗ್	45.75	41.96	37.65	41.27	41.71	56.49
5.	ರಾಣೀಗಂಜ್	41.58	44.79	45.25	41.86	48.39	45.64
6.	ಬಲುರ್ಘಾಟ್ (ಮೀಸಲು)	55.78	51.44	49.42	40.04	47.84	45.15
7.	ಮಾಲ್ಡಾ	48.90	43.98	44.06	51.30-	51.92	48.18
8.	ಜಂಗೀಪುರ	54.79	48.40	43.06	39.95	45.89	37.61
9.	ಮುರ್ಶಿದಾಬಾದ್	50.30	47.05	45.58	38.43	46.12	38.60
10.	ಬೆಹ್ರಾಂಪುರ	57.43	48.11	48.26	40.19	48.58	40.20
11.	ಕೃಷ್ಣನಗರ	50.72	49.25	46.31	37.64	48.85	44.14
12.	ನವದ್ವೀಪ (ಮೀಸಲು)	54.69	49.97	51.86	39.54	48.99	46.03
13.	ಬರಸಾತ್	53.30	47.64	50.52	36.30	49.46	44.28
14.	ಬಾಶಿರ್ಹಾಟ್	57.62	51.90	50.31	39.46	45.48	47.64
15.	ಜಯನಗರ (ಮೀಸಲು)	45.72	44.17	45.35	36.32	40.76	36.78
16.	ಮಥುರಾಪುರ (ಮೀಸಲು)	51.61	47.40	49.33	36.33	47.79	46.23
17.	ಡೈಮಂಡ್ ಹಾರ್ಬರ್	63.80	48.00	51.08	33.84	47.20	45.21
18.	ಜಾಧವಪುರ	60.00	47.85	50.19	31.64	50.87	46.67
19.	ಬ್ಯಾರಕ್‌ಪುರ	56.68	44.64	50.56	34.57	53.52	45.41
20.	ಡಂಡಂ	61.12	49.82	55.15	33.62	50.18	43.55
21.	ಕಲ್ಕತ್ತಾ (ವಾಯವ್ಯ)	33.94	29.23	38.25	47.90	64.24	50.95
22.	ಕಲ್ಕತ್ತಾ (ಈಶಾನ್ಯ)	47.95	39.32	46.92	41.04	57.11	51.59
23.	ಕಲ್ಕತ್ತಾ ದಕ್ಷಿಣ	46.09	41.34	50.07	38.09	56.93	46.61
24.	ಹೌರಾ	53.00	42.40	48.65	41.26	56.28	48.88
25.	ಉಲುಬೇರಿಯಾ	60.76	50.48	53.40	33.00	48.47	45.47
26.	ಶ್ರೀರಾಮಪುರ	59.90	46.90	53.02	38.20	51.50	44.77
27.	ಹೂಗ್ಲಿ	56.20	48.76	53.56	40.49	50.49	44.76
28.	ಆರಾಂಬಾಗ್	53.26	50.44	52.83	45.20	48.26	44.77
29.	ಪರ್‌ಸುಕ್ರಾ	57.10	53.63	58.11	37.86	45.65	40.76
30.	ತಾಮಲೂಕ್	56.98	49.93	50.05	34.20	48.07	46.90
31.	ಕೊಂಟ್ಯಾ	50.28	48.14	51.70	31.23	50.61	47.86
32.	ಮಿಡ್ನಾಪುರ	57.59	53.15	57.15	31.66	43.64	39.49
33.	ಝಾರ್‌ಗ್ರಾಂ (ಮೀಸಲು)	52.50	50.48	56.98	32.50	37.40	23.92
34.	ಪುರುಲಿಯಾ	54.78	47.99	56.01	29.52	45.47	35.49
35.	ಬಾಂಕುರ	45.01	48.62	55.91	35.05	44.23	37.66
36.	ಬಿಷ್ಣುಪುರ್ (ಮೀಸಲು)	58.27	54.77	59.78	36.81	42.17	34.20
37.	ದುರ್ಗಾಪುರ್ (ಮೀಸಲು)	57.30	53.07	ಚುನಾವಣೆ ನಡೆದಿಲ್ಲ	38.12	46.93	ಚುನಾವಣೆ ನಡೆದಿಲ್ಲ
38.	ಅಸನ್‌ಸೋಲ್	40.55	40.87	59.59	42.91	55.18	43.99
39.	ಬರ್ದ್ವಾನ್	58.97	53.50	61.28	39.98	45.08	38.02
40.	ಕಟ್ವಾ	59.97	53.35	52.22	37.41	46.65	38.62
41.	ಬೋಲ್‌ಪುರ	54.97	55.09	60.42	40.72	44.53	36.97
42.	ಬೀರ್‌ಭೂಮ್(ಮೀಸಲು)	51.91	50.32	50.88	42.48	47.88	41.77

1984ಕ್ಕೆ ಹೋಲಿಸಿದರೆ 1989ರಲ್ಲಿ ಎಡರಂಗ ಎಲ್ಲಾ ಕಡೆಗಳಲ್ಲೂ ತನ್ನ ಬಲ ಹೆಚ್ಚಿಸಿಕೊಂಡದ್ದನ್ನು ಕಾಣಬಹುದು. 1980ಕ್ಕೆ ಹೋಲಿಸಿದಾಗಲೂ ಹಲವೆಡೆ ಎಡರಂಗದ ಬಲವೃದ್ಧಿಯಾಗಿರುವುದು, ಕೆಲವೆಡೆ ಅಲ್ಪ ಪ್ರಮಾಣದಲ್ಲಿ ಕಡಿಮೆಯಾದದ್ದೂ ಈ ಅಂಕಿಸಂಖ್ಯೆಗಳಲ್ಲಿ ಕಂಡುಬರುತ್ತದೆ.

ಕಾಂಗ್ರೆಸ್ಸಿನ ಪ್ರಯತ್ನ-ತೆಲುಗು ದೇಶಂ ದೌರ್ಬಲ್ಯ

ಉತ್ತರ ಭಾರತದ ಜನತೆ ಕಾಂಗ್ರೆಸ್ (ಐ) ನ್ನು ಸಂಪೂರ್ಣ ... ಸೋಲಿಸುವಾಗ, ಕಾಂಗ್ರೆಸೇತರ ಸರಕಾರಗಳಿದ್ದ ದಕ್ಷಿಣದಲ್ಲಿ ಕಾಂಗ್ರೆಸ್ (ಐ) ಸಂಪೂರ್ಣ ಯಶಸ್ವಿಯಾಗಿದೆ. ಕರ್ನಾಟಕದಂತೆ ಆಂಧ್ರ ಪ್ರದೇಶದಲ್ಲಿ ಏಳು ವರ್ಷ ಆಳ್ವಿಕೆ ನಡೆಸಿದ, ಕೇಂದ್ರ ಸರ್ಕಾರದ ಸರ್ವಾಧಿಕಾರಿ ಆಳ್ವಿಕೆಯ ವಿರುದ್ಧ ಸತತ ಹೋರಾಟ ನಡೆಸಿದ ತೆಲುಗು ದೇಶಂ ಪಕ್ಷ ಸೋಲನನುಭವಿಸಿದೆ. ಸಿ.ಪಿ.ಐ. (ಎಂ) ಸೇರಿದಂತೆ ಅದರ ಎಲ್ಲಾ ಮಿತ್ರಪಕ್ಷಗಳಿಗೂ ಕೂಡಾ ಸೋಲಾಗಿದೆ. ಸಿ.ಪಿ.ಐ. (ಎಂ) ಆಂಧ್ರ ಪ್ರದೇಶ ರಾಜ್ಯ ಸೆಕ್ರೆಟೇರಿಯೆಟ್ ಇದನ್ನು ವಿಮರ್ಶಿಸಿ ಕೈಗೊಂಡ ನಿರ್ಣಯದ ಸಾರಾಂಶ ಇದು.

ಉತ್ತರ ಭಾರತದಲ್ಲಿ ರಾಜೀವ್ ಸರಕಾರ ಸೋಲುವುದು ಹೆಚ್ಚೆಚ್ಚು ಸ್ಪಷ್ಟವಾಗುತ್ತಾ ಹೋದಂತೆ ಕಾಂಗ್ರೆಸ್ (ಐ) ಈ ನಷ್ಟವನ್ನು ದಕ್ಷಿಣ ಭಾರತದಲ್ಲಿ ತುಂಬಿಸಿಕೊಳ್ಳಲು ತನ್ನೆಲ್ಲಾ ಶಕ್ತಿಯನ್ನು ಕೇಂದ್ರೀಕರಿಸಿತು. ಕಾಂಗ್ರೆಸೇತರ ಸರಕಾರಗಳು ಅಭಿವೃದ್ಧಿ ಕಾರ್ಯಗಳ, ಕೈಗಾರಿಕೆ, ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳದಂತೆ ಸತತ ಅಡ್ಡಿ ಒಡ್ಡುತ್ತಾ ಬಂದ ಕಾಂಗ್ರೆಸ್ ಪಕ್ಷ ಇದೀಗ ರಾಜ್ಯಸರಕಾರಗಳ ಹೆಸರು ಕೆಡಿಸಲು ಬಳಸಿತು.

ತೆಲುಗು ದೇಶಂ ಪಕ್ಷ ರಾಷ್ಟ್ರೀಯ ರಂಗದ ಸ್ಥಾಪನೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದು, ಎಡರಂಗ ಸರ್ಕಾರಗಳೊಡನೆ ಸೇರಿ ಕೇಂದ್ರದಲ್ಲಿ ಒಂದು ಪರ್ಯಾಯ ಸರ್ಕಾರದ ರಚನೆಗೆ ಅದರ ಪ್ರಯತ್ನ ಕಾಂಗ್ರೆಸ್ (ಐ) ಗೆ ಕಣ್ಣುರಿಯುಂಟು ಮಾಡಿತ್ತು. ಆದ್ದರಿಂದ ರಾಜ್ಯದ ಆಡಳಿತದಲ್ಲಿ ಮೂಗು ತೂರಿ ಅದನ್ನು ತನ್ನ ಹತೋಟಿಗೆ ಒಳಪಡಿಸಲು ಕಾಂಗ್ರೆಸ್ ಕೇಂದ್ರ ಸರ್ಕಾರದ ಮೂಲಕ ಸರ್ವ ಪ್ರಯತ್ನ ನಡೆಸಿತು. ರಾಜ್ಯ ಸರಕಾರ ಕೇಳಿದ ಸವಲತ್ತುಗಳನ್ನು ಒದಗಿಸದೆ ಉಗ್ರಗಾಮಿ ಶಕ್ತಿಗಳಿಗೆ ಪ್ರೋತ್ಸಾಹ ನೀಡಿತು ಹೀಗೆ ತಾನು ಅಧಿಕಾರಕ್ಕೆ ಮರಳಿ ಬರುತ್ತೇನೆ, ಬಂದಾಗ ನೋಡಿಕೊಳ್ಳುತ್ತೇನೆ ಎಂಬ ಭಯವನ್ನು ರಾಜ್ಯ ಆಡಳಿತದಲ್ಲಿ ಅದು ಸೃಷ್ಟಿಸಿತು. ಈ ರೀತಿ ರಾಜ್ಯ ಆಡಳಿತ

ಆಂಧ್ರಪ್ರದೇಶ

ಯಂತ್ರವನ್ನು ತನ್ನ ಲಾಭಕ್ಕೆ ಬಳಸಲು ಕಾಂಗ್ರೆಸ್ ಪ್ರಯತ್ನಿಸಿತು.

ಕಾಂಗ್ರೆಸ್ (ಐ) ಕೇಂದ್ರದಿಂದಲೇ ಅಭ್ಯರ್ಥಿಗಳಿಗೆ ಕೋಟಿ ಗಟ್ಟಲೆ ರೂಪಾಯಿಗಳನ್ನು ಒದಗಿಸಿ ತನ್ನೆಲ್ಲಾ ಸಂಘಟನಾ ಮಂತ್ರವನ್ನು ಯೋಜಿತ ರೀತಿಯಲ್ಲಿ ಅದು ಚುನಾವಣೆಗಳಿಸಿತು. ಚುನಾವಣೆಯನ್ನು ಪರೋಕ್ಷವಾಗಿ ಘೋಷಿಸಿ ಅದರ ಲಾಭವನ್ನು ಪಡೆಯಿತು. ಹೇಗಾದರೂ ಅಧಿಕಾರಕ್ಕೆ ಮರಳಲೇಬೇಕೆಂದು ನಿರ್ಧರಿಸಿ ಅದಕ್ಕಾಗಿ ಎಂತಹ ಕೀಳುಮಟ್ಟಕ್ಕೂ ಇಳಿಯಲು ಅದು ಹೇಸಲಿಲ್ಲ. ಎಲ್ಲಾ ಜಾತಿ, ಕೋಮು, ಪ್ರಾದೇಶಿಕ, ಸಂಕುಚಿತ, ವಿಭಾಜಕ ಶಕ್ತಿಗಳನ್ನು ಎಬ್ಬಿಸಿತು. ಮತದಾರರಿಗೆ ಹಣದ ಆಮಿಷವೊಡ್ಡಿತು.

ತದ್ವಿರುದ್ಧವಾಗಿ ತೆಲುಗುದೇಶಂ ಕಾಂಗ್ರೆಸ್ಸಿನ ಆಕ್ರಮವನ್ನು ಎದುರಿಸಲು ಸಂಘಟನಾತ್ಮಕವಾಗಿ ಸಿದ್ಧವಿರಲಿಲ್ಲ. ತನ್ನ ಬೆಂಬಲಿಗರ ಪ್ರಜಾಪ್ರಭುತ್ವ ಪ್ರಜ್ಞೆಯನ್ನು ಎಬ್ಬಿಸಿ ಅವರಲ್ಲಿ ವಿಶ್ವಾಸ ತುಂಬಿಸುವುದೂ ಅದಕ್ಕೆ ಸಾಧ್ಯವಾಗಲಿಲ್ಲ. ಪಕ್ಷದ ಮುಖಂಡತ್ವದ ಸರ್ವಾಧಿಕಾರಿ ಮನೋಭಾವನೆಗಳಿಂದಾಗಿ ಪಕ್ಷದೊಳಗೆ ಭಿನ್ನಮತ ಬೆಳೆಯುತ್ತಿತ್ತು. ಇದೀ ಮಂತ್ರಿಮಂಡಲ ವನ್ನು ವಿಸರ್ಜಿಸುವುದು, ಮುಖಂಡರನ್ನು ಅಭ್ಯರ್ಥಿಗಳನ್ನು ನಿಲ್ಲಿಸುವುದು ಇತ್ಯಾದಿಗಳಿಂದ ಆ ಪಕ್ಷಕ್ಕೆ ಬಹಳ ಹಾನಿಯಾಗಿದೆ. ನಮ್ಮ ಪಕ್ಷ ಮಿತ್ರಪಕ್ಷವಾಗಿ ನೀಡಿದ ಸಲಹೆಗಳಿಗೂ ಅದು ಗಮನ ಕೊಡಲಿಲ್ಲ. ಪಕ್ಷದ ಸಂಘಟನೆ ಕಟ್ಟುವ, ತಮ್ಮ ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅದರ ಮುಖಂಡರ, ಕಾರ್ಯಕರ್ತರ ಆಕಾಂಕ್ಷೆಗಳೂ ದುರ್ಬಲಗೊಂಡವು, ಅಸ್ತವ್ಯಸ್ತಗೊಂಡವು. ಪಕ್ಷ ಬಿಟ್ಟು ಕಾಂಗ್ರೆಸ್ ಸೇರಿ ಟಿಕೇಟು ಪಡೆದವರು ಚುನಾವಣೆ ಗೆದ್ದು ಬಂದರು. ಕಾಂಗ್ರೆಸ್ (ಐ) ಸ್ಥಿತಿ ಇದಕ್ಕಿಂತಲೂ ಹೊಲಸಾಗಿದ್ದರೂ ಅದು ಹೇಗಾದರೂ ಅಧಿಕಾರಕ್ಕೆ ಬರುವ ಏಕೈಕ ಉದ್ದೇಶದಿಂದ ಕೆಲಸ ಮಾಡುತ್ತಿತ್ತು.

ಭೂಸುಧಾರಣೆ, ಮಧ್ಯಮವರ್ಗದ ನೌಕರರು, ಅಧ್ಯಾಪಕರ ಬಗ್ಗೆ ತೆಲುಗು ದೇಶಂ ಸರಕಾರದ ನಿಲುವು, ಸಾಮಾನ್ಯ ರೈತರು ಹಾಗೂ ಸಣ್ಣ ವ್ಯಾಪಾರಿಗಳನ್ನು ಪಕ್ಷದ ತೆರಿಗೆಯಿಂದ ಈ ವಿಭಾಗಗಳ

ಪುಟ 6ಕ್ಕೆ

> ದೇಶದ ಎದುರಿಸಿರುವ ಸಮಸ್ಯೆಗಳನ್ನು ಪರಿಹರಿಸಲು ರಾಷ್ಟ್ರೀಯ ಒಮ್ಮತ ಅಗತ್ಯ. ಆದರೆ ರಾಷ್ಟ್ರೀಯ ಒಮ್ಮತ ರೂಪಿಸುವುದೆಂದರೆ ನೀತಿಯಲ್ಲಿ ರಾಜಿ ಮಾಡಿಕೊಳ್ಳುವುದು ಎಂಬುದೂ ಅಲ್ಲ.
> -ಕಾಂ. ಇ.ಎಂ.ಎಸ್.

> ಎಡಪಕ್ಷಗಳಿಗೆ ಗದ್ದುಗೆ ಬೇಡ. ಸಂಸತ್ತಿನೊಳಗೆ ಜನರ ಹಿತರಕ್ಷಣೆಗೆ ಮಧ್ಯಪ್ರವೇಶ, ಹೊರಗಡೆ ಸಾಮಾಜಿಕ ಹೋರಾಟಗಳ ಮೂಲಕ ಜನರ ಹಿತರಕ್ಷಣೆ- ಇದು ಎಡಪಕ್ಷಗಳ ಒತ್ತಾಸೆ.
> -ಕಾಂ. ಹರಿಕಿಶನ್‌ಸಿಂಗ್ ಸುರ್ಜಿತ್

ಪಂಜಾಬಿನ ಸನ್ನಿವೇಶಕ್ಕೆ ನಾಟಕೀಯ ತಿರುವು

ಪುಟ 4 ರಿಂದ

ವಿಧಾನಸಭೆಗೆ ಚುನಾವಣೆ ನಡೆಸಲು ತೀರ್ಮಾನು ಮಾಡಿರುವುದು ಯಾವುದೇ ಅಜ್ಞಾನದಿಂದ ಅಲ್ಲ. ಬದಲಾಗಿ ಹೀಗೆ ಚುನಾವಣೆ ನಡೆದು ಉಗ್ರಗಾಮಿಗಳ ಬಲ ಹೆಚ್ಚಿ ಕೇಂದ್ರದ ಹೊಸ ಸರ್ಕಾರಕ್ಕೆ ಒಂದು ತೀವ್ರ ತಲೆನೋವು ಸೃಷ್ಟಿಸುವುದೇ ಅವರ ಉದ್ದೇಶವಿರಬೇಕು. ಕಾಂಗೈ ಕೂಡಾ ಸೇರಿದಂತೆ ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತಗೊಂಡು ರಾಷ್ಟ್ರೀಯ ಸಹಮತ ರೂಪಿಸುವ ಪ್ರಧಾನ ಮಂತ್ರಿ ವಿ.ಪಿ.ಸಿಂಗ್‌ರ ಆಶ್ವಾಸನೆಯನ್ನು ನಿರ್ಲಕ್ಷಿಸಿ ಮತ್ತೆ ಆಳುವ ಪಕ್ಷ ರಾಜಕೀಯ ಚುನಾವಣಾ ಲಾಭ ಗಿಟ್ಟಿಸಲು ಪ್ರಯತ್ನ ಮುಂದುವರೆಸಿದೆ. ಇದನ್ನು ರಾಷ್ಟ್ರೀಯ ಸಮಸ್ಯೆಯಾಗಿ ಕಾಣಲು ಇನ್ನೂ ಅದು ಸಿದ್ಧವಿಲ್ಲ.

> ಕಾಂಗ್ರೆಸ್ (ಐ) ತನ್ನ ದಿವಾಳಿಕೋರ ನೀತಿಯ ಫಲಕಂಡೂ ಇನ್ನೂ ಪಾಠ ಕಲಿತಂತಿಲ್ಲ. ಕಾಂಗೈ ಕೂಡಾ ಸೇರಿದಂತೆ ಎಲ್ಲಾ ಪಕ್ಷಗಳನ್ನು ವಿಶ್ವಾಸಕ್ಕೆ ತಗೊಂಡು ಒಂದು ರಾಷ್ಟ್ರೀಯ ಸಹಮತ ರೂಪಿಸಿ ಸಮಸ್ಯೆಯನ್ನು ಪರಿಹರಿಸುವ ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ರ ಆಶ್ವಾಸನೆಯನ್ನು ನಿರ್ಲಕ್ಷಿಸಿ ಈ ಮಾಜೀ ಆಳುವ ಪಕ್ಷ ಇನ್ನೂ ರಾಜಕೀಯ - ಚುನಾವಣಾ ಲಾಭ ಪಡೆಯುವ ದೃಷ್ಟಿಯಿಂದಲೇ ಯೋಚಿಸುತ್ತದೆ.

ಈ ಸಂದರ್ಭದಲ್ಲಿ ವಿಧಾನಸಭಾ ಚುನಾವಣೆ ಆರಿಸಿಕೊಳ್ಳುವ ಬದಲು ಹೊಸ ಸರಕಾರ ಪಂಜಾಬ್ ಸಮಸ್ಯೆಯನ್ನು ಆದ್ಯತೆಯ ಮೇಲೆ ಪರಿಹರಿಸಲು ಪ್ರಯತ್ನಿಸುವ ತನ್ನ ಘೋಷಿತ ಧೋರಣೆಯನ್ನು ಪಟ್ಟು ಹಿಡಿದು ಮುಂದುವರೆಸಬೇಕು. ಹಿಂಸಾಚಾರ ಈಗ ಜಮ್ಮು - ಕಾಶ್ಮೀರಕ್ಕೂ ಹರಡಿರುವ ಹಿನ್ನೆಲೆಯಲ್ಲಿ ಇದು ಇನ್ನೂ ಮಹತ್ವಪೂರ್ಣ. ಅಲ್ಲಿ ಪರಿಸ್ಥಿತಿ ಪಂಜಾಬಿಗಿಂತಲೂ ಹದಗೆಟ್ಟಿದೆ.. ಪಂಜಾಬಿನಲ್ಲಿ ಜನ ಭಯೋತ್ಪಾದಕರ ಜತೆಗಿಲ್ಲ. ಆದರೆ ಜಮ್ಮು ಕಾಶ್ಮೀರದಲ್ಲಿ ಭಯೋತ್ಪಾದಕರಿಗೆ ಪ್ರತಿರೋಧ ಒಡ್ಡುವವರೇ ಇಲ್ಲ. ಮೂಲಭೂತವಾದಿಗಳ ಒಂದು ಕರೆಗೇ ಇಡೀ ಕಾಶ್ಮೀರವೇ ಸ್ತಬ್ಧಗೊಳ್ಳುತ್ತದೆ.

ಎಡಪಕ್ಷಗಳ ಹೋರಾಟ

ಭಯೋತ್ಪಾದಕರು ಮತ್ತು ಪ್ರತ್ಯೇಕತಾವಾದಿಗಳ ವಿರುದ್ಧ ಎಡ ಪಕ್ಷಗಳ ಹೋರಾಟವಂತೂ ಖಂಡಿತಾ ಮುಂದುವರೆಯುತ್ತದೆ. ಇದಕ್ಕಾಗಿ ಸಿ.ಪಿ.ಐ. (ಎಂ). ಸಿ.ಪಿ.ಐ. ಭಾರೀ ಬೆಲೆ ತೆರಬೇಕಾಗಿ ಬಂದಿದೆ. ಇನ್ನು ಮುಂದೆಯೂ ನಮ್ಮ ಇನ್ನಷ್ಟು ಸಂಗತಿಗಳು ಹುತಾತ್ಮರಾಗಬೇಕಾಗಬಹುದು ಎಂದು ಗೊತ್ತಿದ್ದರೂ ನಮ್ಮ ಹೋರಾಟ ಮುಂದುವರೆಯುವುದು.

ಚುನಾವಣೆಗಳು ಮುಗಿದಿವೆ. ಸಿ.ಪಿ.ಐ. ಮತ್ತು ಸಿ.ಪಿ.ಐ.(ಎಂ) ಒಟ್ಟು ಏಳು ಸ್ಥಾನಗಳಿಗೆ ಸ್ಪರ್ಧಿಸಿದ್ದವು. ಒಂದು ಸ್ಥಾನವನ್ನು ಪಡೆದಿಲ್ಲ ಎಂಬುದು ನಿಜ. ಆದರೆ ಈ ಚುನಾವಣಾ ಹೋರಾಟದಲ್ಲೂ, ಆದರ ಮೊದಲಿನಂತೆ ಪ್ರತ್ಯೇಕತಾವಾದ, ಭಯೋತ್ಪಾಕತೆಯ ವಿರುದ್ಧ ಪ್ರಚಾರ ನಡೆಸಿದ್ದು ನಮ್ಮೆರಡು ಪಕ್ಷಗಳು ಮಾತ್ರ. ಚುನಾವಣಾ ಹೋರಾಟದ ಮೂಲಕ ರಾಷ್ಟ್ರೀಯ ಐಕ್ಯತೆಯ, ಕೋಮು ಸೌಹಾರ್ದತೆಯ ಸಂದೇಶವನ್ನು ರಾಜ್ಯದ ಎಲ್ಲೆಡೆ ಹರಡಲು ನಮಗೆ ಅವಕಾಶವಾಗಿದೆ. ಎಡಪಕ್ಷಗಳ ಶ್ರಮದಿಂದಾಗಿ ಜಾಲಂದರ್ ಕ್ಷೇತ್ರ ಕೂಡಾ ಉಗ್ರಗಾಮಿಗಳ ಪಾಲಾಗುವುದು ತಪ್ಪಿತು. ಪಂಜಾಬೀ ಜನತೆಯದ್ದು ಕ್ರಾಂತಿಕಾರಿ ಪರಂಪರೆ. ಇದನ್ನು ಆಧರಿಸಿಯೇ, ಜನತೆಯ ಮೇಲೆ ವಿಶ್ವಾಸವಿಟ್ಟು ಉಗ್ರಗಾಮಿತ್ವದ ವಿರುದ್ಧ ಜಾತ್ಯಾತೀತ, ಪ್ರಜಾಪ್ರಭುತ್ವ ಶಕ್ತಿಗಳ ಜತೆಗೂಡಿ ನಮ್ಮ ಹೋರಾಟ ಮುಂದುವರೆಯುತ್ತದೆ. ಮತ್ತು ರಾಷ್ಟ್ರೀಯ ಸಹಮತ ಕ್ರೋಢೀಕರಿಸಿ ಪಂಜಾಬ್ ಸಮಸ್ಯೆಗೆ ರಾಜಕೀಯ ಪರಿಹಾರ ಕಂಡುಹಿಡಿಯುವ ಹೊಸ ಕೇಂದ್ರ ಸರ್ಕಾರದ ಎಲ್ಲಾ ಪ್ರಯತ್ನಗಳನ್ನು ನಾವು ಬೆಂಬಲಿಸುತ್ತೇವೆ.

ಎಡರಂಗದ ವಿಜಯ

ಪುಟ 4 ರಿಂದ

ಅಷ್ಟೊಂದು ಉತ್ಸಾಹದಿಂದ, ಒತ್ತಾಸೆಯಿಂದ ದುಡಿಯುತ್ತಿರುವುದನ್ನು ಕಾಣುವುದು ಈ ಪ್ರಚಾರದ ಒಂದು ಅತ್ಯಂತ ಹೃದಯಂಗಮ ಭಾಗವಾಗಿತ್ತು. ಈ ಕಾಂಗ್ರೆಸ್ ಸರ್ಕಾರ ನಿಮಗೇನು ಕೊಟ್ಟಿದೆ ನೋಡಿ. ನಿರುದ್ಯೋಗ ಬಂದು ಕೋಟಿಯಿಂದ ಮೂರೆವರೆ ಕೋಟಿಯನ್ನೂ ಮೀರಿದೆ. ಸರಕಾರದಲ್ಲಿ ಮತ್ತು ತಮ್ಮ ಜೀವನದಲ್ಲಿ ಬದಲಾವಣೆ ತರಲು ನೀವೇಕೆ ದುಡಿಯಬಾರದು ಎಂದು ಅವರಿಗೆ ಹೇಳಿದವು.

ಮತ್ತು ಅವರು ಮತದಾನ ಮಾಡುತ್ತಿದ್ದುದು ಕೂಡಾ ಮೊದಲಬಾರಿಯೇನಲ್ಲ. ಮುನಿಸಿಪಲ್ ಚುನಾವಣೆಗಳಲ್ಲಿ 18 ವರ್ಷ ಹಾಗೂ ಮೇಲಿನವರಿಗೆ ಮತದಾನದ ಹಕ್ಕನ್ನು ಎಡರಂಗ ಸರ್ಕಾರ ಈಗಾಗಲೇ ನೀಡಿತ್ತು. ತಮ್ಮ ಹಕ್ಕನ್ನು ಈಗಾಗಲೇ ಅವರು ಪೂರ್ಣವಾಗಿ ಚಲಾಯಿಸಿದ್ದರು.

ಕಾಂಗ್ರೆಸ್(ಐ)ಗೆ ಕೂಡಾ ಯುವಜನರ ಒಂದು ವಿಭಾಗವನ್ನು ಅನುಸರಿಸಲು ತಪ್ಪು ದಾರಿಗೆಳೆಯಲು ಸಾಧ್ಯವಾಗಿದೆ. ಇದನ್ನು ನಿರ್ಲಕ್ಷಿಸುವುದು ತಪ್ಪಾಗುತ್ತದೆ. ಆದರೆ ಬಹುಪಾಲು ಯುವಜನ ಎಡಶಕ್ತಿಗಳ ಸುತ್ತ ನೆರೆದರು. ಇದು ಭವಿಷ್ಯದ ದೃಷ್ಟಿಯಿಂದ ಉತ್ತಮಸಂಗತಿ.

ದೆಹಲಿ ರ್‍ಯಾಲಿ

ಪುಟ 1 ರಿಂದ

ಎಂಬುದೂ ಅಲ್ಲ ಎಂದು ಇ.ಎಂ.ಎಸ್. ಸ್ಪಷ್ಟ ಪಡಿಸಿದರು.

ಕಾಂ. ಸುರ್ಜಿತ್ ಒಂದೂವರೆ ವರ್ಷದ ಹಿಂದೆ ದೆಹಲಿಯಲ್ಲಿ ನಡೆದ ಬೃಹತ್ ರ್‍ಯಾಲಿ ರಾಜೀವ್‌ಗಾಂಧಿ ರಾಜೀನಾಮೆ ಒತ್ತಾಯಿಸಿದ್ದನ್ನು ನೆನಪಿಸಿಕೊಡುತ್ತಾ ಜನ ಈ ಕರೆಗೆ ಓಗೊಟ್ಟರು ಎಂದು ಹೇಳಿದರು. ಆದರೆ ಕೋಮುವಾದದ ವಿರುದ್ಧ ಹೋರಾಟ ಮುಂದುವರಿಯುತ್ತದೆ. ಅಲ್ಪ ಲಾಭಕ್ಕಾಗಿ ಅದನ್ನು ತ್ಯಜಿಸಲಾಗದು ಎಂದು ಸುರ್ಜಿತ್ ನುಡಿದರು.

ಎಡ ಪಕ್ಷಗಳು ಅಧಿಕಾರ ಗದ್ದುಗೆಗೆ ಆಸೆ ಪಡುವುದಿಲ್ಲ. ಅವುಗಳ ಪ್ರಮುಖ ಒತ್ತಾಸೆಯೆಂದರೆ ಸಂಸತ್ತಿನಲ್ಲಿ ಜನರ ಹಿತಾಸಕ್ತಿಗಳ ರಕ್ಷಣೆಗೆ ಮಧ್ಯ ಪ್ರವೇಶ ಹಾಗೂ ಹೊರಗೆ ಸಾಮೂಹಿಕ ಹೋರಾಟಗಳ ಮೂಲಕ ಜನರ ಹಿತರಕ್ಷಣೆ ಎನ್ನುತ್ತಾ ಸುರ್ಜಿತ್ ವಿಫಲಗೊಳ್ಳುವ ಸರಕಾರ ಜನತೆಯ ಸಿಟ್ಟಿನಿಂದ ತಪ್ಪಿಸಿಕೊಳ್ಳಲಾರದು ಎಂಬುದನ್ನು ನೆನಪಿಟ್ಟುಕೊಳ್ಳಬೇಕು ಎಂದರು.

1984 ರಲ್ಲಿ ದೇಶದ ಐಕ್ಯತೆಯ ಘೋಷಣೆಯ ಮೇಲೆ ಭಾರೀ ಬಹುಮತ ಪಡೆದ ರಾಜೀವ್ ಸರ್ಕಾರದ ಅನುಭವದಿಂದ ಹೊಸ ಸರಕಾರ ಪಾಠ ಕಲಿಯುತ್ತದೆ ಎಂದು ನಿರೀಕ್ಷಿಸಿದ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು ಕೂಡಾ ಹೊಸ ಸರಕಾರ ಐದು ವರ್ಷಗಳ ಕಾಲ ಪೂರ್ಣವಾಗಿ ಆಡಳಿತ ನಡೆಸುವುದೆಂದು ಆಶಿಸಿದರು. ಎಡರಂಗಸರ್ಕಾರದ 12 ವರ್ಷಗಳ ಆಡಳಿತದಿಂದಲೂ ಬಹಳಷ್ಟು ಕಲಿಯಬಹುದು ಎಂದು. ಕಾಂ. ಜ್ಯೋತಿ ಬಸು ಎಡರಂಗದ ಗೆಲುವಿನ ಪ್ರಮುಖ ಕಾರಣವೆಂದರೆ ಅದು ಎಂದೂ ಸುಳ್ಳು ಆಶ್ವಾಸನೆ ನೀಡಲಿಲ್ಲ. ತಾನು ಈಡೇರಿಸ ಬಹುದಾದ ಆಶ್ವಾಸನೆಗಳನ್ನಷ್ಟೇ ಕೊಟ್ಟಿತ್ತು ಎಂದು ನುಡಿದರು.

ದೆಹಲಿ ರಾಜ್ಯ ಕಾರ್ಯದರ್ಶಿ ಜೋಗಿಂದರ್ ಶರ್ಮಾರ ಅಧ್ಯಕ್ಷತೆಯಲ್ಲಿ ನಡೆದ ಈ ರ್‍ಯಾಲಿಯಲ್ಲಿ ಸೋಷೆತ್ ಹಷ್ಮಿ, ಬೃಂದಾ ಕಾರತ್ ಮತ್ತು ಎಂ.ಎ. ಜಾವೇದ್ ಕೂಡಾ ಮಾತನಾಡಿದರು. ಪಾಲಿಟ್‌ಬ್ಯೂರೋ ಸದಸ್ಯ ಕಾಂ. ನೃಪನ್ ಚಕ್ರವರ್ತಿ ಮತ್ತು ಹಲವು ಸಿ.ಪಿ.ಐ(ಎಂ) ಕೇಂದ್ರ ಸಮಿತಿ ಸದಸ್ಯರು ಸಭೆಯಲ್ಲಿ ಹಾಜರಿದ್ದರು.

ಸಭಿಕರ ಪರವಾಗಿ ಪ್ರೊ. ಮಹಮ್ಮದ್ ಹಸನ್, ಸದಾರ್ಕರ್ ಪ್ರೀತಮ್ ಸಿಂಗ್ ಮತ್ತು ಮೋಹನಲಾಲ್ ಅನುಕ್ರಮವಾಗಿ ಇ.ಎಂ.ಎಸ್., ಜ್ಯೋತಿಬಸು ಹಾಗೂ ನೃಪೇನ್ ಚಕ್ರವರ್ತಿಯವರನ್ನು ಸ್ವಾಗತಿಸಿದರು.

ಕಾಂ. ಜೋಗಿಂದರ್ ಶರ್ಮಾ ಜನತೆಗೆ ಕೃತಜ್ಞತೆ ಅರ್ಪಿಸುತ್ತಾ ರಾಜಧಾನಿಯಲ್ಲೂ ಎಡ ಮತ್ತು ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಪ್ರೋತ್ಸಾಹ ನೀಡಬೇಕೆಂದು ಮನವಿ ಮಾಡಿದರು.

> ರಾಷ್ಟ್ರೀಯರಂಗ ಸರ್ಕಾರ ಎಡರಂಗ ಸರ್ಕಾರದ ಹನ್ನೆರಡು ವರ್ಷಗಳ ಅನುಭವದಿಂದ ಪಾಠ ಕಲಿಯಬಹುದು.ನಾವು ಎಂದೂ ಸುಳ್ಳು ಆಶ್ವಾಸನೆ ನೀಡಿಲ್ಲ. ನಾವು ಈಡೇರಿಸಬಹುದಾದ ಆಶ್ವಾಸನೆಗಳನ್ನಷ್ಟೇ ನೀಡಿದ್ದೇವೆ.
> -ಕಾಂ. ಜ್ಯೋತಿಬಸು

ಕಾಂಗೈನ ಶತಪ್ರಯತ್ನ - ತೆಲುಗು ದೇಶಂ ದೌರ್ಬಲ್ಯ

ಪುಟ 5 ರಿಂದ

ಅತೃಪ್ತಿಯನ್ನು ಕಾಂಗ್ರೆಸ್ (ಐ) ಗರಿಷ್ಟವಾಗಿ ಬಳಸಿಕೊಂಡಿತು ಮಹಿಳೆಯರಿಗೆ ಆಸ್ತಿ ಹಕ್ಕು, ಎರಡೂ ರೂ. ಕಿಲೋಗೆ ಅಕ್ಕಿ, ಬಡವರಿಗೆ ವಸತಿ, ವಿದ್ಯುಚ್ಛಕ್ತಿ ದರದಲ್ಲಿ ರಿಯಾಯ್ತಿ ಇತ್ಯಾದಿ ಉತ್ತಮ ಕೆಲಸಗಳು ಕೂಡಾ ತೆಲುಗು ದೇಶಂ ಸರಕಾರದ ಮೂಲಭೂತ ನಿಲುವಿನಿಂದ ಉಂಟಾದ ಅತೃಪ್ತಿಯನ್ನು ಹೋಗಲಾಡಿಸಲಾಗಲಿಲ್ಲ. ತನ್ನ ಆಳ್ವಿಕೆಯ ಕೊನೆಯ ಈ ಹಂತದಲ್ಲಿ ಈ ನಿಲುವನ್ನು ಸ್ವಲ್ಪ ಬದಲಿಸಿದರೂ ನೀಡಿದ ಆಶ್ವಾಸನೆಗಳನ್ನು ಅದು ಜಾರಿಗೆ ತರಲಿಲ್ಲ. ವಿದ್ಯಾರ್ಥಿಗಳು, ಯುವಜನರಲ್ಲಿಯೂ ನಿರುದ್ಯೋಗ ಪರಿಹಾರದ ಬಗ್ಗೆ ಅತೃಪ್ತಿಯುಂಟಾಗಿತ್ತು. ಈ ಎಲ್ಲಾ ದೌರ್ಬಲ್ಯಗಳಿಂದಾಗಿ ತನ್ನ ಶಕ್ತಿ ಕ್ರೋಢೀಕರಿಸುವಲ್ಲಿ ಮುನ್ನಡೆಯುವಲ್ಲಿ ತೆಲುಗು ದೇಶಂ ಪಕ್ಷ ವಿಫಲವಾಯಿತು.

ಸಿ.ಪಿ.ಐ.(ಎಂ) ಈ ಎಲ್ಲಾ ಅಸಂತೃಪ್ತಿಯ ಪರಿಹಾರಕ್ಕೆ ಹಲವಾರು ಪ್ರಚಾರ - ಆಂದೋಲನ ನಡೆಸಿದರೂ ತೆಲುಗುದೇಶಂ ಪಕ್ಷದ ಬಗ್ಗೆ ಮಿತ್ರತ್ವದ ನಿಲುವು ತಳೆಯಿತು. ಸೀಟು ಹೊಂದಾಣಿಕೆಯಲ್ಲಿ ಆ ಪಕ್ಷ ಅತಾರ್ಕಿಕ ನಿಲುವು ತಳೆದರೂ ರಾಜಕೀಯ ಗುರಿಯಿಂದಾಗಿ ನಮ್ಮ ಪಕ್ಷ ಅದನ್ನು ಸ್ವೀಕರಿಸಿತು.

ತೆಲುಗುದೇಶಂ ಪಕ್ಷ ತನ್ನ ವಿಫಲತೆಗಳಿಂದಾಗಿ ತನ್ನ ಕೆಳಹಂತದ ಕಾರ್ಯಕರ್ತರು ಮಿತ್ರ ಪಕ್ಷಗಳೊಡನೆ ಜತೆಗೂಡಿ ಕೆಲಸ ಮಾಡುವುದು ಹೇಗೆಂದು ಸಾಕಷ್ಟು ಶಿಕ್ಷಣ ನೀಡಲಿಲ್ಲ. ಇದರಿಂದಾಗಿ ಕೇಂದ್ರ ಸರಕಾರ ರಾಜ್ಯ ಸರ್ಕಾರದ ಕಾರ್ಯನಿರ್ವಹಣೆಯಲ್ಲಿ ತೀವ್ರ ಅಡಚಣೆ ಕಂಡಾಗಲೂ ಅದನ್ನು ಜನರ ಮುಂದಿಟ್ಟು ಈ ಪಕ್ಷಪಾತದ ವಿರುದ್ಧ ಜನರನ್ನು ಅಣಿನೆರೆಸಲು ಆ ಪಕ್ಷ ಮುಂದಾಗಲಿಲ್ಲ. ಸಿ.ಪಿ.ಐ. (ಎಂ) ಬಿಟ್ಟು ತೆಲುಗು ದೇಶಂನ ಇತರ ಎಲ್ಲಾ ಮಿತ್ರ ಪಕ್ಷಗಳೂ ಈ ಅವಧಿಯಾದ್ಯಂತ ತೆಲುಗುದೇಶಂ ಸರಕಾರದ ಬಗ್ಗೆ ಮಿತ್ರತ್ವದ ನಿಲುವು ತಳೆಯಲಿಲ್ಲ. ಕೆಲವು ಪಕ್ಷಗಳು ಸ್ವಲ್ಪಸಮಯದ ನಂತರ, ಸಿ.ಪಿ.ಐ. ಕೊನೆಯ ಗಳಿಗೆಯಲ್ಲಷ್ಟೆ ಇದನ್ನು ಬದಲಿಸಿತು. ಆದರೆ ಇದರಿಂದ ಆಗಲೇ ರಾಜಕೀಯ ಹಾನಿ ಸಂಭವಿಸಿಬಿಟ್ಟಿತು. ಕಾಂಗ್ರೆಸ್ (ಐ) ವಿರೋಧಿ ಮತಗಳನ್ನು ಪೂರ್ಣವಾಗಿ ಕ್ರೋಢೀಕರಿಸುವುದಾಗಲಿಲ್ಲ.

ರಾಜ್ಯದಲ್ಲಿ ಕಾಂಗೈನ ಆಳ್ವಿಕೆಯಿಂದ ಬಹಳಷ್ಟು ತೊಂದರೆಗಳು ಬರಲಿವೆ. ಹಿಂದೆ ತಾನು ಮಾಡದ್ದನ್ನು ಕಾಂಗ್ರೆಸ್ (ಐ) ಈಗ ಮಾಡುತ್ತದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಅದರಲ್ಲಿರುವ ಸಮಾಜ ವಿರೋಧಿ ಶಕ್ತಿಗಳು ಇದಕ್ಕೆ ಅವಕಾಶ ಕೊಡುವುದಿಲ್ಲ. ಕೇಂದ್ರದ ಚುನಾವಣಾ ಫಲಿತಾಂಶ ಇತರ ರಾಜ್ಯಗಳ ಕಾಂಗೈ ಸರಕಾರಗಳನ್ನು ತಟ್ಟಿರುವಾಗ ರಾಜ್ಯದಲ್ಲಿ ಅದು ಸ್ಥಿರ ಸರ್ಕಾರ ಕೊಡುತ್ತದೆಂಧು ನಿರೀಕ್ಷಿಸಲಾಗದು.

ಅದೇನೇ ಇರಲಿ. ರಾಜ್ಯದಲ್ಲಿ ಜಾತ್ಯತೀತ ಪ್ರಜಾಪ್ರಭುತ್ವವಾದಿ ಜನಸಮೂಹಗಳ ಹಿತಾಸಕ್ತಿಗಳ ರಕ್ಷಣೆಗೆ ಐಕ್ಯ ಹೋರಾಟ ನಡೆಸಿ ಜನರ ವಿಶ್ವಾಸಗಳಿಸುತ್ತವೆ ಎಂದು ಆಶಿಸುತ್ತೇವೆ. ಸಿ.ಪಿ.ಐ. (ಎಂ) ಧುಡಿಯುವ ಜನರ ಆಂದೋಲನಗಳನ್ನು ಕಟ್ಟಿ ಬೆಳೆಸುತ್ತದೆ. ಅವರ ಹಿತಾಸಕ್ತಿಗಳ ರಕ್ಷಣೆಗೆ ಹೋರಾಡುತ್ತದೆ ಎಂದು ಭರವಸೆ ನೀಡುತ್ತೇವೆ.



ಪೂರ್ವ ಜರ್ಮನಿಗೆ ಕುತ್ತು ತರುವ ಪ್ರಯತ್ನಗಳ ವಿರುದ್ಧ ಗೋರ್ಬಚೆವ್ ಎಚ್ಚರಿಕೆ.

ಪೂರ್ವ ಯುರೋಪಿನ ಸನ್ನಿವೇಶದ ಲಾಭ ಪಡೆಯುವ ಅತೀವ ಲಾಲಸೆ ಕೆಲವು ಪಾಶ್ಚಿಮಾತ್ಯ ದೇಶಗಳಲ್ಲಿ ಕಂಡು ಬರುತ್ತಿದೆ ಎಂದು ಪಶ್ಚಿಮ ಜರ್ಮನಿಯ ಚಾನ್ಸಲರ್ ಹೆಲ್ಮಟ್ ಕೋಲ್‌ರ ಜರ್ಮನ್ ಏಕೀಕರಣದ ಹತ್ತಂಶದ ಯೋಜನೆಯ ವಿರುದ್ಧ ಎಚ್ಚರಿಕೆ ನೀಡುತ್ತಾ ಸೋವಿಯತ್ ಅಧ್ಯಕ್ಷ ಗೋರ್ಬಚೆವ್ ಸೋವಿಯತ್ ಒಕ್ಕೂಟ ಯಾವುದೇ ಸಿವದಲ್ಲಿ ಜರ್ಮನಿ ಜನವಾದಿಗಳು ತಂತ್ರಕ್ಕೆ ಧಕ್ಕೆ ತರಲು ಅವಕಾಶ ನೀಡವುದಿಲ್ಲ ಎಂದಿದ್ದಾರೆ.

ಕೋಲ್ ಯೋಜನೆಯನ್ನು ತೀವ್ರವಾಗಿ ಟೀಕಿಸಿದ ಸೋವಿಯತ್ ವಿದೇಶಾಂಗ ಮಂತ್ರಿ ಗೆವರ್‌ನಾಡ್ಜೆಯವರು ಕೂಡಾ ಇದು ಜರ್ಮನ್ ಜನವಾದಿಗಣ ತಂತ್ರಕ್ಕೆ ಪಶ್ಚಿಮ ಜರ್ಮನಿ ಅಜ್ಞೆನೀಡಿದಂತಾಗಿದೆ, ಮೂಗಿ ತೂರಿದಂತಾಗಿದೆ ಎಂದಿದ್ದಾರೆ.

ಖ್ಮೇರ್ ಪ್ರತಿಪಕ್ಷೀಯರಿಗೆ ಅಮೆರಿಕನ್ ನೆರವು ಸೋವಿಯತ್ ಖಂಡನೆ

ಖ್ಮೇರ್ ವಿರೋಧಿ ಗುಂಪುಗಳಿಗೆ ಅಮೆರಿಕನ್ ಶಸ್ತ್ರಾಸ್ತ್ರ ಪೂರೈಕೆ ಕಂಪೂಚಿಯಾ ಸನ್ನಿವೇಶವನ್ನು ಅಸ್ಥಿರ ಗೊಳಿಸುವ ಇನ್ನೊಂದುಅಂಶ ಎಂದು ಸೋವಿಯತ್ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಪ್ರಸಾರ ನಿರ್ದೇಶನಾಲಯದ ಉಪ ಮುಖ್ಯಸ್ಥ ವಿ.ಪರ್ಫಿ ಲೈವ್ ಹೇಳಿದ್ದಾರೆ.

ಖ್ಮೇರ್ ವಿರೋಧಿಗಳ ಸೋನ್‌ಸಾನ್ ಗುಂಪಿಗೆ ಅಮೆರಿಕಾ ಕಂಪೂಚಿಯಾ ಪ್ರದೇಶದ ಪಶ್ಚಿಮ ಭಾಗದ ಉಪಗ್ರಹ ಚಿತ್ರಗಳನ್ನು ಒದಗಿಸುತ್ತಿದೆ; ಅತ್ಯಾಧುನಿಕ ಟ್ಯಾಂಕ್-ವಿರೋಧಿ ಶಸ್ತ್ರಾಸ್ತ್ರಗಳ ಬಳಕೆಯಲ್ಲಿ ಟ್ಯಾಂಕ್ ನಡೆಸುವಲ್ಲಿ ಅದರ ಸಶಸ್ತ್ರ ಘಟಕಗಳಿಗೆ ತರಬೇತಿ ನೀಡುತ್ತಿದೆ ಎಂಬುದರತ್ತ ಗಮನ ಸೆಳೆದಿರುವ ಪರ್ಫಿ ಲೈವ್ ಇದು ಕಂಪೂಚಿಯಾದ ಅಂತ ಯುದ್ಧವನ್ನು ಇನ್ನು ಹೆಚ್ಚಿಸುತ್ತದೆ ಎನ್ನುತ್ತಾ ಕಂಪೂಚಿಯಾದ ಎಲ್ಲಾ ಗುಂಪುಗಳಿಗೂ ಶಸ್ತ್ರಾಸ್ತ್ರ ಪೂರೈಕೆ ನಿಲ್ಲಿಸಬೇಕೆಂಬ ಬಗ್ಗೆ ಅಂತರ್ರಾಷ್ಟ್ರೀಯ ಒಪ್ಪಂದ ಅಗತ್ಯ ಎಂದಿದ್ದಾರೆ.

ಲ್ಯಾಟಿನ್ ಅಮೆರಿಕಾಕ್ಕೆ 'ಕಳಕೊಂಡ ದಶಕ'

ಎಂಭತ್ತರ ದಶಕ ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಕಳಕೊಂಡ ದಶಕ ಎಂದು ಅರ್ಥಿಕ ತಜ್ಞರು ನಾಮಕರಣ ಮಾಡಿದ್ದಾರೆ. ತಲಾ ರಾಷ್ಟ್ರೀಯ ಉತ್ಪನ್ನ ಮತ್ತೆ 6.5 ಶೇಕಡಾ ಇಳಿದಿದೆ. ನಿಜ ಆದಾಯ 1980 ರ ಆರಂಭದಲ್ಲಿ ಇದ್ದುದರ 10% ಕ್ಕಿಳಿದಿದೆ. ಅಭಿವೃದ್ಧಿ ಯೋಜನೆಗಳು ಆಂತರಿಕ ಅಥವಾ ವಿದೇಶೀ ಬಂಡವಾಳವಿಲ್ಲದೆ ಆಪತ್ತಿನಲ್ಲಿವೆ. ಬ್ಯಾಂಕುಗಳಿಂದ ಸಿಗುವ ಸಾಲ ಹಿಂದಿನ ಸಾಲದ ಬಡ್ಡಿಗೇ ಆಗುತ್ತದೆ. ಹಣದುಬ್ಬರ 470% ಐ.ಎಂ.ಎಫ್.ನ ಔಷಧಿಗಳು ಹಣದುಬ್ಬರವನ್ನು ತಡೆಯುವ ಬದಲು ಕಡಿಮೆ ಆದಾಯದ ಜನರ ಆದಾಯವನ್ನೇ ತಗ್ಗಿಸಿವೆ. ಸಾಲ ನಾಲ್ಕಡಿಯಾಗಿದೆ. ಬಂಡವಾಳ ವಿನಿಯೋಗ ಎಪ್ಪತ್ತರ ದಶಕಕ್ಕೆ ಹೋಲಿಸಿದರೆ ಅರ್ಧಕ್ಕಿಳಿದಿದೆ. ಇದಕ್ಕೆ ಮುಖ್ಯ ಕಾರಣ ಅಮೆರಿಕಾ ಮತ್ತು ಇತರ ಅಭಿವೃದ್ಧಿ ಹೊಂದಿದ ದೇಶಗಳ ನೀತಿ. ಕೃಷಿ ಉತ್ಪನ್ನಗಳಿಗೆ ಅವು ತಮ್ಮ ವಿಪರೀತ ಸಬ್ಸಿಡಿ ನೀಡಿ, ತಮ್ಮ ಉತ್ಪನ್ನಗಳಿಗೆ ರಕ್ಷಣೆ ನೀಡಿ ಈ ದೇಶಗಳ ವಿದೇಶ ವಿನಿಮಯವನ್ನು ಕಡಿತಗೊಳಿಸಿದವು. ಅತ್ತ ಅಮೆರಿಕಾದ ಹಣಕಾಸು ನೀತಿಯಿಂದಾಗಿ ಈ ದೇಶಗಳ ಸಾಲದ ಹೊರೆಯ ಮೌಲ್ಯ ಏರಿಸಿತು. ಬಂಡವಾಳ ಈ ದೇಶಗಳಿಂದ ಅಮೆರಿಕಾಕ್ಕೆ ಹರಿಯುವ ಅಸಂಬದ್ಧ ಸ್ಥಿತಿ ಕಲ್ಪಿಸಿತು. ಲ್ಯಾಟಿನ್ ಅಮೆರಿಕಾದ ದೇಶಗಳಿಗೆ ಎಂಭತ್ತರ ದಶಕ "ಕಳಕೊಂಡ ದಶಕ" ವಾದರೆ ತೊಂಭತ್ತರ ದಶಕ ತೂಗಾಡುವ ಕತ್ತಿಯಂತಿದೆ.

"ಚೀಣಾ ಸ್ವಾವಲಂಬನೆಯ ನೀತಿಯನ್ನೆಂದೂ ಬಲಿಗೊಡುವುದಿಲ್ಲ"

'ಪಾಶ್ಚಿಮಾತ್ಯ ದೇಶಗಳು ಹೇರಿದ ಅರ್ಥಿಕ ದಿಗ್ಬಂಧನಗಳು ಚೀಣಾಕ್ಕೆ ತೊಂದರೆಯುಂಟುಮಾಡಿವೆ, ನಿಜ. ಇದು ಅಭಿವೃದ್ಧಿಯ ದೇಶವನ್ನೂ ತಟ್ಟಬಹುದು. ಆದರೆ ನಮ್ಮ ವ್ಯವಸ್ಥೆಯನ್ನು ಬದಲಿಸಬೇಕೆಂಬ ಅವರ ಒತ್ತಾಯಕ್ಕೆ, ಮಣಿಯುವುದಿಲ್ಲ ನೀತಿಗಳನ್ನು ಮಾರಿಕೊಳ್ಳುವುದಿಲ್ಲ" ಎಂದು ಚೀಣೀ ಪ್ರಧಾನ ಮಂತ್ರಿ ಲಿಪಿಂಗ್ ಸ್ಪಷ್ಟಪಡಿಸಿದ್ದಾರೆ. ಏಕೆಂದರೆ ಚೀಣಾದ ಜನಸಂಖ್ಯೆ ಶತಕೋಟಿಗೂ ಹೆಚ್ಚು ಮತ್ತು ನಾವು ಸ್ವಾವಲಂಬನೆಯ ಮೇಲೆ ಹೆಚ್ಚು ಒತ್ತು ನೀಡುತ್ತೇವೆ".

ಲಿಪೆಂಗ್‌ರವರು ಇಸ್ಲಾಮಾಬಾದಿನಲ್ಲಿ ಒಂದು ಪತ್ರಿಕಾ ಸಮ್ಮೇಳನವನ್ನುದ್ದೇಶಿಸಿ ಮಾತನಾಡುತ್ತಿದ್ದರು. "ಚೀಣಾ ಎಂದೂ ಬಾಗಿಲು ಮುಚ್ಚಿಕೊಳ್ಳುವುದಿಲ್ಲ. ಅದೇ ರೀತಿ ಹೊರಗಿನಿಂದ ಮುಚ್ಚಲು ಕೂಡಾ ಯಾರಿಗೂ ಬಿಡುವುದಿಲ್ಲ. ಅರ್ಥಿಕ ದಿಗ್ಬಂಧನೆಗಳು ನಿಷ್ಪ್ರಯೋಜಕ ಅದನ್ನು ಹೇರಿದವರಿಗೇ ಅದರಿಂದ ತೊಂದರೆ" ಎಂದು ಹೇಳಿದ ಅವರು ಚೀಣಾದ ಸುಧಾರಣೆಗಳು, ತೆರೆದ ಬಾಗಿಲು ಅದರ ಸಮಾಜವಾದೀ ವ್ಯವಸ್ಥೆಯನ್ನು ಸುಧಾರಿಸುವುದಕ್ಕಾಗಿ ಅದನ್ನು ಅತ್ಯುತ್ತಮಗೊಳಿಸುವುದಕ್ಕಾಗಿ, ವಿಶ್ವದೆದುರು ಶಾಂತಿ, ಗೆಳೆತನ ಹಾಗೂ ಅನುಭವ ಕೇಳುವುದಕ್ಕಾಗಿ, ಈ ಮೂಲಕ ಆಧುನೀಕರಣದ ಪ್ರಕ್ರಿಯೆ ಬೆಳೆಸುವುದಕ್ಕಾಗಿ ಎಂದರು.

1972ರಿಂದ ಅಮೇರಿಕಾದೊಡನೆ ಸಂಬಂಧಗಳು ಮರುಸ್ಥಾಪನೆಗೊಂಡು ಸುಲಲಿತವಾಗಿ ಸಾಗಿದ್ದರು. ಅದು ಚೀಣಾದ ಮೇಲೆ ದಿಗ್ಬಂಧನ ಹೇರಿದ ಪಾಶ್ಚಿಮಾತ್ಯ ದೇಶಗಳ ಮುಖಂಡತ್ವದಲ್ಲಿದೆ. ವಾಸ್ತವವಾಗಿ ಇವು ಅರ್ಥಿಕ ದಿಗ್ಬಂಧನಗಳಲ್ಲ, ರಾಜಕೀಯ ದಿಗ್ಬಂಧನಗಳು. ಚೀಣಾ ಅಮೆರಿಕಾದೊಡನೆ ಸಂಬಂಧಗಳನ್ನು ಬೆಳೆಸಲು ಬಯಸುತ್ತದೆ. ಆದರೆ ತನ್ನ ನೀತಿಗಳನ್ನು ಬಲಿಗೊಟ್ಟು ಅಲ್ಲ. ಅದು ಸಹ ಅಸ್ತಿತ್ವದ ಐದು ಸೂತ್ರಗಳನ್ನು ಆಧರಿಸಿದ ಸ್ವತಂತ್ರ ವಿದೇಶಾಂಗ ಅನುಸರಿಸುತ್ತಾ ಬಂದಿದೆ ಎಂದು ಲಿಪಿಂಗ್ ತಿಳಿಸಿದರು.

ಈ ನಡುವೆ ನವೆಂಬರ್ 15ಹಾಗೂ 16 ರಂದು ಅಮೇರಿಕನ್ ಪ್ರತಿನಿಧಿ ಸಭೆ ಹಾಗೂ ಸೆನೆಟ್ ಚೀಣಾದ ಮೇಲೆ ದಿಗ್ಬಂಧನ ಕುರಿತಾದ ತಿದ್ದುಪಡಿ ಮಸೂದೆಯನ್ನು ಅಂಗೀಕರಿಸುವುದನ್ನು ಚೀಣಾ ಬಲವಾಗಿ ಖಂಡಿಸಿದೆ. ಇದು ಚೀಣಾದ ಅಂತರಿಕ ವ್ಯವಹಾರಗಳಲ್ಲಿ ಮೂಗು ತೂರುವ ಕೆಲಸ ಎಂದಿದೆ.

ಗ್ರೆನಡಾದಲ್ಲಿ ಮತ್ತೆ ಬಿಕ್ಕಟ್ಟು

ಅಮೆರಿಕನ್ ಪಡೆಗಳು ನುಸುಳಿ ಗ್ರೆನಡಾದ ಜನತಾ ಕ್ರಾಂತಿಕಾರಿ ಸರಕಾರವನ್ನು ಉರುಳಿಸಿ ಆರು ವರ್ಷಗಳಾಗಿವೆ. "ಅಮೆರಿಕದಲ್ಲಿ ತಯಾರಾದ ಪ್ರಜಾ ಪ್ರಭುತ್ವ" ಈ ದೇಶದಲ್ಲಿ ಈಗ ತೀವ್ರ ಬಿಕ್ಕಟ್ಟನ್ನು ಎದುರಿಸುತ್ತಿದೆ.

ತನ್ನ ಅತಿಕ್ರಮಣವನ್ನು ಮರೆಮಾಚಲು ಮಾರಿಸ್ ಬಿಷಪ್ ಸರಕಾರ ಉರುಳಿಸಿದ ಕೆಲವೇ ಸಮಯದೊಳಗೆ 'ಪ್ರಜಾಪ್ರಭುತ್ವ ಚುನಾವಣೆ' ನಡೆಸುವುದು ಅಮೆರಿಕಾಕ್ಕೆ ಅನಿವಾರ್ಯವಾಗಿತ್ತು. ಆದರೆ ಗ್ರೆನಡಾದಲ್ಲಿ ಬಿಷಪ್‌ರವರ ನೇತೃತ್ವದ ದೇಶಪ್ರೇಮಿ ಆಂದೋಲನ ಬಿಟ್ಟರೆ ಬೇರೆ ಬಲವಾದ ರಾಜಕೀಯ ಪಕ್ಷಗಳಿರಲಿಲ್ಲ. ಆದ್ದರಿಂದ ವಾಶಿಂಗ್‌ಟನ್‌ನ ಕೃಪಾ ಛತ್ರದಡಿಯೂ ಮೂರು ಸಣ್ಣ ಪಾರ್ಟಿಗಳನ್ನು ಸೇರಿಸಿ ನವ ರಾಷ್ಟ್ರೀಯ ಪಕ್ಷ ರಚಿಸಲಾಯಿತು. ಚುನಾವಣೆ ನಡೆಯಿತು. 15 ರಲ್ಲಿ 14 ಸ್ಥಾನ ಈ ಪಕ್ಷಕ್ಕೆ ದೊರೆಯಿತು. ಆದರೆ ಈ ಸರಕಾರ ಆರು ತಿಂಗಳೂ ಸರಿಯಾಗಿ ನಡೆಯಲಿಲ್ಲ. ಹಲವಾರು ಭ್ರಷ್ಟಾಚಾರದ ಆಪಾದನೆಗಳು, ಪಕ್ಷದ ವಿಭಜನೆ, ಪಕ್ಷಾಂತರ, ರಾಜೀನಾಮೆಯ [illegible]ಯೇ ಕಂಡು ಬಂತು. ಈಗ ಅಲ್ಲಿ ಸಂಸತ್ತನ್ನು ಅಲ್ಪ ಮತ ಸರಕಾರ ವಿಸರ್ಜಿಸಿದೆ ಈ ತಿಂಗಳಲ್ಲಿ ಚುನಾವಣೆಗಳು ನಡೆಯಲಿವೆ.

ಆದರೆ ಯಾವ ಪಕ್ಷವೂ ಬಹುಮತ ಪಡೆಯುವ ಸಂಭವವಿಲ್ಲ. ಅಲ್ಲದೆ ಈ ಯಾವ ಪಕ್ಷ ಬಿಕ್ಕಟ್ಟನ್ನು ಎದುರಿಸುವ ಒಂದು ಕಾರ್ಯಕ್ರಮವಿಲ್ಲ. ಗ್ರೆನಡಾದ್ದು ಈಗ ರಾಜಕೀಯ ಬಿಕ್ಕಟ್ಟು ಮಾತ್ರವಲ್ಲ ಅದು ಅರ್ಥಿಕ, ಸಾಮಾಜಿಕ ಬಿಕ್ಕಟ್ಟು ಕೂಡಾ. ಸಾಲ, ಬಜೆಟ್ ಖೋತಾ, ನಿರುದ್ಯೋಗ, ಸೂಳೆಗಾರಿಕೆ, ಮಾದಕ ಪದಾರ್ಥಗಳ ಚಟ, ಹಿಂಸಾಚಾರದಿಂದ ಗ್ರೆನಡಾ ತತ್ತರಿಸುತ್ತಿದೆ.

ಇದು 'ಅಮೆರಿಕಾದಲ್ಲಿ ತಯಾರಾದ ಪ್ರಜಾಪ್ರಭುತ್ವದ ಒಂದು ಮಾದರಿ.

ಈ ನಡುವೆ ಅಮೆರಿಕನ್ ಪಡೆಗಳು ಕೊಂದ ಮಾರಿಸ್ ಬಿಷಪ್‌ರವರ ದೇಶ ಪ್ರೇಮಿ ಆಂದೋಲನ ಡಾ॥ ಟೆರ್ರಿಮರಿ ಸೋವ್ ನೇತೃತ್ವದಲ್ಲಿ ಮತ್ತೆ ಚಿಗುರಲಾರಂಭಿಸಿದೆ.

ರಾಣಿ ಕುಂಜ್ ಅಪಘಾತ

ಕಾರ್ಮಿಕರ ಸುಭದ್ರತೆಯ ಬಗ್ಗೆ ನಿರ್ಲಕ್ಷದ ನಿಲುವು

ನವಂಬರ್ 13ರಂದು ರಾಣಿಗುಂಜ್‌ನಲ್ಲಿ ನಡೆದ ಕಲ್ಲಿದ್ದಲು ಗಣಿ ಅಫಘಾತ ಆಡಳಿತವರ್ಗದ ಮತ್ತು ಕೇಂದ್ರ ಸರಕಾರದ ದೀರ್ಘ ನಿರ್ಲಕ್ಷದ ಫಲ. ಈ ಕಲ್ಲಿದ್ದಲು ಗಣಿ ಕೇಂದ್ರ ಸರ್ಕಾರದ ಈಸ್ಟರ್ನ್ ಕೋಲ್ ಫೀಲ್ಡ್ ಲಿಮಿಟೆಡ್ (ಇ.ಐ.ಎಲ್)ನ ಆಡಳಿತ ಕ್ಕೊಳಪಟ್ಟದ್ದು ದಶಕಗಳ ನಿರ್ಲಕ್ಷ, ಕಾರ್ಮಿಕರ ಸುಭದ್ರತೆಯ ಬಗ್ಗೆ ಬೇಜ ವಾಬ್ದಾರಿತನ ಈ ಆಡಳಿತ ಮುಖ್ಯ ಅಂಶವೇ ಆಗಿಬಿಟ್ಟಿದೆ. ಸಿ.ಐ.ಟಿ.ಯು ಹಲವು ವರ್ಷಗಳಿಂದ ಈ ಬಗ್ಗೆ ಸತತವಾಗಿ ಆಡಳಿತ ವರ್ಗವನ್ನು, ಕೇಂದ್ರ ಸರಕಾರವನ್ನು ಎಚ್ಚರಿಸುತ್ತಾ ಬಂದಿದೆ. ಆಡಳಿತ ವರ್ಗ ಮತ್ತು ಕೇಂದ್ರ ಸರಕಾರದೊಡನೆ ಸಭೆಗಳಲ್ಲಿ ಈ ನಿರ್ಲಕ್ಷ್ಯದ ನಿದರ್ಶನಗಳನ್ನು, ಅವುಗಳ ಗಮನಕ್ಕೆ ತಂದಿದೆ. ಮಂತ್ರಿಗಳು ಭರವಸೆಗಳನ್ನು ನೀಡಿದ್ದಾರೆ. ಆದರೆ ಕಾರ್ಮಿಕರ ಸುಭದ್ರತೆಗೆ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ.

ರಾಣಿಗಂಜ್‌ನ ಇತ್ತೀಚಿನ ಅಫಘಾತದ ಇನ್ನೊಂದು ಕಾರಣ ಯಾವ ಯೋಜನೆಯೂ ಇಲ್ಲದೆ ಮನಬಂದಂತೆ ನಡೆಯುತ್ತಿರುವ ಕಲ್ಲಿದ್ದಲು ಅಗೆಯುವ ಕೆಲಸ. ಇದರಿಂದಾಗಿ ರಾಣಿಗಂಜ್ ಮತ್ತು ಸುತ್ತಲಿನ ಪ್ರದೇಶ ಕುಸಿದು ಬೀಳುವ ಅಪಾಯವುಂಟಾಗುತ್ತಿರುವುದರ ಬಗ್ಗೆ ಸಿ.ಪಿ.ಐ. (ಎಂ) ಕಳೆದ ಎರಡು ದಶಕಗಳಿಂದ ಎಚ್ಚರಿಸುತ್ತಾ ಬಂದಿದೆ. ಇತ್ತೀಚೆಗೆ ಪಾರ್ಲಿಮೆಂಟ್ ಬಜೆಟ್ ಅಧಿವೇಶನದಲ್ಲಿ ಸಿ.ಪಿ.ಐ. (ಎಂ) ಸದಸ್ಯ ಅನಿಲ್ ಬಸು ಈ ಪ್ರಶ್ನೆ ಎತ್ತಿದ್ದರು. ಇ.ಸಿ.ಎಲ್. ನ ಆಡಳಿತ ವರ್ಗ ಹಾಗೂ ಸರಕಾರದ ಬೇಜಾಬ್ದಾರಿತನ, ನಿರ್ಲಕ್ಷತನವನ್ನು ತೀವ್ರವಾಗಿ ಖಂಡಿಸಿರುವ ಸಿ.ಐ.ಟಿ.ಯು ಆಡಳಿತ ವರ್ಗಕ್ಕೆ ತೀವ್ರ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದೆ. ಪ್ರತಿಭಟನೆಯ ದನಿಯೆತ್ತಿ ಎಲ್ಲಾ ಸುಭದ್ರತಾ ಕ್ರಮ ಗಳನ್ನು, ನಿಯಮ ಗಳನ್ನು ಪಾಲಿಸುವಂತೆ ಒತ್ತಾಯಿಸ ಬೇಕೆಂದು ಎಲ್ಲಾ ಕಾರ್ಮಿಕ ಸಂಘಗಳಿಗೆ ಅದು ಕರೆ ನೀಡಿದೆ.

ಜಮ್ಮು - ಕಾಶ್ಮೀರ: ಪಿ.ಬಿ. ಎಚ್ಚರಿಕೆ

ನವೆಂಬರ್ 11ರಂದು ಜಮಾತ್ - ಎ- ಇಸ್ಲಾಮಿ ಅನುಯಾಯಿಗಳು ಕಾಶ್ಮೀರದ ಕುಲ್‌ಗಾಂವ್‌ನಲ್ಲಿ ಪಕ್ಷದ ಕಚೇರಿಯ ಮೇಲೆ ಆಕ್ರಮಣ ಮಾಡಿ ಪಕ್ಷದ ದಾಖಲೆಗಳನ್ನು ಪೀಠೋಪಕರಣಗಳನ್ನು ಚೆಲ್ಲಾಪಿಲ್ಲಿ ಮಾಡಿ ಸುಟ್ಟು ಹಾಕಿದರು ಇಡೀ ಕಟ್ಟಡವನ್ನೇ ಸುಟ್ಟು ಹಾಕುವ ಬೆದರಿಕೆಯನ್ನೂ ಹಾಕಿದರು. ಕಟ್ಟಡದ ಮಾಲೀಕ ಕಚೇರಿಯನ್ನು ಬೇರೆಡೆಗೆ ಸ್ಥಳಾಂತರಿಸುತ್ತೇನೆ ಎಂದು ವಾಗ್ದಾನ ನೀಡಿದ್ದರಿಂದಲಷ್ಟೇ ಹಾಗೆ ಮಾಡಲಿಲ್ಲ. [illegible] ಆ ದುರುಳರ ಮುಖ್ಯ ಉದ್ದೇಶವೂ ಅದೇ. ಇದೆಲ್ಲಾ ಪೋಲೀಸರ ಕಣ್ಣೆದುರಿನಲ್ಲೇ ನಡೆಯಿತು.

ಈ ಸಂಘಟನೆಯವರು ಪಕ್ಷದ ರಾಜ್ಯ ಕಾರ್ಯದರ್ಶಿ ಮಹಮ್ಮದ್ ಯೂಸುಫ್ ತಾರಿಗಾಮಿಯವರ ಮನೆಯ ಮೇಲೂ ದಾಳಿ ಮಾಡಲು ಯತ್ನಿಸಿದರು. ಈ ಭಯೋತ್ಪಾದಕ ಹಲ್ಲೆಗಳನ್ನು ನಿಲ್ಲಿಸಲು ಪರಿಣಾಮಕಾರಿ ಕ್ರಮ ಕೈಗೊಳ್ಳಬೇಕೆಂದು ಈ ಘಟನೆಗಳನ್ನು ತೀವ್ರವಾಗಿ ಖಂಡಿಸಿರುವ ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೋ ಫಾರೂಕ್ ಸರ್ಕಾರವನ್ನು ಒತ್ತಾಯಿ ಸಿದೆ. ಈ ಮೂಲಕ ಪ್ರಜಾ ಪ್ರಭುತ್ವ ಮತ್ತು ದೇಶದ ಐಕ್ಯತೆಗೆ ಬದ್ಧವಾಗಿರುವ ರಾಜಕೀಯ ಪಕ್ಷಗಳು ಮುಕ್ತವಾಗಿ ಕಾರ್ಯನಡೆಸಲು ಅನುವು ಮಾಡಿಕೊಡಬೇಕು ಎಂದು ಅದು ಹೇಳಿದೆ.

ರಾಜ್ಯದಲ್ಲಿ ದೇಶ ವಿರೋಧಿ ಶಕ್ತಿಗಳಲ್ಲಿ ಹೀಗೆ ತಮ್ಮ ಚಟುವಟಿಕೆಗಳನ್ನು ತೀವ್ರಗೊಳಿಸುವ ಧೈರ್ಯ ನೀಡಿರುವ ಸನ್ನಿವೇಶದತ್ತ ಪೊಲಿಟ್‌ಬ್ಯೂರೋ ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಗಮನ ಸೆಳೆದಿದೆ. ಇವುಗಳಲ್ಲಿ ಕೆಲವು ಅಮೆರಿಕನ್ ಸಾಮ್ರಾಜ್ಯಶಾಹೀ ಏಜೆಂಟ್‌ಗಳ ಬೆಂಬಲ ಪಡೆಯುತ್ತಿವೆ. ರಾಜೀವ್ ಸರ್ಕಾರ ಇದನ್ನು ತಡೆಯುವಲ್ಲಿ ವಿಫಲ ಗೊಂಡಿತ್ತು. ತನ್ನ ಸಮಯಸಾಧಕ ನೀತಿಗಳಿಂದ ಅವುಗಳ ಬೆಳವಣಿಗೆಗೆ ಆಸ್ಪದ ನೀಡಿತ್ತು. ಕೇಂದ್ರ ಸರ್ಕಾರ ತನ್ನ ನೀತಿ ಬದಲಿಸಿಕೊಳ್ಳದಿದ್ದರೆ, ಈ ದೇಶ- ವಿರೋಧಿ ಶಕ್ತಿಗಳ ಧೋರಣೆಗಳನ್ನು ಐಕ್ಯತೆಯಿಂದ ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳು ಎದುರಿಸದಿದ್ದರೆ ರಾಜ್ಯದ ಪ್ರಗತಿ ಪರ ಶಕ್ತಿಗಳಿಗಿಂತ ಇವುಗಳ ಕೈ ಮೇಲಾಗುವ ಬಗ್ಗೆ ಪೊಲಿಟ್ ಬ್ಯೂರೋ ದೇಶದ ಜನತೆಯನ್ನು ಎಚ್ಚರಿಸಿದೆ.

ರಾಜಸ್ತಾನ

ಕೋಟಾದಲ್ಲಿ ಕೋಮುವಾದದ ವಿರುದ್ಧ ಮಹಿಳೆಯರು

ಸೆಪ್ಟಂಬರ್ 14ರಂದು ತೀವ್ರ ಕೋಮುಗಲಭೆಗಳನ್ನು ಕಂಡ ಕೋಟಾದಲ್ಲಿ ಮಹಿಳೆಯರು ಕೋಮುವಾದದ ಸವಾಲನ್ನು ಎದುರಿಸಲು ನಿರ್ಧರಿಸಿದ್ದಾರೆ. ನವಂಬರ್ 4ರಂದು ಜನವಾದಿ ಮಹಿಳಾ ಸಮಿತಿಯ ಕೋಟಾ ಜಿಲ್ಲಾ ಘಟಕ ಕೋಮುವಾದದ ವಿರುದ್ಧ ಒಂದು ಯಶಸ್ವಿ ಮಹಿಳಾ ಸಮಾವೇಶ ನಡೆಸಿತು. ಜಿಲ್ಲೆಯ ವಿವಿಧ ತಹಸಿಲುಗಳಿಂದ 106ಮಹಿಳಾ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಎ.ಐ.ಡಿ.ಡಬ್ಲ್ಯು.ಎ. ಉಪಾಧ್ಯಕ್ಷೆ ವಿಮಲ್ ರಣದಿವೆ ಸಮಾವೇಶವನ್ನುದ್ದೇಶಿಸಿ ಮಾತನಾಡುತ್ತಾ ಕೋಮುವಾದ ದೇಶಕ್ಕೊಂದು ಕಳಂಕ. ಅದನ್ನು ನಿವಾರಿಸಲು ಕೈಲಾದ್ದನ್ನೆಲ್ಲಾ ಮಾಡಬೇಕು ಎಂದರು. ದೇಶದಲ್ಲಿ ಕೋಮುಗಲಭೆ ಸೃಷ್ಟಿಸುವ ಕಾಂಗ್ರೆ ಬಿ.ಜೆ.ಪಿ. ಪಿತೂರಿಗಳನ್ನು ಬುಡಮೇಲು ಮಾಡಲು ಶಾಂತಿ ಪ್ರಿಯ ಜನರೆಲ್ಲಾ ಒಂದಾಗಬೇಕೆಂದು ಅವರು ಕರೆ ನೀಡಿದರು.

ಕೋಟಾದ ಗಲಭೆಗಳಿಗೆ ಆಳುವ ಕಾಂಗ್ರೆ ಕೋಮು ಸಂಘಟನೆಗಳೊಂದಿಗೆ ಶಾಮೀಲಾದದ್ದೇ ಕಾರಣ ಎಂದಿರುವ ಸಮಾವೇಶದ ನಿರ್ಣಯ ಗಲಭೆ ಪೀಡಿತರಿಗೆ ಸಾಕಷ್ಟು ನೆರವು ನೀಡಲು, ಅಪರಾಧಿಗಳ ಕೋಮುವಾದಿಗಳು ಆಡಳಿತ ಮತ್ತು ಪೋಲೀಸ್ ಸಿಬ್ಬಂದಿಗೆ ತೀವ್ರ ಶಿಕ್ಷೆ ವಿಧಿಸಲು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದೆ. ಪೋಲೀಸರು ಆಕ್ರಮಿಸಿಕೊಂಡಿರುವ ಮುಸ್ಲಿಂ ಮುಸಾಫಿರ್ ಖಾನಾವನ್ನು ತಕ್ಷಣ ತೆರವು ಮಾಡಿ ಮುಸ್ಲಿಂ ಸಮುದಾಯಕ್ಕೆ ಒಪ್ಪಿಸಬೇಕೆಂದು ಸಮಾವೇಶ ಒತ್ತಾಯಿಸಿದೆ.

ಸಮಾವೇಶದ ಮೊದಲು ಹತ್ತು ಸದಸ್ಯರಿದ್ದ ಮಹಿಳಾ ಪ್ರತಿನಿಧಿ ಮಂಡಳಿ ಗಲಭೆ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿತು.

ಉತ್ತರಪ್ರದೇಶ

ಲಕ್ನೌನಲ್ಲಿ ಲೇಖಕರ ಧರಣಿ

ನವಂಬರ್ 7ರಂದು ಲಕ್ನೌನಲ್ಲಿ ಜನವಾದಿ ಲೇಖಕ ಸಂಘದ ಉತ್ತರ ಪ್ರದೇಶ ಘಟಕದ ಕರೆಯ ಮೇರೆಗೆ ನೂರಾರು ಹಿಂದಿ ಹಾಗೂ ಉರ್ದು ಲೇಖಕರು ರಾಜ್ಯದ ಸಚಿವಾಲಯದ ಎದುರು ಧರಣಿ ನಡೆಸಿ ಮುಖ್ಯ ಮಂತ್ರಿ ತಿವಾರಿಯವರಿಗೆ ಒಂದು ಮನವಿ ಪತ್ರ ಸಲ್ಲಿಸಿದರು. ಅವರು ಬಾಬ್ರಿಮಸೀದಿ-ರಾಮಜನ್ಮಭೂಮಿ ವಿವಾದದಲ್ಲಿ ಕೋಮು ಭಾವೋದ್ರೇಕ ಎಬ್ಬಿಸುವ ಪ್ರಯತ್ನಗಳ ವಿರುದ್ಧ ಪ್ರತಿಭಟಿಸುತ್ತಿದ್ದರು.

ಈ ಧರಣಿಯಲ್ಲಿ ಅಂಗೀಕರಿಸಿದ ನಿರ್ಣಯವೊಂದು ದೇಶಾದ್ಯಂತ ಲೇಖಕರು ಮತ್ತು ಸಾಂಸ್ಕೃತಿಕ ಕಾರ್ಯಕರ್ತರು ಕೋಮು ದ್ವೇಷ ಹರಡುವ ಸಂಘಟಿತ ಪ್ರಚಾರದ ಅಪಾಯವನ್ನು ಅರಿಯಬೇಕೆಂದು ಮನವಿ ಮಾಡಿದೆ.

ಮುಖ್ಯ ಮಂತ್ರಿಗಳಿಗೆ ಸಲ್ಲಿಸಿದ ಮನವಿ ಟಿ.ವಿ.ರೇಡಿಯೋಗಳಲ್ಲಿ, ಕೋಮುವಾದಿ ಕಾರ್ಯಕ್ರಮಗಳು, ಹಾಗೂ ಮತೀಯ ಆಚರಣೆಗಳ ಪ್ರಸಾರದ ಮೇಲೆ ನಿಷೇಧ ಹಾಕಬೇಕೆಂದು, ಜನತಾ [illegible] ಕಾನೂನಿನ ಪ್ರಕಾರ [illegible] ಪ್ರಚಾರದಲ್ಲಿ ಕೋಮುವಾದೀ [illegible] ಮೇಲೆ ನಿಷೇಧ ಹಾಕಬೇಕೆಂದು ಒತ್ತಾಯಿಸಿದೆ.

ಉರ್ದುವಿಗೆ [illegible] ದಲ್ಲಿ ಸಮಯಸಾಧಕ [illegible] ಎರಡನೇ ಸ್ಥಾನ ನೀಡಿರುವ [illegible] ಉರ್ದು ವಿರೋಧಿ [illegible] ನೀತಿ [illegible] [illegible]

ಹೊಸ ಪ್ರಭಾವವನ್ನು ಕ್ರೋಢೀಕರಿಸಲು

ಕೇಂದ್ರಸಮಿತಿ ಕರೆ

ಪುಟ 1 ರಿಂದ

ಕೇಂದ್ರ ಸಮಿತಿ ಅದೇ ವೇಳೆಗೆ ಬಿ.ಜೆ.ಪಿ. ಕೋಮುವಾದೀ ಪ್ರಶ್ನೆಗಳಿಗೆ ಒತ್ತು ಹಾಕಿದರೂ ಮಧ್ಯಪ್ರದೇಶ ಮತ್ತು ಕೆಲವು ರಾಜ್ಯಗಳಲ್ಲಿ ಅದರ ಗೆಲುವಿಗೆ ಜನ ಸಮೂಹಗಳಲ್ಲಿದ್ದ ಅಗಾಧ ಕಾಂಗ್ರೆಸ್ (ಐ) ವಿರೋಧಿ ಅಸಂತೃಪ್ತಿ ಕಾರಣ ಎಂದು ಅಭಿಪ್ರಾಯಪಟ್ಟಿದೆ.

ಪಶ್ಚಿಮಬಂಗಾಳದಲ್ಲಿ ನಿರ್ಣಾಯಕ ವಿಜಯ:

ಪಶ್ಚಿಮ ಬಂಗಾಳದ ಮತದಾರರು ಸಿ.ಪಿ.ಐ. (ಎಂ) ಮುಖಂಡರು, ಕಾರ್ಯಕರ್ತರು ಮತ್ತು ಎಲ್ಲಾ ಎಡ ಕಾರ್ಯಕರ್ತರನ್ನು ಅವರ ನಿರ್ಣಾಯಕ ವಿಜಯಕ್ಕಾಗಿ ಕೇಂದ್ರ ಸಮಿತಿ ಅಭಿನಂದಿಸಿದೆ. ಪಶ್ಚಿಮ ಬಂಗಾಳದ ವ್ಯಾಪಕ ವಿಜಯ ಮತ್ತು ಇತರ ರಾಜ್ಯಗಳಲ್ಲಿ ಸಿ.ಪಿ.ಐ.(ಎಂ) ಮತ್ತು ಸಿ.ಪಿ.ಐ. ಹಲವು ಸ್ಥಾನ ಗೆದ್ದಿರುವುದರಿಂದಾಗಿ ಸಂಸತ್ತಿನಲ್ಲಿ ಎಡ ಪಕ್ಷಗಳ ಸಂಖ್ಯಾ ಬಲ ಹೆಚ್ಚಿರುವುದು ಸಂಸತ್ತಿನಲ್ಲಿ ಮತ್ತು ದೇಶದ ಧೋರಣೆಗಳಲ್ಲಿ ಎಡ ಪಕ್ಷಗಳು ಇನ್ನಷ್ಟು ಪರಿಣಾಮಕಾರಿ ಪಾತ್ರ ವಹಿಸಲು ಅನುವು ಮಾಡಿ ಕೊಟ್ಟಿದೆ.

ಕೇರಳ :

ಕೇರಳದ ಅನಿರೀಕ್ಷಿತ ಫಲಿತಾಂಶಕ್ಕೆ ಕಾರಣ ಎಲ್.ಡಿ.ಎಫ್.ನ ವಿರುದ್ಧ ಕೋಮುವಾದಿ, ಜಾತಿವಾದಿ ಶಕ್ತಿಗಳ ಬಲವಾದ ಕ್ರೋಢೀಕರಣ ಎಂದು ಕೇಂದ್ರ ಸಮಿತಿ ಗಮನಿಸಿತು. 1987ರಲ್ಲಿ ಎಲ್.ಡಿ.ಎಫ್. ಮತ್ತು ಯು.ಡಿ.ಎಫ್ ನಡುವಿನ ಅಂತರ ತುಂಬಾ ಕಮ್ಮಿಯಾಗಿತ್ತು. ಸುಮಾರು ಶೇ. 10ರಷ್ಟು ಮತಗಳು ಅಂದು ಈ ಎರಡು ಕೂಟಗಳಿಗೆ ಸೇರದ ಇತರ ಪಕ್ಷಗಳಿಗೆ, ಗುಂಪುಗಳಿಗೆ ಹೋಗಿದ್ದವು. ಈ ಬಾರಿ ಇದರ ಒಂದು ದೊಡ್ಡ ಭಾಗ ಮತಗಳನ್ನು ಕೋಮು ಶಕ್ತಿಗಳು ಯು.ಡಿ.ಎಫ್.ಗಾಗಿ ಸಂಘಟಿಸಿ, ಕ್ರೋಢೀಕರಿಸಿದವು. ಇದರಲ್ಲಿ ಬಿ.ಜೆ.ಪಿ.ಯು

> ಕಾಂಗ್ರೆಸ್ (ಐ) ನ ಸೋಲು ಭಾರತದ ಜನತೆಯ ಪ್ರಜಾಪ್ರಭುತ್ವ, ಜಾತ್ಯತೀತ ದೃಷ್ಟಿಕೋನಕ್ಕೊಂದು ಕಾಣಿಕೆ ಎಡಪಕ್ಷಗಳು ಶ್ರಮಿಸಿದ ದೃಷ್ಟಿಕೋನದ ಈ ಗೆಲುವು ದೇಶದ ಮತದಾರರ ಒಂದು ಮಹತ್ವದ ಸಾಧನೆ.

ಒಂದು ವಿಭಾಗದ ಮತಗಳೂ ಇವೆ. ಇದರ ಫಲವಾಗಿ ಯು.ಡಿ.ಎಫ್. ಮತಗಳು 1987ರ 44.36ಶೇಕಡಾದಿಂದ 49.5ಶೇಕಡಕ್ಕೇರಿತು. ಅಲ್ಲದೆ ಕಾಂಗ್ರೆಸ್ ವಿರುದ್ಧ ಮತ ನೀಡುವುದೆಂದರೆ ಕೇಂದ್ರದಲ್ಲಿ ಬಿ.ಜೆ.ಪಿ ಯಿರುವ ಸರ್ಕಾರಕ್ಕೆ ಮತ ನೀಡಿದಂತೆ ಎಂದು ಅಲ್ಪಸಂಖ್ಯಾತರ ನಡುವೆ ಭಯ ಹರಡಿಸಲಾಯಿತು. ಕೇರಳದ ಸನ್ನಿವೇಶ ಎಲ್.ಡಿ.ಎಫ್.ಗೆ ಬದ್ಧರಾದ ಜನಸಮೂಹಗಳ ಆಚೆಗೂ ಸಾಗಿ ವಿವಿಧ ಜನವಿಭಾಗಗಳ ಮನಸ್ಸು ಗೆಲ್ಲುವ, ಕೋಮು-ಜಾತಿ ಕೂಟಗಳ ಬೇಲಿಗಳನ್ನು ಮುರಿಯಬೇಕಾದುದರ ತುರ್ತು ಅವಶ್ಯಕತೆಯನ್ನು ತೋರಿಸಿಕೊಡುತ್ತಿದೆ.

ಅಲ್ಪಸಂಖ್ಯಾತರು ಹಾಗೂ ಪರಿಶಿಷ್ಟ ಜಾತಿ ಮತಗಳ ಪಲ್ಲಟ

ವಿರೋಧ ಪಕ್ಷಗಳ ಯಶಸ್ಸಿನ ಮುಖ್ಯವಾಗಿ, ಉತ್ತರ ಪ್ರದೇಶ, ಬಿಹಾರನಲ್ಲಿ ವಿಜಯದ ಒಂದು ಗಮನಾರ್ಹ ಅಂಶವೆಂದರೆ ಅಲ್ಪಸಂಖ್ಯಾತ ಕೋಮು ಕಾಂಗ್ರೆಸ್ (ಐ) ನಿಂದ ದೂರ ಸಾಗಿರುವುದು. ಇದುವರೆಗೂ ಅಲ್ಪಸಂಖ್ಯಾತರ ಸಾಮೂಹಿಕ ಹತ್ಯೆಗಳ ಹಲವು ಉದಾಹರಣೆಗಳಿದ್ದರೂ ಕಾಂಗ್ರೆಸ್ (ಐ) ನ ಸ್ಥಿರ ಬೆಂಬಲಿಗರಾಗಿದ್ದ ಅಲ್ಪಸಂಖ್ಯತ ಕೋಮು ಬಾಬ್ರಿ ಮಸೀದೆ ರಾಮ ಜನ್ಮಭೂಮಿ ವಿವಾದದಲ್ಲಿ ಕಾಂಗ್ರೆಸ್ (ಐ) ನ ಸಮಯಸಾಧಕ, ವಂಚಕ ನಿಲುವು, ನ್ಯಾಯಾಲಯದ ತೀರ್ಪಿಗೆ ಬದ್ಧವಾಗಿರಲು ನಿರಾಕರಣೆ ಹಾಗೂ ಶಿಲಾನ್ಯಾಸದ ಸಮಾರಂಭಕ್ಕೆ ಅದರ ನೀತಿ ಬಾಹಿರ ಬೆಂಬಲದಿಂದಾಗಿ ದೂರ ಸರಿಯುವಂತಾಯಿತು. ಈ ದೂರ ಸರಿಕೆ ಪ್ರಜಾಪ್ರಭುತ್ವ ಪ್ರಶ್ನೆಗಳ ಮೇಲೆ ಇನ್ನೂ ಮುಂದುವರಿಯುತ್ತಾ ಹೋಗುವುದಾದರೆ ಅದು ಪ್ರಜಾಪ್ರಭುತ್ವ ಆಂದೋಲನವನ್ನು ಬಲಗೊಳಿಸುವಲ್ಲಿ ಅಪಾರ ಕಾಣಿಕೆ ನೀಡಬಲ್ಲದು. ರಾಷ್ಟ್ರೀಯ ಐಕ್ಯತೆಯನ್ನು ರಕ್ಷಿಸುವ ಜವಾಬ್ದಾರಿ ನಿರ್ವಹಿಸಲು ಅನುಕೂಲ ಮಾಡಬಲ್ಲದು ಎಂದು ಕೇಂದ್ರ ಸಮಿತಿ ಹೇಳಿದೆ.

ಕಾಂಗ್ರೆಸ್ (ಐ) ಸೋಲಿಗೆ ಕಾರಣವಾದ ಇನ್ನೊಂದು ಹರಿಜನ-ಗಿರಿಜನ ಸಮೂಹಗಳು ಆಳುವ ಪಕ್ಷದಿಂದ ಹೆಚ್ಚೆಚ್ಚು ದೂರ ಸರಿದದ್ದು. ಉತ್ತರ ಪ್ರದೇಶ ಮತ್ತು ಕೆಲವು ರಾಜ್ಯಗಳಲ್ಲಿ ಬಿ.ಎಸ್.ಪಿ. ಒಂದು ಪ್ರತ್ಯೇಕ ಶಕ್ತಿಯಾಗಿ ಮೂಡಿಬಂದದ್ದು ಕಾಂಗ್ರೆಸ್ (ಐ) ನ ಪರಂಪರಾಗತ ಮತಗಳನ್ನು ಪಡೆದು ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ನ ತೀವ್ರಪರಾಭವಕ್ಕೆ ನೆರವಾಗಿದೆ. ಈ ಶಕ್ತಿಯ ಲಕ್ಷಗಟ್ಟಲೆ ಮತದಾರರು ಕಾಂಗ್ರೆಸ್ (ಐ) ನಿಂದ ಪ್ರತ್ಯೇಕ ಗೊಂಡಿರುವುದು ಉದ್ಯೋಗ ಮೀಸಲಾತಿ ಒಂದರಿಂದಲೇ ಈ ವಿಭಾಗಗಳನ್ನು ಕಾಂಗ್ರೆಸ್ (ಐ) ನ ಸೆರಗಿಗೆ ಕಟ್ಟಿಡಲು ಸಾಧ್ಯವಿಲ್ಲ ಎಂಬುದಕ್ಕೆ ಉಜ್ವಲ ಪುರಾವೆ ಎಂದಿರುವ ಕೇಂದ್ರ ಸಮಿತಿ ಈ ಬೆಳವಣಿಗೆಗಳು ಈ ಶೋಷಿತ ಕೃಷಿ ಜನ ಸಮೂಹಗಳನ್ನು ಸರ್ವರ ಪ್ರಜಾಪ್ರಭುತ್ವ ಆಂದೋಲನ, ವರ್ಗ ಆಂದೋಲನದೊಳಗೆ ತರುವುದಕ್ಕೆ ದಾರಿ ತೆರೆದು ಕೊಟ್ಟಿದೆ ಎಂದು ಅಭಿಪ್ರಾಯ ಪಟ್ಟಿದೆ.

ಪಂಜಾಬ್ ಮತ್ತು ಜಮ್ಮು ಕಾಶ್ಮೀರ:

ಪಂಜಾಬ್ ಮತ್ತು ಜಮ್ಮು ಕಾಶ್ಮೀರದ ಚುನಾವಣಾ ಫಲಿತಾಂಶಗಳನ್ನು ಕೇಂದ್ರ ಸಮಿತಿ ತೀವ್ರ ಆತಂಕದಿಂದ ಗಮನಿಸಿತು. ಜಮ್ಮು-ಕಾಶ್ಮೀರದಲ್ಲಿ ಚುನಾವಣೆಯೇ ನಡೆದಿಲ್ಲವೆನ್ನಬಹುದು. ದೇಶವಿರೋಧಿ ಪ್ರತ್ಯೇಕತಾ ವಾದಿಗಳ ಭಯೋತ್ಪಾದಕತೆ ಅಷ್ಟೊಂದು ವ್ಯಾಪಕವಾಗಿತ್ತು. ಅಧಿಕೃತವಾಗಿ ಕೂಡಾ ಕಾಶ್ಮೀರ ಕಣಿವೆಯಲ್ಲಿ 5ಶೇಕಡಾದಂತೆ ಹೆಚ್ಚು ಮತದಾನವಾಗಿದೆ ಎಂದು ಹೇಳಿಕೊಂಡಿಲ್ಲ. ಆದರೆ ಇದೂ ಕೂಡಾ ಉತ್ಪ್ರೇಕ್ಷೆಯೇ. ಖಾಲಿ ಮತಗಟ್ಟೆಗಳು, ಪೋಲಿಂಗ್ 'ಏಜೆಂಟರ ಗೈರು ಹಾಜರಿ, ಮತದಾರರ ಗೈರು ಹಾಜರಿ. ಕಾಶ್ಮೀರ ಕಣಿವೆಯಲ್ಲಿ ಕಂಡು ಬಂದ ಚುನಾವಣಾ ದೃಶ್ಯ.

ಪಂಜಾಬಿನಲ್ಲಿ 13ರಲ್ಲಿ 10ಸ್ಥಾನಗಳನ್ನು ಉಗ್ರಗಾಮಿಗಳೊಂದಿಗೆ ಸಂಪರ್ಕವಿರುವ ಅಕಾಲಿ ದಳದ ಒಂದು ವಿಭಾಗದ ಬೆಂಬಲ ಪಡೆದ ಅಭ್ಯರ್ಥಿಗಳು ಪಡೆದಿದ್ದಾರೆ. ಅಲ್ಲಿ ಚುನಾವಣಾ ಫಲಿತಾಂಶಗಳ ಮೇಲೆ ಭಯೋತ್ಪಾದನೆಯ ಒಂದು ಸಾರ್ವತ್ರಿಕ ವಾತಾವರಣದ ಪ್ರಾಬಲ್ಯ ಕಾಣುತ್ತಿದೆ. ಅದೇ ರೀತಿ ಬಹುಪಾಲು ಜನವಿಭಾಗಗಳೆಲ್ಲಾ ಕಾಂಗ್ರೆಸ್ (ಐ) ನಿಂದ ಸಂಪೂರ್ಣವಾಗಿ ದೂರ ಸರಿದಿರುವ ಅಂಶವೂ ಕಂಡು ಬರುತ್ತಿದೆ.

ದಕ್ಷಿಣದಲ್ಲಿ ಸೋಲು :

ದಕ್ಷಿಣ ರಾಜ್ಯಗಳಲ್ಲಿ ಕಾಂಗ್ರೆಸ್ (ಐ) ನ ವ್ಯಾಪಕ ವಿಜಯವಿಲ್ಲದಿದ್ದರೆ ಪ್ರಜಾಪ್ರಭುತ್ವ ಶಕ್ತಿಗಳ ವಿಜಯ ಸಂಪೂರ್ಣವಾಗಿರುತ್ತಿತ್ತು. ನಿರ್ಣಾಯಕವಾಗಿರುತ್ತಿತ್ತು. ತಮಿಳುನಾಡಿನಲ್ಲಿ ಎ.ಐ.ಎ.ಡಿ.ಎಂ.ಕೆ. ಜತೆಗೆ ಮಿತ್ರತ್ವದಿಂದಾಗಿ ಫಲಿತಾಂಶ ಈ ಕೂಟದ ಪರವಾಗಿ ಹೋಗುತ್ತದೆಂಬುದು ಸ್ಪಷ್ಟವಿತ್ತು. ಕಾರಣ ಈ ಕೂಟದ ಚುನಾವಣಾ ಬಲ. ರಾಮ ಜನ್ಮ ಭೂಮಿ ವಿವಾದ ಇಲ್ಲಿ ಅಪ್ರಸ್ತುತವಾಗಿತ್ತು. ಅಲ್ಲದೆ ರಾಜ್ಯದ ಮತದಾರಲ್ಲಿ ಬಹುಪಾಲು ಇರುವ ಎ.ಐ.ಡಿ.ಎಂ.ಕೆ. ಜನಸಮೂಹದ ಮನಸ್ಸಿನಲ್ಲಿ ವಿಧಾನ ಸಭಾ ಚುನಾವಣೆಗಳ ಸೋಲಿಗೆ ಸೇಡು ತೀರಿಸಿಕೊಳ್ಳುವ ತೀವ್ರ ಆಕಾಂಕ್ಷೆಯಿತ್ತು. ಹೀಗಿದ್ದಾಗ್ಯೂ ಇಷ್ಟೊಂದು ಸಂಪೂರ್ಣ ಸೋಲು ಅನಿರೀಕ್ಷಿತ. ಕಳೆದ ಕೆಲವು ತಿಂಗಳ ಡಿ.ಎಂ.ಕೆ. ಆಳ್ವಿಕೆಯಿಂದ ಜನ ಸ್ವಲ್ಪ ಮಟ್ಟಿಗೆ ದೂರ ಸರಿಯುತ್ತಿರುವುದೂ ಇದಕ್ಕೆ ಕಾರಣವಾಗಿರಬಹುದು. ದಮನಕಾರಿ ಆರ್ಥಿಕ ಸ್ಥಿತಿ ಹಾಗೂ ಭಾರತೀಯ ಮತದಾರನ ಅತ್ಯಂತ ಸೂಕ್ಷ್ಮತೆ ಈ ಅಂಶಗಳನ್ನು ಹೊಸದಾಗಿ ಮಂತ್ರಿ ಪದವಿಗಳನ್ನು ಪಡೆಯುವ ಪಕ್ಷ ಸಾಮಾನ್ಯವಾಗಿ

> ಬಹುಶಃ ಬಹಳ ವರ್ಷಗಳ ನಂತರ ಮೊದಲ ಬಾರಿಗೆ ಅಲ್ಪ ಸಂಖ್ಯಾತರಿಗೆ ಸುಭದ್ರತೆ ಮಾತ್ರವಲ್ಲ, ಸಮಾನ ಪಾಲುದಾರಿಕೆಯ ಸ್ಥಾನಮಾನದ ಭರವಸೆ ನೀಡಲಾಗುತ್ತಿದೆ.

ನಿರ್ಲಕ್ಷಿಸುತ್ತದೆ ಎಂದು ಕೇಂದ್ರ ಸಮಿತಿ ಹೇಳಿ ಅಭಿಪ್ರಾಯಪಟ್ಟಿದೆ.

ಆಂಧ್ರ ಪ್ರದೇಶ, ಕರ್ನಾಟಕದಲ್ಲಿ ರಾಷ್ಟ್ರೀಯ ರಂಗದ ಎರಡು ದೊಡ್ಡ ಹಾಗೂ ಮಹತ್ವದ ಅಂಗ ಸಂಸದೀಯ ಮತ್ತು ವಿಧಾನ ಸಭಾ ಚುನಾವಣೆ ಎರಡರಲ್ಲೂ ಸೋತಿವೆ ಎಂದು ಕೇಂದ್ರ ಸಮಿತಿ ಗಮನಿಸಿತು. ಪಕ್ಷದೊಳಗೆ ಭಿನ್ನಮತೀಯತೆ, ಮುಖಂಡರ ಮನಸ್ವೇಚ್ಛೆಯ ಅಪ್ರಜಾಸತ್ತಾತ್ಮಕ ನಡವಳಿಕೆ, ತುರ್ತು ಸಮಸ್ಯೆಗಳ ಬಗ್ಗೆ ನಿರ್ಲಕ್ಷ್ಯದಿಂದಾಗಿ ಕಾಂಗ್ರೆಸ್ (ಐ) ಗೆ ಜೀವದಾನದೊರೆತಂತೆ ಕಾಣುತ್ತಿದೆ. ಉತ್ತರದಲ್ಲಿ ಕಾಂಗ್ರೆಸ್ (ಐ) ಪೂರ್ಣ ಪರಾಭವ ಅನುಭವಿಸಿರುವಾಗ ಈ ಜೀವದಾನ ದೊರೆತಿವೆ ಎಂದೂ ಕೇಂದ್ರ ಸಮಿತಿ ಗಮನಿಸಿತು. ಕಾಂಗ್ರೆಸ್ (ಐ) ನ ದೇಶ ವಿರೋಧಿ ಧೋರಣೆಗಳಿಂದಾಗಿ ದೇಶದ ಆರ್ಥಿಕತೆಯ ಆತಂಕಕಾರಿ ಪರಿಸ್ಥಿತಿ ಹೇರಿದ ಸಂಕಷ್ಟಗಳ ಸನ್ನಿವೇಶದಲ್ಲಿ ಈ ಎರಡು ಸರಕಾರಗಳು ಕಾರ್ಯ ನಿರ್ವಹಿಸಬೇಕಾಗಿತ್ತು. ಆದರೆ ಪಶ್ಚಿಮ ಬಂಗಾಳದಲ್ಲಿನಂತೆ ಸತತವಾಗಿ ಜನ ಸಮೂಹಗಳ ವಿಶ್ವಾಸವನ್ನು ಬಲಗೊಳಿಸುವ ಅಗತ್ಯವನ್ನು ಪರಿಸ್ಥಿತಿಯ ತುರ್ತು ಅಗತ್ಯವನ್ನು ಇಲ್ಲಿ ಮನಗಾಣಲಿಲ್ಲ.

ಈ ಕೆಲವು ಸೋಲುಗಳಿದ್ದಾಗ್ಯೂ ರಾಷ್ಟ್ರೀಯ ರಂಗದ ಸರ್ಕಾರದ ಸ್ಥಾಪನೆ ಒಂದುದೊಡ್ಡ ವಿಜಯ ಎಂದು ಜನ ಸಾಮಾನ್ಯರು ಪರಿಗಣಿಸುತ್ತಾರೆ. ಹಿಂದಿನ ವಿರೋಧಿ ಪಕ್ಷಗಳಲ್ಲಿ ಅವರು ವ್ಯಕ್ತಪಡಿಸಿದ, ಇರಿಸಿರುವ ಒಂದು ವಿಶ್ವಾಸ. ಈ ಸರ್ಕಾರದ ಕಾರ್ಯನಿರ್ವಹಣೆ ಮತ್ತು ಧೋರಣೆಗಳ ಆಧಾರದ ಮೇಲೆ ಹೆಚ್ಚೆಚ್ಚು ಜನವಿಭಾಗಗಳು ಸರ್ಕಾರದ ಸುತ್ತ ನೆರೆದು ಈಗಿನ ತೂಗಾಡುವ ಸಂಸತ್ತನ್ನು ಜನತೆಯ ಒಂದು ದೊಡ್ಡ ವಿಜಯವಾಗಿ ಮಾರ್ಪಡಿಸುವುದು ಎಲ್ಲರ ಕರ್ತವ್ಯ.

ಸರ್ಕಾರದ ಮುಂದಿರುವ ತಕ್ಷಣದ ಕರ್ತವ್ಯಗಳು :

ಎಲ್ಲಾ ವಿವಾದಾತ್ಮಕ ಪ್ರಶ್ನೆಗಳನ್ನು ವಿಶೇಷವಾಗಿ ರಾಮಜನ್ಮಭೂಮಿ ಪ್ರಶ್ನೆ ಪಂಜಾಬ್, ಜಮ್ಮು-ಕಾಶ್ಮೀರ ಸಮಸ್ಯೆಗಳು ಇವನ್ನೆಲ್ಲಾ ಸರ್ವಸಮ್ಮತಿ ರೂಪಿಸಿ ಎದುರಿಸುವುದು ಅತ್ಯಗತ್ಯ. ರಾಷ್ಟ್ರೀಯ ರಂಗ ಸರ್ಕಾರದ ಜನಸಮೂಹಗಳ ಮನಸ್ಸು ಸೆಳೆಯಬಹುದಾದ. ಕೋಮು ಪ್ರಶ್ನೆಗಳಿಂದ ಅವರ ಗಮನ ತಿರುಗಿಸಬಹುದಾದ ಕೆಲವು ಪರಿಹಾರ ಕ್ರಮಗಳನ್ನು ಮುಂದಿಡಬೇಕು. ಬೆಲೆಯೇರಿಕೆಯ ಪ್ರಶ್ನೆಯನ್ನು ಯಶಸ್ವಿಯಾಗಿ ಎದುರಿಸಿದರೆ ಅದರಿಂದ ರಾಷ್ಟ್ರೀಯ ರಂಗ ಸರ್ಕಾರದ ಪ್ರತಿಷ್ಠೆ ಸ್ಥಾಪಿಸುವುದಕ್ಕೆ, ಜಾತ್ಯಾತೀತ ಶಕ್ತಿಗಳನ್ನು ಬಲಪಡಿಸುವುದಕ್ಕೆ ಬಹಳ ನೆರವಾಗಬಹುದು. ಇದಲ್ಲದೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಅದರಲ್ಲಿ ಸಾಮೂಹಿಕ ಸಂಘಟನೆಗಳು ಪಾತ್ರ ವಹಿಸುವಂತೆ ಅವಕಾಶ ಕಲ್ಪಿಸುವುದರ ಮೂಲಕ ಸುಧಾರಿಸುವುದು. ಹಳ್ಳಿ ಗಳಲ್ಲಿ ಪೋಲೀಸ್ ಅತ್ಯಾಚಾರಗಳನ್ನು ನಿಲ್ಲಿಸುವುದು. ಮತ್ತು ಪಂಚಾಯತ್‌ಗಳ ಪರಿಣಾಮಕಾರಿ ನಿರ್ವಹಣೆ ಈ ಹೊಸ ಕ್ರಮಗಳು ಸರ್ಕಾರದ ಪ್ರತಿಷ್ಠೆ ಬಲಪಡಿಸುವುದಕ್ಕೆ, ಬಹಳ - ನೆರವು ನೀಡಬಲ್ಲವು. ಯಾವುದೇ ಪ್ರತಿಗಾಮಿ, ಮೂಲಭೂತವಾದಿ ಬೇಡಿಕೆಗಳಿಗೆ ರಿಯಾಯಿತಿ ತೋರದೆ ಅಲ್ಪಸಂಖ್ಯಾತ ಜನ ಸಮೂಹಗಳ ವಿಶ್ವಾಸ ಹೆಚ್ಚಿಸುವ ಕೆಲವು ಗವನ ಸೆಳೆಯುವ ಕ್ರಮಗಳು ಈ ಜನ ಸಮೂಹವನ್ನು ಜಾತ್ಯಾತೀತ, ಪ್ರಜಾ ಸತ್ತಾತ್ಮಕ ಪಕ್ಷಗಳತ್ತ ತರಲು ಸಹಾಯಕವಾಗಬಲ್ಲವು. ಇತರ ಅಗತ್ಯ ಕ್ರಮಗಳೆಂದರೆ - ಭ್ರಷ್ಟಾಚಾರ ತೊಡೆದು ಹಾಕಲು ಕ್ರಮ, ಕೇಂದ್ರ ರಾಜ್ಯ ಸಂಬಂಧಗಳ ಪುನರ್ರಚನೆ, ಸರ್ಕಾರಿಯಾ ಆಯೋಗದ ವರದಿಯ ಅನುಷ್ಠಾನ ಮತ್ತು ಅಂತರ ರಾಜ್ಯ ಮಂಡಳಿ ರಚನೆ, ಸಂಸತ್ತು, ನ್ಯಾಯ... ಸಿ.ಎ.ಜಿ. ಚುನಾವಣಾ ಆಯೋ... ದಂತಹ ಪ್ರಜಾಸತ್ತಾತ್ಮಕ ಹಾ... ಸ್ವತಂತ್ರ ಸಂಸ್ಥೆಗಳನ್ನು ಬಲ... ಸುವುದು. ಪ್ರಜಾಪ್ರಭುತ್ವ ಹಕ್ಕು... ವಿಸ್ತರಣೆ ಮತ್ತು ಅಧಿಕೃತ ಸಾಮೂ... ಮಾಧ್ಯಮದ ಮೇಲೆ ಪ್ರಜಾಸತ್ತಾ... ಹತೋಟಿ.

> ...ಅದೇ ವೇಳೆಗೆ ಕಾಂಗ್ರೆಸ್ (ಐ) ಹೇರಿದ ದಾರಿದ್ರ್ಯ ಮತ್ತು ವಿಘಟನೆಯ ದೊಡ್ಡ ಅಪಾಯದ ಹಿನ್ನೆಲೆಯಲ್ಲಿ ಮತದಾರರ ತೀರ್ಪು ನಿರ್ಣಾಯಕವಾಗಬೇಕಿತ್ತು. ಕಾಂಗ್ರೆಸ್ (ಐ) ವಿರುದ್ಧ ಹೋರಾಟದ ನೇತೃತ್ವವಹಿಸಿದ್ದ ಜಾತ್ಯತೀತ ಶಕ್ತಿಗಳಿಗೆ, ಪಕ್ಷಗಳಿಗೆ ಬಹುಮತ ನೀಡುವ ನಿರ್ಣಾಯಕ ತೀರ್ಪಿನ ಅಗತ್ಯವಿತ್ತು.

ಪ್ರಧಾನ ಮಂತ್ರಿ ವಿ.ಪಿ.ಸಿಂಗ್ ... ವನ್ನುದ್ದೇಶಿಸಿ ಮಾಡಿದ ತನ್ನ ರೇಡಿಯ... ಭಾಷಣದಲ್ಲಿ ಹಾಗೂ ನಂತರದ ಹೇ... ಗಳಲ್ಲಿ ಕೊಟ್ಟ ಭರವಸೆಯನ್ನು ಕೇ... ಸಮಿತಿ ಸ್ವಾಗತಿಸುತ್ತಾ ರಾಷ್ಟ್ರೀಯ ಐಕ್ಯ... ಸಂಬಂಧಪಟ್ಟ ಸೂಕ್ಷ್ಮ ಹಾಗೂ ಮಹ... ಪ್ರಶ್ನೆಯನ್ನು ಒಂದು ಸರ್ವ ಸ... ರೂಪಿಸಿ ಪರಿಹರಿಸುವ ಹೊಸ ಸರಕಾ... ನಿರ್ಧಾರವನ್ನು ಅದು ವಿಶೇಷ... ಗಮನಿಸಿದೆ. 'ನಮ್ಮ ಸರಕಾರ ಪಂಜಾ... ಮತ್ತು ಜಮ್ಮು ಕಾಶ್ಮೀರ ಸಮಸ್ಯೆಯ... ರಾಮಜನ್ಮಭೂಮಿ ವಿವಾದವನ್ನು ಒ... ಸರ್ವಸಮ್ಮತಿ ಹಾಗೂ ಹೊಂದಾ... ಮೂಲಕ ಪರಿಹರಿಸಲು ಯತ್ನಿಸು... ವಿರೋಧ ಪಕ್ಷಗಳನ್ನು ಬಹಿರಂಗವಾಗಿ... ವಿಶ್ವಾಸಕ್ಕೆ ತೆಗೆದುಕೊಳ್ಳಲಾಗುವು... ಎಂಬ ವಿ.ಪಿ.ಸಿಂಗ್ ರವರ ಹೇಳಿಕೆಯ... ಕೇಂದ್ರ ಸಮಿತಿ ವಿಶೇಷವಾಗಿ ಸ್ವಾಗತಿಸಿದೆ.

ಪ್ರಧಾನ ಮಂತ್ರಿಗಳು ಅಲ್ಪಸಂ... ತರಿಗೆ ನಿರ್ಭಯವಾಗಿ ಹಾಗೂ ದೇ... ಪ್ರಗತಿಯಲ್ಲಿ ಸಮಾನ ಪಾಲುದಾರ... ಬಾಳುವ ಭರವಸೆ ನೀಡಿರುವುದ... ಕೇಂದ್ರ ಸಮಿತಿ ಮೆಚ್ಚಿಕೊಂಡಿದೆ. ಬಹ...

> ಕಾಂಗ್ರೆಸ್ (ಐ) ನ ದೇ... ವಿರೋಧಿ ಧೋರಣೆಗಳು ಹೇರಿ... ಸಂಕಷ್ಟಗಳ ಸನ್ನಿವೇಶದಲ್ಲಿ ಆಂಧ್ರ, ಕರ್ನಾಟಕದ ಸರಕಾರಗಳು ಕಾರ್ಯನಿರ್ವಹಿಸಬೇಕಾಗಿತ್ತು. ಆದರೆ ಪಶ್ಚಿಮ ಬಂಗಾಳದಂ... ಸತತವಾಗಿ ಜನ ಸಮೂಹಗ... ವಿಶ್ವಾಸಗಳ ಜನಸಮೂಹವನ... ವಿಶ್ವಾಸವನ್ನು ಬಲಗೊಳಿಸು... ತುರ್ತು ಅಗತ್ಯವನ್ನು ಮ... ಗಾಣಲಿಲ್ಲ.

ಬಹಳ ವರ್ಷಗಳ ನಂತರ ಮೊದಲ ಬಾ... ಅಲ್ಪಸಂಖ್ಯಾತರಿಗೆ ಸುಭದ್ರತೆ ಮಾತ್ರವ... ಸಮಾನ ಪಾಲುದಾರರ ಸ್ಥಾನಮಾನ... ಭರವಸೆ ನೀಡಲಾಗುತ್ತಿದೆ. ಇದರ ಮೊದ... ಬೆಲೆಯೇರಿಕೆಯ ವಿರುದ್ಧ ಪರಿಣಾ... ಕಾರಿ ಕ್ರಮಗಳ ಬಗ್ಗೆ ಪ್ರಧಾನ ಮಂ... ಜನತೆಗೆ ಭರವಸೆ ನೀಡಿದ್ದರು. ... ಪ್ರಶ್ನೆಯನ್ನು ಅತ್ಯಂತ ಆದ್ಯತೆ ನೀ... ಎದುರಿಸಲಾಗುವುದು ಎಂದಿದ್ದರು.

ವಿದೇಶಾಂಗ ನೀತಿ:

ಎಲ್ಲರಿಗೂ ತಿಳಿದಿರುವಂತೆ ಚುನಾವ... ಹೋರಾಟ ಬಹುಪಾಲು ಆಂತ... ಪ್ರಶ್ನೆಗಳ ಮೇಲೆಯೇ ನಡೆಯಿತು... ದೇಶದ ವಿದೇಶಾಂಗ ನೀತಿಯ ಪ್ರಸ್ತಾ... ವಾದದ್ದು ಕಡಿಮೆ. ಸಿ.ಪಿ.ಐ. (ಎಂ) ಮ... ಎಡ ಪಕ್ಷಗಳು ಮಾತ್ರವೇ ದೇಶ... ಅಲಿಪ್ತ ವಿದೇಶಾಂಗ ನೀತಿಯ... ಮಹತ್ವವನ್ನು ಒತ್ತಿ ಹೇಳಿದ್ದವು. ಪ್ರಧಾ... ಮಂತ್ರಿಗಳು ತನ್ನ ರೇಡಿಯೋ ಭಾಷಣದ... ಅಲಿಪ್ತ ವಿದೇಶಾಂಗ ನೀತಿಯ ಮಹ... ವನ್ನು ಒತ್ತಿ ಹೇಳಿದ್ದಾರೆ

- "ರಾಷ್ಟ್ರೀಯ ಬದ್ಧತೆಯನುಸಾರವಾ... ನಮ್ಮ ಅಲಿಪ್ತ ನೀತಿ ರೂಪುಗೊಂಡಿ... ...ನಾವು ಶಾಂತಿ, ನಿಶ್ಶಸ್ತ್ರೀಕರಣ ಹಾಗ... ಅಭಿವೃದ್ಧಿಗಾಗಿ ಹೋರಾಟ ಮುಂದುವ...

ಪುಟ 2 ಕ...

Printed and published by P.Ramachandra Rao on behalf of Communist party of India (Marxist), Karnataka State Committee L-56, K.V.Temple Street, Sultanpet, Bangalore - 560 053. Phone No. 75331. Editor: P.RAMACHANDRA RAO Managerial Office: C/o Kriya Prakashana, Shobha Lodge Complex, 5th main Road, Gandhinagar, Bangalore - 560 009